UNIVERSAL LIBRARY
OU_198451
UNIVERSAL LIBRARY

198451

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೨೨

# ಶಿಶುವಿಹಾರಗಳು

ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೧

ಪ್ರಥಮ ಮುದ್ರಣ—೧೫೦೫ ಪ್ರತಿಗಳು
೨೭-೧-೧೯೪೧

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸಲರವರಾದ ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆಮಾಡಿದರು. ಅವುಗಳಲ್ಲಿ ವಿಶೇಷವಾದವು ಇವೆರಡು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ವಿಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದಲೂ ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಅಚ್ಚುಹಾಕಿಸಿದೆ; ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ಇಡಿಸಲಾಗುತ್ತಿದೆ. ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿ ಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾಜ ವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇರಿದ ದೊಡ್ಡ ಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳಿಂ ದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ: ಒಂದೆರಡು ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು ಉಪನ್ಯಾಸಗಳನ್ನು ಹೇಳುವ ಯೋಜನೆ. ಅದರಿಂದ ಆ ಊರುಗಳ ಜನರಿಗೆ ಅನಲ್ಪಕಾಲ ಎಡೆಬಿಡದೆ ಜ್ಞಾನಬೋಧೆ ಸಿಕ್ಕುವುದು. ಪ್ರತ್ಯಕ್ಷ ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ.

ಆಳಿದ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು ಪವಿತ್ರ ಕರ್ತವ್ಯಗಳನ್ನು ನೇಮಿಸಿದರಷ್ಟೆ: ಸುಲಭ ಸಮಂಜಸ ಕನ್ನಡದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತಮ ಬಗೆಯ ಸಂಸ್ಕೃತಿಯ ಪ್ರಸಾರ. ಆ ಎರಡು ಕರ್ತವ್ಯಗಳನ್ನೂ ಈ ಮಾರ್ಗವಾಗಿ ಒಂದೇ ಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸ ಗಳನ್ನು ಕೊಟ್ಟು, ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ.

ವಿಶ್ವವಿದ್ಯಾನಿಲಯ, ಮೈಸೂರು,<br>೧೫—೮—೧೯೪೦.

**ಎನ್. ಎಸ್. ಸುಬ್ಬರಾವ್.**

# ಮೊದಲ ಮಾತು

ಕಳೆದ ವರ್ಷ ಮುಂಡ್ಯದಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಪರವಾಗಿ ನಾನು ಕೊಟ್ಟ ಉಪನ್ಯಾಸಗಳನ್ನು ವಿಸ್ತರಿಸಿ ಈಗ ಈ ಪುಸ್ತಕರೂಪದಲ್ಲಿ ಪ್ರಕಟಿಸಿದೆ. ಚಿಕ್ಕಮಕ್ಕಳ ಶಿಕ್ಷಣದ ಪ್ರಾಮುಖ್ಯ, ಅದರ ಕ್ರಮ, ಅದಕ್ಕೆ ಮುಂದುವರಿದ ದೇಶಗಳು ಕೊಟ್ಟಿರುವ ಪ್ರೋತ್ಸಾಹ ಇವುಗಳನ್ನು ಜನಸಾಮಾನ್ಯರಿಗೆ ಪರಿಚಯಮಾಡಿಕೊಟ್ಟು ಈ ವಿಷಯದಲ್ಲಿ ಅವರ ಆಸಕ್ತಿಯನ್ನು ಹೆಚ್ಚಿಸಿ, ಶಿಶುವಿಹಾರಗಳ ಸ್ಥಾಪನೆಗೂ ಅಭಿವೃದ್ಧಿಗೂ ಅವರು ಹೆಚ್ಚು ಉತ್ತೇಜನ ಕೊಡುವಂತೆ ಪ್ರೇರಿಸುವುದೇ ನನ್ನ ಈ ಬರವಣಿಗೆಯ ಉದ್ದೇಶ.


ಈ ಪುಸ್ತಕವನ್ನು ಬರೆಯಲು ಪ್ರೋತ್ಸಾಹಿಸಿ ಇದರ ಮೂಲಪ್ರತಿಯನ್ನು ಪರಿಷ್ಕರಿಸಿ ಅನೇಕ ಅಮೂಲ್ಯವಾದ ಸಲಹೆಗಳನ್ನಿತ್ತು ನೆರವಾದ ನನ್ನ ಮಿತ್ರರಾದ ಶ್ರೀಮಾನ್ ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೂ ಶ್ರೀಮಾನ್ ಜಿ. ಹನುಮಂತರಾಯರಿಗೂ ನಾನು ಚಿರಋಣಿ. ಅಲ್ಲದೆ ಶಿಶುವಿಹಾರಗಳ ಆಟಪಾಟಗಳನ್ನೂ ಕೆಲಸಕಾರ್ಯಗಳನ್ನೂ ಉದಾಹರಿಸಲು ಅನುಕೂಲವಾದ ಚಿತ್ರಗಳನ್ನು ಕೊಟ್ಟ ಡಾಕ್ಟರ್ ಎಂ. ವಿ. ಗೋಪಾಲಸ್ವಾಮಿಯವರಿಗೂ ಶ್ರೀಮಾನ್ ಬಿ. ಕುಪ್ಪುಸ್ವಾಮಿಯವರಿಗೂ ನಾನು ಕೃತಜ್ಞನಾಗಿದ್ದೇನೆ. ಕಡೆಯದಾಗಿ, ಇದನ್ನು ಪ್ರಕಟಿಸಿದ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ಸಂಪಾದಕೀಯ ಮಂಡಲಿಯವರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

ಮಹಾರಾಜಾ ಕಾಲೇಜು,
ಡಿಸೆಂಬರ್ ೩, ೧೯೪೦.

**ಸಿ. ರಂಗಾಚಾರ್.**

# ವಿಷಯಸೂಚಿಕೆ


೧. ಮೊದಲಿನ ಆರುವರ್ಷಗಳ ಮಹತ್ವ ....... ೧
೨. ಶಿಶುವಿಹಾರಗಳ ಬೆಳವಣಿಗೆ ....... ೮
೩. ಕೆಲವು ತಪ್ಪು ಅಭಿಪ್ರಾಯಗಳು ....... ೧೪
೪. ಶಿಶುವಿಹಾರದ ಕೆಲಸಗಳು ....... ೧೯
೫. ಅಲ್ಲಿಯ ಶಿಕ್ಷಣ ....... ೩೩
೬. ಇತರ ಪ್ರಯೋಜನಗಳು ....... ೫೦
೭. ನಮ್ಮ ದೇಶದ ಶಿಶುವಿಹಾರಗಳು ....... ೫೬
೮. ಉಪಸಂಹಾರ ....... ೬೩




**ಶಿಶುವಿಹಾರದ ಒಂದು ಮಾದರಿಯ ನಕ್ಷೆ**

# ಶಿಶುವಿಹಾರಗಳು

## ೧. ಮೊದಲಿನ ಆರು ವರ್ಷಗಳ ಮಹತ್ವ

ಶಿಶುವಿಹಾರಗಳ ವಿಚಾರವನ್ನು ಪ್ರಸ್ತಾವಿಸುವುದಕ್ಕೆ ಮೊದಲು 'ವಿದ್ಯಾಭ್ಯಾಸ' ವೆಂದರೇನು ಎಂಬುದನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವುದು ಅಗತ್ಯ. ಈಚೆಗೆ ಪ್ರಪಂಚದ ಎಲ್ಲಾ ಭಾಗಗಳಲ್ಲೂ ವಿದ್ಯೆ ವಿದ್ಯಾಭ್ಯಾಸಗಳ ಅರ್ಥವು ಬಹಳಮಟ್ಟಿಗೆ ಬದಲಾವಣೆಹೊಂದುತ್ತಿದೆ. ವಿದ್ಯಾಭ್ಯಾಸದ ಧ್ಯೇಯವನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುತ್ತಾರೆ.

ಸಾಮಾನ್ಯವಾಗಿ ವಿದ್ಯಾಭ್ಯಾಸವೆಂದರೆ ಓದು ಬರಹ ಕಲಿಯುವುದು, ಯಾವುದಾದರೂ ಒಂದು ಕೆಲಸದಲ್ಲಿ ಕುಶಲತೆ ಪಡೆಯುವುದು, ಇಲ್ಲವೆ ವಿಷಯಗಳನ್ನು ಸಂಗ್ರಹಿಸುವುದು ಎಂದು ಜನರು ತಿಳಿದುಕೊಂಡಿರುತ್ತಾರೆ. 'ನಿಮ್ಮ ಮಕ್ಕಳನ್ನು ಏತಕ್ಕೆ ಶಾಲೆಗೆ ಕಳುಹಿಸುತ್ತೀರಿ?' ಎಂಬ ಪ್ರಶ್ನೆಗೆ ಪೋಷಕರು ಕೊಡುವ ಉತ್ತರದಿಂದ ಈ ಅಭಿಪ್ರಾಯವು ವ್ಯಕ್ತವಾಗುತ್ತದೆ. ದಾಕ್ಷಿಣ್ಯ ಅಥವಾ ಬಿಂಕದಿಂದ ಮಾತನಾಡಬಹುದಾದ ಕೆಲವರನ್ನು ಬಿಟ್ಟರೆ ಇತರರು ಈ ಪ್ರಶ್ನೆಗೆ 'ಏನಾದರೂ ಒಂದೆರಡು ಅಕ್ಷರಗಳನ್ನು ಕಲಿತು, ಹೊಟ್ಟೆಪಾಡಿಗೆ ಅನುಕೂಲವಾಗಲಿ' ಎಂದು ಉತ್ತರಕೊಡುತ್ತಾರೆ. ಇದನ್ನು ಪರಿಶೀಲಿಸಿದರೆ 'ಜನರು ತಮ್ಮ ಕಸಬುಗಳನ್ನು ಬುದ್ಧಿವಂತಿಕೆಯಿಂದ ಅವಲಂಬಿಸಿ, ಅಭಿವೃದ್ಧಿಹೊಂದಿ ಜೀವನೋಪಾಯ ಸಂಪಾದನೆಗೆ ಅನುಕೂಲವಾಗಲು ಸಹಕಾರಿಯಾಗುವುದೇ ವಿದ್ಯೆ' ಎಂದು ತಿಳಿಯುತ್ತದೆ.

ವಿದ್ಯಾಭ್ಯಾಸದ ಈ ಧ್ಯೇಯವು ಸ್ವಲ್ಪಮಟ್ಟಿಗೆ ಸರಿ ಎಂಬುದು ಎಲ್ಲರೂ ಒಪ್ಪತಕ್ಕ ವಿಷಯ. ಆದರೆ ಈ ಗುರಿಯನ್ನೇ ಮುಖ್ಯ ವಾಗಿಟ್ಟುಕೊಂಡರೆ ವಿದ್ಯಾಭ್ಯಾಸವನ್ನು ಬಹಳ ಸಂಕುಚಿತ ದೃಷ್ಟಿಯಿಂದ ನೋಡಿದ ಹಾಗಾಗುತ್ತದೆ. ಅದು ನಿಜವಾದ ಮತ್ತು ಪೂರ್ಣವಾದ ವಿದ್ಯೆಯಾಗುವುದಿಲ್ಲ. ಉದಾಹರಣೆಗಾಗಿ: 'ಜೀವನೋಪಾಯ ಸಂಪಾದನೆಯೇ ಮುಖ್ಯ ಗುರಿಯಾದರೆ, ಅದಕ್ಕೆ ಹಸ್ತಕೌಶಲವೂ, ವಿಷಯಜ್ಞಾನವೂ, ಅಕ್ಷರಜ್ಞಾನವೂ ಅಗತ್ಯ. ಆದರೆ ವಿದ್ಯೆಯು ಕೇವಲ ಅಕ್ಷರಜ್ಞಾನವಲ್ಲ; ವಿಷಯ ಜ್ಞಾನವೂ ಅಲ್ಲ. ಓದುವುದು, ಬರೆಯುವುದು, ಲೆಕ್ಕಮಾಡು ವುದು—ಇವು ವಿದ್ಯಾಭ್ಯಾಸದ ಮೊದಲನೆಯ ಮೆಟ್ಟಲಾದರೂ ಇವು ಮಾತ್ರವೇ ವಿದ್ಯೆಯಲ್ಲ. ಮನುಷ್ಯನ ಜೀವನದಲ್ಲಿ ಹಣ ಸಂಪಾದನೆಯೇ ಮುಖ್ಯವಲ್ಲ; ಸದ್ಭಾವನೆಗಳೂ, ಆದರ್ಶಗಳೂ ಆವಶ್ಯಕ. ಅಂದರೆ ಮಾನವನಿಗೆ ನಯ, ನೀತಿ, ನಾಗರಿಕ ಗುಣಗಳು, (ಸದ್ಭಾವನೆಗಳು, ಧಾರ್ಮಿಕಬುದ್ಧಿ, ಆದರ್ಶಗಳು) ಜನರೊಂದಿಗೆ ವರ್ತಿಸುವ ರೀತಿ, ವಿರಾಮಕಾಲವನ್ನು ಉಪ ಯೋಗಿಸುವ ಕ್ರಮ—ಇವುಗಳೆಲ್ಲಾ ವಿದ್ಯೆಯಿಂದ ಲಭಿಸಬೇಕು. ಇಷ್ಟಾದರೂ ವಿದ್ಯೆಯು ಪೂರ್ಣತೆಯನ್ನು ಹೊಂದಿದ ಹಾಗೆ ಆಗುವುದಿಲ್ಲ. ಏಕೆಂದರೆ ಒಳ್ಳೆಯ ನಡತೆಯುಳ್ಳ ವ್ಯಕ್ತಿಯು ತನ್ನ ಜೀವನೋಪಾಯ ಸಂಪಾದನೆಯಿಂದ ಭಾಗ್ಯವಂತನಾ ಗಿದ್ದರೂ ಅಶಕ್ತನಾಗಿ ಯಾವಾಗಲೂ ಕಾಯಿಲೆಯಿಂದ ನರಳು ತ್ತಿದ್ದರೆ ಅವನು ನಿಜವಾದ ವಿದ್ಯಾವಂತ ಎಂದು ಹೇಳಲಾಗು ವುದಿಲ್ಲ. ಅಂದರೇನಾಯಿತು, ವಿದ್ಯೆಯು ಜನಸಾಮಾನ್ಯರನ್ನು ದೃಢಕಾಯರನ್ನಾಗಿ ಮಾಡಿ ಅವರು ಆರೋಗ್ಯದಿಂದ ಸಂತೋಷ ವಾಗಿ ಜೀವಿಸಲು ಅರ್ಹತೆಯನ್ನು ಕೊಟ್ಟು, ಅವರಿಗೆ ಪ್ರಪಂಚ

ವ್ಯವಹಾರಜ್ಞಾನ (ಯಾವುದು ಸರಿ, ಯಾವುದು ತಪ್ಪು ಎಂಬ ವಿವೇಕ) ವನ್ನು ಒದಗಿಸಿ ಅವರ ತಿಳಿವಳಿಕೆಯ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಿರಬೇಕು. ಇದೇ ಅಭಿಪ್ರಾಯವನ್ನೇ ಅಮೆರಿಕಾದೇಶದ ಆಧುನಿಕ ವಿದ್ಯಾಶಾಸ್ತ್ರಜ್ಞರಲ್ಲಿ ಶ್ರೇಷ್ಠರಾದ ಜಾನ್‌ಡ್ಯೂಯಿ ಅವರು "ವಿದ್ಯೆಯೇ ಜೀವನ" ಎಂಬುದಾಗಿ ಹೇಳಿರುತ್ತಾರೆ. ಅಂದರೆ ಜೀವನ ಕ್ರಮವನ್ನು ಎಲ್ಲಾಭಾಗಗಳಲ್ಲೂ ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗುವುದೇ ನಿಜವಾದ ವಿದ್ಯೆ. ಹೀಗೆ ವಿಶಾಲ ದೃಷ್ಟಿಯಿಂದ ನೋಡಿದರೆ ವಿದ್ಯೆಯು ಬರಿಯ ಹಸ್ತಕೌಶಲವೇ ಆಗಲಿ, ವಿಷಯ ಸಂಗ್ರಹವೇ ಆಗಲಿ ಅಲ್ಲ; ಅದು "ಬೆಳವಣಿಗೆ" (Education is Growth) ಈ ಬೆಳವಣಿಗೆಯು ಸ್ಥೂಲವಾಗಿ ಮೂರುವಿಧವಾಗಿದೆ. ಶಾರೀರಕ ಬೆಳವಣಿಗೆ, ನೀತಿ ನಡತೆಗಳ ಬೆಳವಣಿಗೆ ಮತ್ತು ಮಾನಸಿಕ ಬೆಳವಣಿಗೆ. ಒಟ್ಟಿನಲ್ಲಿ ಇಷ್ಟು ಹೇಳಬಹುದು. ಮಕ್ಕಳಲ್ಲಿ ಅಡಗಿರುವ ದೈಹಿಕ ಮಾನಸಿಕ ನೀತಿಶಕ್ತಿಗಳು ಬೆಳೆದು ಅಭಿವೃದ್ಧಿಹೊಂದಲು ಸರಿಯಾದ ಸನ್ನಿವೇಶಗಳನ್ನೂ ಅವಕಾಶಗಳನ್ನೂ ಕಲ್ಪಿಸುವುದೇ ವಿದ್ಯಾಭ್ಯಾಸದ ಗುರಿ.

ಈ ದೃಷ್ಟಿಯಿಂದ ಪರಿಶೀಲಿಸಿದರೆ ಶಿಕ್ಷಣವು ಪಾಠಶಾಲೆಗಳಲ್ಲಿ ಮಾತ್ರ ಪ್ರಾರಂಭವಾಗುವುದಿಲ್ಲ. ವಿದ್ಯಾಭ್ಯಾಸವು ನಾವು ಹುಟ್ಟುವಾಗಲೇ ಪ್ರಾರಂಭವಾಗಿ ನಮ್ಮ ಜೀವಮಾನದಲ್ಲೆಲ್ಲಾ ಮುಂದುವರಿಯುತ್ತದೆ. ಇಷ್ಟೇ ಅಲ್ಲ, ತಾಯಿಯ ಗರ್ಭದಲ್ಲಿರುವಾಗಲೇ ಮಕ್ಕಳ ಶಿಕ್ಷಣವು ಪ್ರಾರಂಭವಾಗುತ್ತದೆ ಎಂದೂ ಹೇಳುತ್ತಾರೆ. ಗರ್ಭವತಿಯಾದ ತಾಯಿಯು ಪುಷ್ಟಿಕರವಾದ ಆಹಾರವನ್ನು ಪಡೆದು, ನೀತಿ ಶಾಂತಿಗಳ ವಾತಾವರಣದಲ್ಲಿ ವಾಸಿಸುತ್ತಾ ಸಂತೋಷಚಿತ್ತಳಾಗಿ ಭಕ್ತಿಯುಕ್ತವಾದ

ಮಾತುಕತೆ, ಕಥಾಶ್ರವಣ, ಸಂಗೀತ ಮುಂತಾದುವುಗಳಿಂದ ಕಾಲಹರಣಮಾಡುತ್ತಿದ್ದಲ್ಲಿ ಹುಟ್ಟುವ ಮಗುವಿನಲ್ಲಿಯೂ ಅಂತಹ ಗುಣಗಳೇ ಇರುವುವೆಂದು ಶಾಸ್ತ್ರಜ್ಞರೂ ಅನುಭವ ಶಾಲಿಗಳೂ ಹೇಳುತ್ತಾರೆ. ಇದಕ್ಕೆ ಬೇಕಾದ ನಿದರ್ಶನಗಳು ನಮ್ಮ ಪುರಾಣಗಳಲ್ಲಿಯೂ ಅನೇಕವಾಗಿವೆ. ಒಂದೆರಡನ್ನು ಮಾತ್ರ ಉದಾಹರಣೆಗಾಗಿ ತೆಗೆದುಕೊಳ್ಳೋಣ.

೧. ಕಯಾದುದೇವಿಯು ಗರ್ಭವತಿಯಾಗಿದ್ದಾಗ ನಾರದ ಮಹರ್ಷಿಗಳಿಂದ ವಿಷ್ಣುಮಂತ್ರೋಪದೇಶವನ್ನು ಪಡೆದುದೇ ಪ್ರಹ್ಲಾದನು ಪರಮವಿಷ್ಣುಭಕ್ತನಾಗುವುದಕ್ಕೆ ಕಾರಣವಾಯಿತು ಎಂದು ಪ್ರತೀತಿ ಇದೆ.

೨. ಸುಭದ್ರೆಯು ಗರ್ಭವತಿಯಾಗಿದ್ದಾಗ ಒಂದು ದಿನ ಶ್ರೀಕೃಷ್ಣನು ಮುಂದೆ ಬರುವ ಮಹಾಭಾರತದ ಕಥೆಯನ್ನು ಹೇಳುತ್ತಾ ಪದ್ಮವ್ಯೂಹರಚನೆಯನ್ನು ವರ್ಣಿಸಿದನೆಂದೂ, ಇದರಿಂದಲೇ ಅಭಿಮನ್ಯುವು ಕೇವಲ ಚಿಕ್ಕವಯಸ್ಸಿನಲ್ಲಿಯೇ ಭಾರತ ಯುದ್ಧದಲ್ಲಿ ಪಾತ್ರವಹಿಸಿ, ಪದ್ಮವ್ಯೂಹವನ್ನು ಭೇದಿಸಿ 'ವೀರ ಅಭಿಮನ್ಯು' ಎಂಬ ಹೆಸರು ಪಡೆದನೆಂದೂ ಹೇಳುತ್ತಾರೆ.

೩. ಬುದ್ಧನ ವಿಷಯದಲ್ಲಿಯೂ ಈ ರೀತಿಯಾದ ಒಂದು ಕಥೆ ಇದೆ. ಅದರ ಪ್ರಕಾರ ಬುದ್ಧನ ತಾಯಿ ಮಾಯಾದೇವಿಯು ಗರ್ಭಿಣಿಯಾಗಿರುವಾಗ ಆಕೆಯು ಪ್ರಸವಿಸುವವರೆಗೂ ವನ ಪ್ರದೇಶಗಳ ಮಧ್ಯದಲ್ಲೇ ಇರಬೇಕೆಂಬ ಅಶರೀರವಾಣಿಯನ್ನು ಕೇಳುವಳು. ಅದೇ ರೀತಿಯಲ್ಲಿ ಆಕೆಯು ಮನೋಹರವಾದ ವನಗಳ ಮಧ್ಯೆ ವಾಸಿಸುತ್ತಾ ಗಿಡಮರಗಳ ಅಡಿಯಲ್ಲಿ ಚಿಕ್ಕ ಚಿಕ್ಕ ದೇವಾಲಯಗಳನ್ನು ನಿರ್ಮಿಸಿ ಸದಾ ಪೂಜಾಸಕ್ತಳಾಗಿಯೇ ಇದ್ದು ಬುದ್ಧದೇವನನ್ನು ಹೆರುವಳು. ಈ ಸನ್ನಿ

ವೇಶಪ್ರಭಾವವೇ ಬುದ್ಧನು ಚಿಕ್ಕವಯಸ್ಸಿನಲ್ಲಿಯೇ ವೈರಾಗ್ಯವನ್ನು ತಾಳಿ ಧ್ಯಾನಮಗ್ನನಾಗುವುದಕ್ಕೆ ಮಾರ್ಗವಾಯಿತೆಂದು ಹೇಳುತ್ತಾರೆ.

ಈ ಪುರಾಣಕಥೆಗಳ ವಿಷಯ ಹೇಗಾದರೂ ಇರಲಿ; ಇವನ್ನು ಕೆಲವರು ನಂಬಿ ಒಪ್ಪಬಹುದು; ಮತ್ತೆ ಕೆಲವರು ಒಪ್ಪದಿರಬಹುದು. ಆದರೆ ಮಕ್ಕಳು ಹುಟ್ಟಿದ ಕ್ಷಣದಿಂದ ಅವುಗಳ ಬೆಳವಣಿಗೆಯು ಪ್ರಾರಂಭವಾಗುತ್ತದೆ ಎಂಬುದು ನಿರ್ವಿವಾದವಾದ ವಿಷಯ. ಶಾರೀರಕ ಬೆಳವಣಿಗೆ ಒಂದೇ ಅಲ್ಲ, ಮಾನಸಿಕ ಮತ್ತು ನಡತೆಯ ಬೆಳವಣಿಗೆಯೂ ಆಗಲೇ ಪ್ರಾರಂಭವಾಗುತ್ತದೆ. ಮಕ್ಕಳು ಹುಟ್ಟುವಾಗ ಅಳುವಿಕೆಯು ಅವು ಮಾತನಾಡಲು ಮಾಡುವ ಮೊದಲನೆಯ ಪ್ರಯತ್ನವೆಂದು ತತ್ವಶಾಸ್ತ್ರಜ್ಞರೂ, ಮನಶ್ಶಾಸ್ತ್ರಜ್ಞರೂ ಅಭಿಪ್ರಾಯಪಡುತ್ತಾರೆ.

ಹೀಗಂದಮೇಲೆ ಮಗುವಿನ ಮೊದಲಿನ ಪಾಠಶಾಲೆ ಮನೆ, ಮೊದಲನೆಯ ಉಪಾಧ್ಯಾಯರು ತಾಯಿತಂದೆಗಳು, ಮುಖ್ಯವಾಗಿ ಮೊದಲನೆಯ ವರ್ಷದಲ್ಲಿ ತಾಯಿಯೇ ಶಿಕ್ಷಕಳು ಎಂದು ಹೇಳಬೇಕು. ಅನಂತರ ಕೇವಲ ಚಿಕ್ಕವಯಸ್ಸಿನಲ್ಲಿ ಮಕ್ಕಳಿಗೆ ಮನೆಯೇ ಪ್ರಪಂಚ. ಇಂತಹ ಮನೆಯೆಂಬ ಪ್ರಪಂಚದಲ್ಲಿ ಮಕ್ಕಳು ಅನುಸರಿಸುವ ಅನೇಕ ಅಭ್ಯಾಸಗಳೂ, ಗುಣಗಳೂ, ನಡತೆಗಳೂ ಬೇರೂರಿ ಮುಂದೆ ಅವರು ದೊಡ್ಡವರಾದಮೇಲೂ ಅವೇ ಕಾಣಿಸಿಕೊಳ್ಳುವುವು. ಮೊದಲಿನ ಐದಾರು ವರ್ಷಗಳವರೆಗೂ ಮಕ್ಕಳಿಗೆ ದೊರೆಯುವ ಮನೆಯ ಶಿಕ್ಷಣ (Home Education)ವನ್ನು ತಳಹದಿಯನ್ನಾಗಿಟ್ಟುಕೊಂಡು ಮುಂದೆ ಪಾಠಶಾಲೆಯ ಉಪಾಧ್ಯಾಯನು ವಿದ್ಯೆಯೆಂಬ ಕಟ್ಟಡವನ್ನು ಕಟ್ಟಬೇಕು. ಹೀಗೆ ಕಟ್ಟಿದ ಕಟ್ಟಡವು ಭದ್ರವಾಗಿದ್ದು ಅದರಿಂದ

ತಕ್ಕ ಉಪಯೋಗವಾಗಬೇಕಾದರೆ ತಳಹದಿ ಸರಿಯಾಗಿರಬೇಕು. ಆದುದರಿಂದ ಮನುಷ್ಯನ ಜೀವಮಾನದಲ್ಲೆಲ್ಲಾ ಈ ಕಾಲವೇ ಅತ್ಯಮೂಲ್ಯವಾದುದು. ಮುಂದೆಂದೂ ಇಲ್ಲದಷ್ಟು ವೇಗವಾಗಿ ಮಕ್ಕಳು ಬೆಳೆಯುವ ಕಾಲವೇ ಇದು. ಈ ಕಾಲದಲ್ಲಿ ಸನ್ನಿವೇಶ ಪ್ರಾಬಲ್ಯ ಬಹಳ ಹೆಚ್ಚು. ಮಕ್ಕಳ ಶಿಕ್ಷಣವಿಷಯಗಳ ಸಂಶೋಧನೆಯಲ್ಲಿ ಅನೇಕವರ್ಷಗಳು ನಿರತರಾಗಿದ್ದು ತಮ್ಮ ಜೀವಮಾನವನ್ನೆಲ್ಲಾ ಮಕ್ಕಳ ಶಿಕ್ಷಣವನ್ನು ರೂಪಗೊಳಿಸುವುದರಲ್ಲಿಯೇ ಕಳೆದಿರುವ ಡಾಕ್ಟರ್ ಮಾಂಟಿಸೌರಿ ಅವರು ಮಕ್ಕಳ ಮೊದಲನೆಯ ಆರುವರ್ಷಗಳನ್ನು 'ಸೂಕ್ಷ್ಮಗ್ರಹಣಶಕ್ತಿಕಾಲ' (Sensitive Period) ಎಂದು ಸಿದ್ಧಾಂತಮಾಡಿರುತ್ತಾರೆ. ಈ ಕಾಲದಲ್ಲಿ ಗ್ರಹಿಸಿದ ವಿಷಯಗಳು ಅಚ್ಚಳಿಯದೆ ನಿಲ್ಲುತ್ತವೆ ಎಂದೂ ಹೇಳಿದ್ದಾರೆ. ಈ ಸೂಕ್ಷ್ಮಗ್ರಹಣಶಕ್ತಿಕಾಲದಲ್ಲಿ ಮಗುವು ತನಗೆ ಮುಂದೆ ಬೇಕಾಗುವ ವಿದ್ಯಾಸಲಕರಣೆಗಳೆಲ್ಲವನ್ನೂ ತನ್ನ ಸುತ್ತಮುತ್ತಲಿನ ಸನ್ನಿವೇಶಗಳಿಂದಲೂ ತನ್ನ ಚಟುವಟಿಕೆಗಳಿಂದಲೂ ಗ್ರಹಿಸುತ್ತದೆ. ಹೀಗೆ ಗ್ರಹಿಸುವುದು ಯಾರ ಪ್ರೇರಣೆಯಿಂದಲೂ ಅಲ್ಲ; ತನ್ನ ಮನಸ್ಸಿನ ಪ್ರೇರಣೆಯಿಂದಲೇ (Inner Urge). ಈ ಕಾಲವೇ ಮಕ್ಕಳ ಭವಿಷ್ಯದ ಸಿದ್ಧತೆಯ ಕಾಲ. ಈ ಸಿದ್ಧತೆಯು ಎಷ್ಟೆಷ್ಟು ಉತ್ತಮವಾದುದೂ ಪೂರ್ಣವಾದುದೂ ಆಗಿರುವುದೋ ಮುಂದಿನ ಬೆಳವಣಿಗೆಯೂ ಜೀವನವೂ ಅಷ್ಟು ತೃಪ್ತಿಕರವಾಗುವುವು.

ಅಲ್ಲದೆ ಈ ಚಿಕ್ಕವಯಸ್ಸಿನಲ್ಲಿ ಮಕ್ಕಳು ಕಾಯಿಲೆಕಸಾಲೆಗಳಿಗೂ, ಸಾಂಕ್ರಾಮಿಕ ರೋಗಗಳಿಗೂ ಬಹಳ ಸುಲಭವಾಗಿ ತುತ್ತಾಗುವರು. ಏಕೆಂದರೆ ಇವುಗಳನ್ನು ಪ್ರತಿಭಟಿಸುವ ಶಕ್ತಿ ಅವರಿಗೆ ಇರುವುದಿಲ್ಲ. ಅನೇಕವೇಳೆ ಪ್ರಾರಂಭದಲ್ಲೇ ಸುಲಭ

ಚಿಕಿತ್ಸೆಯಿಂದ ಗುಣವಾಗತಕ್ಕ ರೋಗಗಳೇ ಅಲಕ್ಷ್ಯದಿಂದ ಮುಂದೆ ವಿಪರೀತವಾಗಿ ಪರಿಣಮಿಸುವುವು. ಚಿಕ್ಕಮಕ್ಕಳ ಬೆಳವಣಿಗೆಯ ವಿಷಯದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ಪ್ರಸಿದ್ಧಿ ಹೊಂದಿರುವ ಗೆಸೆಲ್ (Gessel) ಎಂಬ ಮನಶ್ಶಾಸ್ತ್ರಜ್ಞನು ಜೀವನದ ಮೊದಲಿನ ಆರುವರ್ಷಗಳ ವಿಷಯವಾಗಿ ಈರೀತಿ ಹೇಳಿರುತ್ತಾನೆ. "ಮಕ್ಕಳ ಶೈಶವಾವಸ್ಥೆಯಲ್ಲಿ ಅವರ ಮನಸ್ಸು ಶೀಲಶಕ್ತಿಗಳು ಬೆಳೆಯುವಷ್ಟು ತೀವ್ರವಾಗಿ ಇನ್ನೆಂದೆಂದಿಗೂ ಬೆಳೆಯಲಾರವು. ಮಾನಸಿಕಾರೋಗ್ಯದ ಅಡಿಗಲ್ಲನ್ನು ಹಾಕಲು ಸರಿಯಾದ ಕಾಲ ಇದಕ್ಕಿಂತ ಬೇರೊಂದಿಲ್ಲ. ಅವರ ದೇಹ ಬಲ ಅವರ ಉಳಿವು—ಇವುಗಳ ದೃಷ್ಟಿಯಿಂದ ಮಾತ್ರವೇ ಶೈಶವವು ಮುಖ್ಯವಾದುದಲ್ಲ, ಅದು ಅವರ ಮನಸ್ಸಿನ ಆರೋಗ್ಯದ ದೃಷ್ಟಿಯಿಂದಲೂ ಬಹುಮಹತ್ವದ ಕಾಲ. ಮನಶ್ಶಾಸ್ತ್ರಪ್ರವೀಣನಾದ ವಾಟ್ಸನ್ನಿನ (Watson) ಈ ಕೆಳಗಿನ ಮಾತುಗಳಲ್ಲಿಯೂ ಈ ಅಭಿಪ್ರಾಯವೇ ವ್ಯಕ್ತವಾಗುತ್ತದೆ. "ಮಗುವಿಗೆ ಏಳು ವರ್ಷಗಳಾಗುವವರೆಗೂ ನನ್ನಲ್ಲಿ ಬಿಡಿ, ಆಮೇಲೆ ಅದು ಎಲ್ಲಾದರೂ ಇರಲಿ." ಅಲ್ಲದೆ ನಮ್ಮಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' 'ಮನುಜನಿಗೆ ಮಗು ತಂದೆ' (Child is the father of man) ಎಂಬ ನಾಣ್ನುಡಿಗಳಲ್ಲಿಯೂ ಇದೇ ಅಭಿಪ್ರಾಯವೇ ಅಡಕವಾಗಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಈ ಮೊದಲನೆಯ ಆರು ವರ್ಷಗಳು ಮಕ್ಕಳ ದೈಹಿಕ ಬೆಳವಣಿಗೆಯ ದೃಷ್ಟಿಯೊಂದರಿಂದಲೇ ಅಲ್ಲ, ಅವರ ಮಾನಸಿಕ ಮತ್ತು ನಡತೆಯ ಬೆಳವಣಿಗೆಯ ದೃಷ್ಟಿಯಿಂದಲೂ ಬಹಳ ಮಹತ್ತರವಾದುದು. ಆ ವೇಳೆಯಲ್ಲಿ ಮಕ್ಕಳ ವಿದ್ಯಾ

ಭ್ಯಾಸಕ್ಕೆ ಜವಾಬ್ದಾರರು ಯಾರು? ತಂದೆ ತಾಯಿಗಳೇ ಮನೆಯಲ್ಲಿಯೇ ಸಮರ್ಪಕವಾದ ಏರ್ಪಾಡು ಮಾಡಬಲ್ಲರೆ? ಇದು ಖಂಡಿತ ಸಾಧ್ಯವಿಲ್ಲ ಎಂಬುದು ಪಾಶ್ಚಾತ್ಯದೇಶಗಳ ಶಿಕ್ಷಣ ಶಾಸ್ತ್ರಜ್ಞರ ಅನುಭವದಲ್ಲಿ ಕಂಡು ಬಂದಿದೆ. ಇಂತಹ ಮುಖ್ಯ ಕಾಲದಲ್ಲಿ ಉತ್ತಮವಾದ ಸನ್ನಿವೇಶಗಳಿಂದ ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗಲು ಸ್ಥಾಪಿತವಾಗಿರುವ ಶಾಲೆಗಳೇ ಶಿಶುವಿಹಾರಗಳು. ಈ ಶಿಶುವಿಹಾರಗಳಲ್ಲಿ ಸಾಧಾರಣವಾಗಿ ಮೂರುವರ್ಷದಿಂದ ಆರು ವರ್ಷದೊಳಗಿರುವ (ಇಂಗ್ಲೆಂಡಿನಲ್ಲಿ ಮಾತ್ರ ಎರಡು ವರ್ಷದಿಂದ ಐದು ವರ್ಷದೊಳಗಿರುವ) ಮಕ್ಕಳಿಗೆ ಶಿಕ್ಷಣ ದೊರೆಯುತ್ತದೆ.

---

## ೨. ಶಿಶುವಿಹಾರಗಳ ಬೆಳವಣಿಗೆ

ಶಿಶುವಿಹಾರಗಳು ಮೊದಲು ಇಂಗ್ಲೆಂಡ್ ದೇಶದಲ್ಲಿ ಪ್ರಾರಂಭವಾದುವು ಎಂದು ಹೇಳಬಹುದು. ಯೂರೋಪಿನ ಇತರ ದೇಶಗಳ ವಿದ್ಯಾಧುರೀಣರು, ಅದರಲ್ಲೂ ಜರ್ಮನಿಯ ಫ್ರೊಬೆಲ್ (Frebel) ಎಂಬಾತನು ಮಕ್ಕಳ ಶಾಲೆಗಳ ಮತ್ತು ಅವರ ಶಿಕ್ಷಣದ ವಿಷಯದಲ್ಲಿ ಬಹಳ ಶ್ರೇಷ್ಠವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಇಂಗ್ಲೆಂಡ್ ದೇಶವು ಈ ಸಲಹೆಗಳನ್ನೂ ಅಭಿಪ್ರಾಯಗಳನ್ನೂ ಮೊದಲು ಕಾರ್ಯರೂಪಕ್ಕೆ ತಂದಿತು.

ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿಯೇ ಅಂದರೆ ೧೮೧೬ ನೆಯ ಇಸವಿಯಲ್ಲಿ ಇಂಗ್ಲೆಂಡಿನ ಮೊದಲನೆಯ ಶಿಶು

ವಿಹಾರವು ಸ್ಥಾಪಿತವಾಯಿತು. ರಾಬರ್ಟ್ ಓವನ್ (Robert Owen) ಎಂಬ ಕಾರ್ಖಾನೆಯ ಯಜಮಾನನೊಬ್ಬನು ಇದನ್ನು ಸ್ಥಾಪಿಸಿದನು. ನ್ಯೂ ಲಾಮಾರ್ಕ್ (New Lamark) ಎಂಬುದು ಈತನ ಸ್ಥಳ. ಈತನು ಬಂಡವಾಳಗಾರನಾದರೂ ವಿಶೇಷ ಧಾರ್ಮಿಕ ಬುದ್ಧಿಯಿಂದ, ಆ ಸುತ್ತುಮುತ್ತಲಿನ ಹತ್ತಿಗಿರಣಿಗಳಲ್ಲಿ ಕೆಲಸಮಾಡುವವರ ಮಕ್ಕಳ ಹೀನಸ್ಥಿತಿಯನ್ನು ಮನಗಂಡು ಅವರಿಗಾಗಿ ಒಂದು ಶಿಶುವಿಹಾರವನ್ನು ಏರ್ಪಡಿಸಿದನು. ಈ ಶಾಲೆಗೆ ೩ ವರ್ಷದಿಂದ ೫ ವರ್ಷದ ವರೆಗಿನ ಮಕ್ಕಳನ್ನು ಸೇರಿಸುತ್ತಿದ್ದರು. ತಾಯಂದಿರು ಕಾರ್ಖಾನೆಗಳಿಗೆ ದಿನಗೂಲಿಗೆ ಹೋಗುವಾಗ ತಮ್ಮ ಚಿಕ್ಕ ಮಕ್ಕಳನ್ನು ಈ ಶಿಶುವಿಹಾರದಲ್ಲಿ ಬಿಟ್ಟು ಹೋಗುತ್ತಿದ್ದರು. ಸಾಯಂಕಾಲ ಮನೆಗೆ ಹಿಂತಿರುಗುವಾಗ ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ತಾಯಿ ಬೆಳಗಿನಿಂದ ಸಾಯಂಕಾಲದವರೆಗೂ ಹೊಟ್ಟೆಪಾಡಿಗಾಗಿ ದುಡಿಯುತ್ತಿರುವಾಗ ಮಕ್ಕಳು ಜೇರೊಂದು ಸನ್ನಿವೇಶದಲ್ಲಿ ಇದ್ದುಕೊಂಡು, ಹೊತ್ತು ಹೊತ್ತಿಗೆ ಆಹಾರವನ್ನು ಪಡೆದು, ವಿಶ್ರಾಂತಿ ಹೊಂದಿ ತಮ್ಮ ವಯಸ್ಸಿನ ಇತರ ಮಕ್ಕಳೊಂದಿಗೆ ಆಟವಾಡುತ್ತಾ ಬೆಳೆಯುತ್ತಿದ್ದವು. ಹೀಗೆ ರಾಬರ್ಟ್ ಓವನ್ನನು ಮೊದಲನೆಯ ಶಿಶುವಿಹಾರವನ್ನು ಸ್ಥಾಪಿಸಿದುದೇ ಅಲ್ಲದೆ ಆ ಶಿಶುವಿಹಾರದಲ್ಲಿ ನಡೆಯುತ್ತಿದ್ದ ಕೆಲಸಗಳ ವಿವರವನ್ನೂ, ಅಂತಹ ಶಾಲೆಗಳ ವಿಶೇಷ ಆವಶ್ಯಕತೆಯನ್ನೂ ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಿದನು.

ಶಿಶುವಿಹಾರಗಳ ಸ್ಥಾಪನೆಗೆ ಕಾರಣಭೂತನಾದ ಓವನ್ನಿನ ಈ ಕೆಲಸವನ್ನು ನೋಡಿ ಅದರ ಪ್ರಭಾವದಿಂದ ಇಂಗ್ಲೆಂಡಿನ ಇತರ ಭಾಗಗಳ ಸಾರ್ವಜನಿಕರನೇಕರು ಶಿಶುವಿಹಾರಗಳನ್ನು

ಸ್ಥಾಪಿಸಲು ಪ್ರಾರಂಭಿಸಿದರು. ೧೮೨೦ ರಲ್ಲಿ ಜೋಸೆಫ್ ವಿಲ್ಸನ್ (Joseph Wilson) ಎಂಬಾತನು ಇಂಗ್ಲೆಂಡಿನ ಎರಡನೆಯ ಶಿಶುಶಾಲೆಯನ್ನು ಸ್ಪಿಟ್‌ಫೀಲ್ಡ್ಸನಲ್ಲಿ (Spit Fields) ಸ್ಥಾಪಿಸಿದನು. ಈ ಶಾಲೆಯೂ ಸಹ ಬಡವರ ಮಕ್ಕಳಿಗಾಗಿಯೇ ಸ್ಥಾಪಿಸಲ್ಪಟ್ಟಿತು. ಇದೇ ಕಾಲದಲ್ಲಿ ಡೇವಿಡ್ ಸ್ಟೌ (David Stow) ಎಂಬ ಮತ್ತೊಬ್ಬ ಧಾರ್ಮಿಕನು ಗ್ಲಾಸ್ಗೋದಲ್ಲಿ ಮತ್ತೊಂದು ಶಿಶುವಿಹಾರವನ್ನು ಸ್ಥಾಪಿಸಿದನು. ಹೀಗೆ ಸ್ಥಾಪಿತವಾದ ಶಿಶುಶಾಲೆಗಳಲ್ಲೆಲ್ಲಾ ಬಹಳ ಹೆಸರುವಾಸಿಯಾದುದು ಮಾರ್ಗರೆಟ್ ಮೆಕ್ಮಿಲನ್ ಎಂಬಾಕೆಯು ಲಂಡನ್ನಿನಲ್ಲಿ ತೀರ ಬಡವರು ವಾಸಿಸುವ ಈಸ್ಟ್‌ಎಂಡ್ ಎಂಬಲ್ಲಿ ಸ್ಥಾಪಿಸಿದ ಶಾಲೆ. ಈ ಶಿಶುವಿಹಾರದ ಸಮರ್ಪಕವಾದ ಕೆಲಸವೂ, ಶ್ರೇಷ್ಠ ಫಲಿತಾಂಶಗಳೂ ಜನಸಾಮಾನ್ಯರ ಮತ್ತು ಸರ್ಕಾರದ ದೃಷ್ಟಿಯನ್ನು ಈ ತರಹ ಶಾಲೆಗಳ ಕಡೆಗೆ ಎಳೆಯಲು ಸಹಕಾರಿಯಾದುವು. ಶಿಶುವಿಹಾರಗಳು ಜನಪ್ರಿಯವಾಗಲು ಪ್ರಾರಂಭವಾದುವು. ಒಟ್ಟಿನಲ್ಲಿ ಇಂಗ್ಲೆಂಡಿನ ಶಿಶುವಿಹಾರಗಳ ಬೆಳವಣಿಗೆಯನ್ನು ಪರೀಕ್ಷಿಸಿದರೆ, ಈ ಶಾಲೆಗಳು ಮೊಟ್ಟ ಮೊದಲು ಮುಖ್ಯವಾಗಿ ಬಡವರ ಮಕ್ಕಳ ಶಿಕ್ಷಣಕ್ಕಾಗಿ ಸ್ಥಾಪಿತವಾದುವೆಂದು ಹೇಳಬಹುದು.

ಇದೇ ಕಾಲದಲ್ಲಿ ಅಮೆರಿಕಾದೇಶದಲ್ಲಿಯೂ ಶಿಶುವಿಹಾರಗಳು ಸ್ಥಾಪಿತವಾಗಲು ಪ್ರಾರಂಭವಾದುವು. ಆದರೆ ಅಲ್ಲಿನ ಶಿಶುವಿಹಾರಗಳು ಬಡಜನರ ಮಕ್ಕಳಿಗಾಗಿ ಮಾತ್ರ ಸ್ಥಾಪಿತವಾಗಲಿಲ್ಲ. ಮಧ್ಯದರ್ಜೆಯ (Middle Class) ಜನರ ಮಕ್ಕಳನ್ನೂ ಅಲ್ಲಿನ ಶಿಶುಶಾಲೆಗಳಿಗೆ ಸೇರಿಸುತ್ತಿದ್ದರು. ಅಮೆರಿಕಾದಲ್ಲಿ ಶಿಶುವಿಹಾರಗಳ ಸ್ಥಾಪನೆಗೆ ಕಾರಣರಾದವರು ಮುಖ್ಯವಾಗಿ ಮನಶ್ಶಾಸ್ತ್ರ

ಜ್ಞರು. ಮಕ್ಕಳ ಸ್ವಭಾವವನ್ನೂ ಅವರನ್ನು ಹೇಗೆ ಉತ್ತಮ ರೀತಿಯಲ್ಲಿ ತರಪೇತುಮಾಡಬಹುದು ಎಂಬುದನ್ನೂ ಶಾಸ್ತ್ರರೀತಿಯಾಗಿ ತಿಳಿದುಕೊಳ್ಳಲು ಶಿಶುವಿಹಾರಗಳು ಅಗತ್ಯ ಎಂದು ಮನಶ್ಶಾಸ್ತ್ರಜ್ಞರು ಮಾಡಿದ ಪ್ರಚಾರದ ಫಲವಾಗಿ ಅನೇಕ ಶಿಶುವಿಹಾರಗಳು ಸಾರ್ವಜನಿಕರಿಂದ ಸ್ಥಾಪಿಸಲ್ಪಟ್ಟವು. ಮತ್ತೆ ಕೆಲವು ಶಿಶುವಿಹಾರಗಳು ವಿಶ್ವವಿದ್ಯಾನಿಲಯಗಳ ಟ್ರೇನಿಂಗ್ ಕಾಲೇಜುಗಳಿಗೆ ಸೇರಿದ ಹಾಗೆ ಸ್ಥಾಪಿತವಾದುವು. ಇದರಿಂದ ಮನಶ್ಶಾಸ್ತ್ರಜ್ಞರು ಮಕ್ಕಳ ಶಿಕ್ಷಣದ ವಿಷಯದಲ್ಲಿ ನಿರ್ದಿಷ್ಟವಾದ ಮತ್ತು ಶಾಸ್ತ್ರೀಯವಾದ ಸಲಹೆಗಳನ್ನು ಕೊಡಲು ಸಾಧ್ಯವಾಯಿತು. ಅವರು ಅನೇಕವರ್ಷಗಳ ಕಾಲ ಪ್ರಯೋಗಗಳನ್ನು ನಡೆಸಿ ಈ ತೀರ್ಮಾನಕ್ಕೆ ಬಂದಿದ್ದಾರೆ. ಎರಡು ವರ್ಷದಿಂದ ಆರು ವರ್ಷದವರೆಗಿನ ಮಕ್ಕಳ ಶಿಕ್ಷಣ ಸಮಸ್ಯೆಯು ಅತ್ಯಂತ ಗಹನವಾದುದು. ಮುಂದೆ ದೊಡ್ಡವರಾದಮೇಲೆ ಕಂಡುಬರುವ ಅನೇಕ ಮನೋಭಾವಗಳೂ, ನಡವಳಿಕೆಗಳೂ ಈ ವಯಸ್ಸಿನಲ್ಲಿ ಅಂಕುರಿಸುತ್ತವೆ. ಈ ಕಾಲದಲ್ಲಿ ಅವರ ಬೆಳವಣಿಗೆಗೆ ಅತ್ಯುತ್ತಮ ಸನ್ನಿವೇಶವಿರಬೇಕು. ಆದುದರಿಂದ ಶಿಶುವಿಹಾರಗಳು ಒಂದು ದೇಶದ ವಿದ್ಯಾಭ್ಯಾಸಕ್ರಮದಲ್ಲಿ ಅತ್ಯವಶ್ಯಕವಾದ ಸ್ಥಾನವನ್ನು ಪಡೆಯಬೇಕು. ಇದರ ಫಲವಾಗಿ, ಶಿಶುವಿಹಾರಗಳು ಹೆಚ್ಚು ಹೆಚ್ಚಾಗಿ ಸ್ಥಾಪಿತವಾಗಲು ಪ್ರಾರಂಭವಾದುವು.

ಶಿಶುವಿಹಾರಗಳು ಪ್ರಾಮುಖ್ಯತೆಗೆ ಬಂದು ಅವುಗಳ ಸಂಖ್ಯೆ ಬೆಳೆಯಲು ಮನಶ್ಶಾಸ್ತ್ರಜ್ಞರ ತೀರ್ಮಾನಗಳೇ ಅಲ್ಲದೆ ಮತ್ತೊಂದು ಕಾರಣವೂ ಒದಗಿತು. ಈ ವೇಳೆಗೆ ಸರಿಯಾಗಿ ಇಂಗ್ಲೆಂಡ್ ದೇಶದಲ್ಲಿ ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸದ ಶಿಸ್ತಿನ ಗುಣದೋಷಗಳನ್ನು ವಿಮರ್ಶೆಮಾಡಿ ಅದರ ವಿಷಯ

ವಾಗಿ ಕೆಲವು ವರದಿಗಳೂ ಹೊರಬಿದ್ದುವು. ಅವುಗಳಲ್ಲಿ ಪ್ರಾಥಮಿಕ ಶಾಲೆಗಳ ಗಣ್ಯವೈದ್ಯರ ಮತ್ತು ಶ್ರೇಷ್ಠ ಉಪಾಧ್ಯಾಯರ ಅನುಭವಕ್ಕೆ ಬಂದ ಕೆಲವು ಮುಖ್ಯ ವಿಷಯಗಳು ಅಡಕವಾಗಿವೆ. ಪ್ರಾಥಮಿಕ ವಿದ್ಯಾಭ್ಯಾಸದ ಪ್ರಯೋಜನವು ಹೆಚ್ಚಬೇಕಾದರೆ ಐದು ವರ್ಷಕ್ಕಿಂತ ಕಡಮೆ ವಯಸ್ಸಿನ ಮಕ್ಕಳಿಗೆ ಶಿಕ್ಷಣದ ಅನುಕೂಲಗಳನ್ನು ಕಲ್ಪಿಸಬೇಕು. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಶಿಕ್ಷಣದ ಅನುಕೂಲಗಳಿದ್ದರೆ ಅವರಲ್ಲಿ ಕಂಡು ಬರುವ ಅನೇಕ ರೋಗಗಳನ್ನು ತಪ್ಪಿಸಬಹುದು, ಅಲ್ಲದೆ ಅವರು ದೃಢಕಾಯರಾಗಿ ಬೆಳೆಯುವಂತೆ ಮಾಡಬಹುದು ಎಂಬುದು ವೈದ್ಯರ ಅಭಿಪ್ರಾಯ. ಶಿಶುವಿಹಾರಗಳಲ್ಲಿ ಶಿಕ್ಷಣಹೊಂದಿ ಪ್ರಾಥಮಿಕ ಶಾಲೆಗಳಿಗೆ ಬರುವ ಮಕ್ಕಳು ಸರ್ವತೋಮುಖವಾದ ಅಭಿವೃದ್ಧಿಯನ್ನು ಪಡೆಯುವರು ಎಂಬುದು ಉಪಾಧ್ಯಾಯರ ಅಭಿಪ್ರಾಯ.

ಮನಶ್ಶಾಸ್ತ್ರದ ಶೋಧನೆಗಳ ಪರಿಣಾಮವಾಗಿ ಬಡವರ ಮಕ್ಕಳಿಗೆಂದು ಪ್ರಾರಂಭವಾದ ಶಿಶುವಿಹಾರಗಳು ದೇಶದ ಮಕ್ಕಳಿಗೆಲ್ಲರಿಗೂ ಅಗತ್ಯ ಎಂಬ ಅಭಿಪ್ರಾಯವು ಇಂಗ್ಲೆಂಡ್ ಮತ್ತು ಅಮೆರಿಕಾದೇಶಗಳಲ್ಲಿಯೇ ಅಲ್ಲದೆ ವಿದ್ಯಾಭ್ಯಾಸದಲ್ಲಿ ಮುಂದುವರಿದ ಇತರ ದೇಶಗಳಲ್ಲಿಯೂ ಬಹು ಬೇಗ ಹರಡಿತು. ಇದರ ಫಲಿತಾಂಶವಾಗಿ ಇಪ್ಪತ್ತನೆಯ ಶತಮಾನದಲ್ಲಿ, ಅದರಲ್ಲಿಯೂ ೧೯೧೮ ರಿಂದ ಈಚೆಗೆ ಶಿಶುವಿಹಾರಗಳು ಬಹುವಾಗಿ ಸ್ಥಾಪಿತವಾಗುತ್ತಲಿವೆ. ಅನೇಕ ದೇಶಗಳು ಇದಕ್ಕಾಗಿಯೇ ಪ್ರತ್ಯೇಕ ಸಮಿತಿಗಳನ್ನು ಏರ್ಪಡಿಸಿ ವರದಿಗಳನ್ನು ಪ್ರಕಟಿಸಿವೆ. ಸಾರ್ವಜನಿಕರಿಂದಲೇ ಪ್ರಾರಂಭವಾದ ಅನೇಕ ಶಾಲೆಗಳು ಈಗ ಸರ್ಕಾರದಿಂದ ಮತ್ತು ಸ್ಥಳೀಯ ವಿದ್ಯಾ

ಇಲಾಖೆಯವರಿಂದ ದ್ರವ್ಯಸಹಾಯ (grant) ವನ್ನು ಪಡೆಯುತ್ತಿವೆ. ಅನೇಕ ಸ್ಥಳಗಳಲ್ಲಿ ಸ್ಥಳೀಯ ವಿದ್ಯಾಇಲಾಖೆಯವರೇ ಶಿಶುವಿಹಾರಗಳನ್ನು ಸ್ಥಾಪಿಸಿದ್ದಾರೆ. ವಿದ್ಯಾಇಲಾಖೆಯವರು ಶಿಶುವಿಹಾರಗಳ ಆವಶ್ಯಕತೆಯನ್ನು ಮನಗಂಡು ಅವುಗಳಿಗೆ ತಕ್ಕ ಏರ್ಪಾಡುಮಾಡಲು ಜವಾಬ್ದಾರಿವಹಿಸಿದ್ದಾರೆಂದು ಇದರಿಂದ ತಿಳಿಯಬರುತ್ತದೆ.

ಪಾಶ್ಚಾತ್ಯದೇಶಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ಎಷ್ಟರಮಟ್ಟಿಗೆ ಪ್ರಾಮುಖ್ಯ ದೊರೆತು ಅನುಕೂಲವಾಗಿದೆ. ಎಂಬುದನ್ನು ಈ ಕೆಳಗಿನ ಅಂಕಿಗಳಿಂದ* ಸ್ವಲ್ಪಮಟ್ಟಿಗೆ ತಿಳಿಯಬಹುದು.

| ೧<br>ದೇಶ | ೨<br>ಒಟ್ಟು ಜನಸಂಖ್ಯೆಯಲ್ಲಿ ೩ ರಿಂದ ೬ ವರ್ಷದೊಳಗಿರುವ ಮಕ್ಕಳು | ೩<br>ಇವರಲ್ಲಿ ಶಿಕ್ಷಣ ಪಡೆಯುತ್ತಿರುವವರು | ೪<br>೨ಮತ್ತು೩ರ ಹೋಲಿಕೆ |
|---|---|---|---|
| ಇಂಗ್ಲೆಂಡ್ ಮತ್ತು ವೇಲ್ಸ್ | ೧೯,೨೮,೦೦೦ | ೬,೬೨,೦೦೦ | ಸುಮಾರು ೩೪% |
| ಸ್ಕಾಟ್ಲೆಂಡ್ | ೨,೪೦,೦೦೦ | ೫೮,೧೨೮ | ೨೪% |
| ಫ್ರಾನ್ಸ್ | ೨೦,೭೮,೦೦೦ | ೪,೧೦,೮೪೭ | ೨೦% |
| ಅಮೆರಿಕ | ೨೫,೯೦,೦೦೦ | ೬,೪೪,೭೨೮ | ೨೫% |
| ಇಟಲಿ | ೨೧,೨೫,೦೦೦ | ೭,೩೪,೫೮೧ | ೩೫% |
| ಜರ್ಮನಿ | ೩೦,೧೦,೦೦೦ | ೪,೨೫,೦೦೦ | ೧೪% |
| ಬೆಲ್ಜಿಯಂ | ೩,೮೯,೦೦೦ | ೨,೫೯,೫೨೦ | ೬೦% |
| ಮೈಸೂರು ನಗರ | ೮,೫೦೦ | ೫೮೯ | ೭% |

*ಈ ಅಂಕಿಗಳು ೧೯೩೬ ನೆಯ ವರ್ಷಕ್ಕೆ ಸೇರಿದುವು ; ೧೯೩೮ ನೆಯ ವರ್ಷದ "ಇಯರ್ ಬುಕ್ ಆಫ್ ಎಡ್ಯುಕೇಷನ್" ಇಂದ ಸಂಗ್ರಹಿಸಿದೆ.

# ೩. ಕೆಲವು ತಪ್ಪು ಅಭಿಪ್ರಾಯಗಳು

ಶಿಶುವಿಹಾರಗಳಲ್ಲಿ ನಡೆಯುವ ಕೆಲಸವನ್ನು ವಿವರಿಸುವುದಕ್ಕೆ ಮೊದಲು ಆ ಶಾಲೆಗಳ ವಿಷಯವಾಗಿ ನಮ್ಮ ಜನರಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದೆರಡು ತಪ್ಪು ಭಾವನೆಗಳನ್ನು ವಿಮರ್ಶಿಸುವುದು ಒಳ್ಳೆಯದು.

೧. ಮೊದಲನೆಯದು ಶಿಶುವಿಹಾರಗಳು ಮಕ್ಕಳಿಗೆ ಓದುವುದು, ಬರೆಯುವುದು, ಲೆಕ್ಕಮಾಡುವುದು ಇವುಗಳನ್ನು ಹೇಳಿಕೊಡುವುದಿಲ್ಲ ಎಂಬುದು. " ಈಗ ಎರಡು ವರ್ಷಗಳಿಂದ ನಮ್ಮ ಮಗು ಶಿಶುವಿಹಾರಕ್ಕೆ ಹೋಗುತ್ತಿದೆ, ಆದರೂ ಮೊದಲನೆಯ ಎರಡು ಅಕ್ಷರಗಳನ್ನು ಬರೆಯಲು ಕೂಡ ಬರುವುದಿಲ್ಲ. ಇಂತಹ ಶಾಲೆಗೆ ಮಕ್ಕಳನ್ನು ಏತಕ್ಕೆ ಕಳುಹಿಸಬೇಕು ?" ಎಂದು ಅನೇಕ ಪೋಷಕರು ಆಕ್ಷೇಪಣೆಮಾಡುತ್ತಾರೆ. ಇದು ಸರಿಯಲ್ಲ. ಓದುಬರಹ ಕಲಿಸುವುದು ಶಿಶುವಿಹಾರದ ಧ್ಯೇಯಗಳಲ್ಲಿ ಒಂದಾಗಿಲ್ಲ. ಇದಕ್ಕೆ ಶಾಸ್ತ್ರಸಮ್ಮತವಾದ ಕಾರಣಗಳಿವೆ. ಇದನ್ನು ಮುಂದೆ ಐದನೆಯ ಅಧ್ಯಾಯನಲ್ಲಿ ವಿವರಿಸಿದೆ.

೨. "ಶಿಶುವಿಹಾರಗಳು ಜನಸಂದಣಿ ಹೆಚ್ಚಾಗಿದ್ದ ಕಡೆ ವಾಸಮಾಡುತ್ತಿದ್ದು ಕಾರ್ಖಾನೆಗಳಲ್ಲಿ ಕೆಲಸಮಾಡುವವರ ಮಕ್ಕಳಿಗೆ ಮಾತ್ರ ಆಗತ್ಯ" ಎಂಬುದು ಎರಡನೆಯ ತಪ್ಪುಭಾವನೆ.

ಈ ತಪ್ಪುಭಾವನೆ ಇರುವ ಕೆಲವರು ಹೀಗೆ ವಾದಿಸಬಹುದು. " ಪಾಶ್ಚಾತ್ಯದೇಶಗಳಲ್ಲಿ ಕೈಗಾರಿಕೆ ಮತ್ತು ವ್ಯಾಪಾರ ಹೆಚ್ಚುತ್ತಿವೆ. ದೊಡ್ಡ ದೊಡ್ಡ ಪಟ್ಟಣಗಳೂ ಹೆಚ್ಚು. ಜೀವನೋಪಾಯಕ್ಕಾಗಿ ತಾಯಂದಿರು ಕಾರ್ಖಾನೆಗಳಿಗೆ

ಹೋಗಿ ಕೂಲಿಮಾಡಬೇಕಾಗುತ್ತದೆ. ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಹೊತ್ತಿಲ್ಲ. ಅಲ್ಲದೆ ಜನಸಂದಣಿಯಾದ ಪಟ್ಟಣಗಳ ಮನೆಗಳಲ್ಲಿ ಮಕ್ಕಳ ಬೆಳವಣಿಗೆಗೆ ಅಗತ್ಯವಾಗಿ ಬೇಕಾಗುವ ಗಾಳಿ ಬೆಳಕಿಗೂ, ಆಟಪಾಟಗಳಿಗೂ ಅವಕಾಶ ವಿಲ್ಲ. ಆದುದರಿಂದ ಅಲ್ಲಿನ ಮಕ್ಕಳ ಬೆಳವಣಿಗೆಗೆ ಶಿಶುವಿಹಾರ ಗಳೆಂಬ ಉತ್ತಮ ಸನ್ನಿವೇಶವು ಬೇಕಾಗಿದೆ. ನಮ್ಮ ಸೀಮೆ ಯಲ್ಲಾದರೋ ದೊಡ್ಡ ನಗರಗಳು ಬಹಳ ಕಡಮೆ. ವ್ಯವ ಸಾಯವೇ ಮುಖ್ಯವಾದ ಜೀವನವೃತ್ತಿ. ತಾಯಂದಿರು ವ್ಯವ ಸಾಯದ ಕೆಲಸದಲ್ಲಿ ಸಹಾಯಮಾಡಿದರೂ ಅವರಿಗೆ ಮಕ್ಕಳನ್ನು ನೋಡಿಕೊಳ್ಳಲು ಕಾಲವಿಲ್ಲದೆ ಇಲ್ಲ. ಸಣ್ಣ ಮಕ್ಕಳನ್ನು ತಾಯಂದಿರಿಂದ ಪ್ರತ್ಯೇಕಿಸುವುದು ಸರಿಯಲ್ಲ. ಆದುದರಿಂದ ನಮ್ಮ ದೇಶದಲ್ಲಿ ಶಿಶುವಿಹಾರಗಳಿಗೆ ಅಷ್ಟಾಗಿ ಆವಶ್ಯಕತೆ ಕಾಣು ವುದಿಲ್ಲ.” ಈ ಅಭಿಪ್ರಾಯ ಸಾಧುವಾದುದೇ, ಈ ವಾದದಲ್ಲಿ ಎಷ್ಟರಮಟ್ಟಿಗೆ ತಿರುಳಿದೆ ಎಂಬುದನ್ನು ಸ್ವಲ್ಪ ನೋಡೋಣ.

ನಮ್ಮ ದೇಶದ ಹಳ್ಳಿಗಳಲ್ಲಿ ತಾಯಂದಿರಿಗೆ ಮಕ್ಕಳನ್ನು ನೋಡಿಕೊಳ್ಳಲು ವಿರಾಮವಿರುವುದು ಎಷ್ಟರ ಮಟ್ಟಿಗೆ ನಿಶ್ಚಯ? ಒಂದು ವೇಳೆ ಅವರಿಗೆ ಬಿಡುವಿದ್ದರೂ ಮಕ್ಕಳ ಬೆಳವಣಿಗೆಗೆ ತಕ್ಕ ಸನ್ನಿವೇಶಗಳನ್ನೊದಗಿಸಲು ಅವರಿಗಿರುವ ತಿಳಿವಳಿಕೆ ತಾನೆ ಏನು? ಅನೇಕ ತಾಯಂದಿರು ಮೂಢಾಚಾ ರಗಳಲ್ಲಿ ಇದ್ದುಕೊಂಡು, ಮಕ್ಕಳ ಸ್ವಭಾವವೇನು, ಅವರನ್ನು ಯಾವರೀತಿಯಲ್ಲಿ ಸಾಕಬೇಕು, ಎಂಬ ತಿಳಿವಳಿಕೆ ಇಲ್ಲದೆ ಇರುತ್ತಾರೆ. ಇದರಿಂದ ಮಕ್ಕಳು ತಮ್ಮ ಜೀವಮಾನದಲ್ಲಿ ಮುಖ್ಯವಾದ ಶೈಶವಕಾಲದಲ್ಲಿ, ದೇಹಪೋಷಣೆಯು ಸರಿಯಾ ಗಿಲ್ಲದೆ ಮನೆಗಳಲ್ಲಿರುವ ದುರಭ್ಯಾಸಗಳನ್ನೂ ಅಸಮರ್ಪಕವಾದ

ಮನೋವೃತ್ತಿಗಳನ್ನೂ ಅನುಕರಣದಿಂದ ಕಲಿತು, ಪ್ರಾಥಮಿಕ ಶಾಲೆಗೆ ಬರುವ ಹೊತ್ತಿಗೆ ರೋಗಗಳಿಂದ ನರಳುತ್ತಾ, ಕೊಳಕುತನ, ಅವಮರ್ಯಾದೆಯ ಮಾತುಗಳು, ಸೋಮಾರಿತನ, ಸ್ವಾರ್ಥಪರತೆ—ಇವುಗಳಿಂದ ತುಂಬಿಹೋಗಿರುತ್ತಾರೆ. ಇವುಗಳನ್ನು ತಕ್ಕಷ್ಟು ಕಡಮೆಮಾಡಿ ಸಾಧ್ಯವಾದಮಟ್ಟಿಗೆ ತಪ್ಪಿಸಬೇಕಲ್ಲವೆ? ಇದರಿಂದ ಕಾರ್ಖಾನೆಗಳಲ್ಲಿ ಕೆಲಸಮಾಡುವವರ ಮಕ್ಕಳಿಗೇ ಅಲ್ಲ, ವ್ಯವಸಾಯ ಮತ್ತು ಇತರ ಕಸಬುದಾರರ ಮಕ್ಕಳಿಗೂ ಶಿಶುವಿಹಾರದ ಶಿಕ್ಷಣವು ಆವಶ್ಯಕ ಎಂದು ತಿಳಿಯಬರುತ್ತದೆ.

೩. "ಶಿಶುವಿಹಾರಗಳು ತೀರ ಬಡವರ ಮಕ್ಕಳಿಗೆ ಮಾತ್ರ ಅಗತ್ಯ" ಎಂಬುದು ಈ ಶಾಲೆಗಳ ವಿಷಯದಲ್ಲಿರುವ ಮತ್ತೊಂದು ತಪ್ಪು ಭಾವನೆ. ಬಡವರು ತಮ್ಮ ಮಕ್ಕಳ ಬೆಳವಣಿಗೆಗೆ ಸರಿಯಾದ ಸನ್ನಿವೇಶಗಳನ್ನು ಏರ್ಪಡಿಸಲು ಬೇಕಾಗುವ ದ್ರವ್ಯವನ್ನು ಒದಗಿಸಲಾರರು. ಐಶ್ವರ್ಯವಂತರಾದರೋ ತಮ್ಮ ಮನೆಗಳಲ್ಲೇ ಮಕ್ಕಳ ಆಟಗಳಿಗೆ ಬೇಕಾದ ಸಾಮಾನುಗಳನ್ನು ಒದಗಿಸಿ, ಅವರ ಶಿಕ್ಷಣಕ್ಕೆ ಬೇಕಾಗುವ ಸನ್ನಿವೇಶಗಳನ್ನು ಏರ್ಪಡಿಸಬಲ್ಲರು. ಆದುದರಿಂದ ಐಶ್ವರ್ಯವಂತರ ಮಕ್ಕಳಿಗೆ ಶಿಶುವಿಹಾರಗಳ ಅಗತ್ಯವಿಲ್ಲ ಎಂಬುದು ಕೆಲವರ ವಾದ. ಇದನ್ನೂ ಸ್ವಲ್ಪ ವಿಚಾರಮಾಡೋಣ. ಐಶ್ವರ್ಯವಂತರಿಗೆ ಹಣದ ಸೌಲಭ್ಯವೇನೋ ಇರಬಹುದು. ಅವರು ಮಕ್ಕಳ ಆಟಗಳಿಗೂ, ದೇಹದ ಬೆಳವಣಿಗೆಗೂ ಬೇಕಾಗುವ ಏರ್ಪಾಡುಗಳನ್ನು ತಕ್ಕಮಟ್ಟಿಗೆ ಮಾಡಬಹುದು. ಆದರೆ, ಮಕ್ಕಳ ಮನೋವೃತ್ತಿ, ಅವರ ಸ್ವಾಭಾವಿಕಗುಣ, ಅವರ ಮಾನಸಿಕ ಮತ್ತು ನೀತಿಶಿಕ್ಷಣವನ್ನು ಹೇಗೆ ನಡೆಸಬೇಕು ಎಂಬ ತಿಳಿವಳಿಕೆ ಎಷ್ಟು ಜನರಿಗಿದೆ? ಅನೇಕರಿಗೆ ಈ ವಿಷಯಗ

ಳಲ್ಲಿ ಸರಿಯಾದ ತಿಳಿವಳಿಕೆ ಇಲ್ಲ. ಒಂದು ವೇಳೆ ಕೆಲವರಿಗೆ ಈ ರೀತಿಯ ತಿಳಿವಳಿಕೆ ಇದ್ದರೂ ತಾಯಂದಿರು ತಮಗೆ ಸಹಜ ವಾದ ಪ್ರೀತಿಯಿಂದ (Natural parental love) ಮಕ್ಕಳನ್ನು ಅತಿಯಾಗಿ ಮುದ್ದಿಸಿ ಅವರ ನಡತೆಯಲ್ಲಿರುವ ಕುಂದುಕೊರತೆ ಗಳನ್ನು ಹೊರಗೆಡಹದೆ ಇರಬಹುದಲ್ಲವೇ ? ಅಲ್ಲದೆ ಪೋಷಕರ ವಿಶೇಷ ಮಮತೆ ಮಕ್ಕಳ ಸ್ವಾಭಾವಿಕವಾದ ಬೆಳವಣಿಗೆಗೆ ಅಡ್ಡಿ ಯಾಗಬಹುದಲ್ಲವೆ? ಇದೂ ಅಲ್ಲದೆ ಮಕ್ಕಳ ಶಿಕ್ಷಣ ವಿಷಯಗ ಳನ್ನು ಮನಶ್ಶಾಸ್ತ್ರರೀತಿಯಾಗಿ ಚೆನ್ನಾಗಿ ಅರಿತು ಅದೇ ಕೆಲಸದಲ್ಲಿ ಯೇ ತೊಡಗಿರುವ ನಿಪುಣರಾದ ಶಿಶುವಿಹಾರಗಳ ಉಪಾಧ್ಯಾಯ ರಿಂದ ದೊರೆಯುವ ಶಿಕ್ಷಣವು ಮನೆಯಲ್ಲಿ ದೊರೆಯುವ ಶಿಕ್ಷಣ ಕ್ಕಿಂತ ಉತ್ತಮವಲ್ಲವೇ?

ಇವೆಲ್ಲಕ್ಕಿಂತ ಹೆಚ್ಚಾಗಿ ನಾವು ಮತ್ತೊಂದು ವಿಚಾರವನ್ನು ಗಮನಿಸಬೇಕಾಗಿದೆ. ಮಕ್ಕಳಿಗೆ ಆಟಕ್ಕೆ ಎಷ್ಟೇ ಅನುಕೂಲ ವಿರಲಿ, ಅವರು ತಮ್ಮ ವಯಸ್ಸಿನ ಇತರ ಮಕ್ಕಳೊಡನೆ ಆಟ ವಾಡಲು ಅವಕಾಶವಿಲ್ಲದಿದ್ದರೆ ಅವರ ಸರ್ವತೋಮುಖವಾದ ಬೆಳವಣಿಗೆಗೆ ಸರಿಯಾದ ಸನ್ನಿವೇಶವಿದ್ದಂತೆ ಆಗುವುದಿಲ್ಲ. ಇದು ಮನಶ್ಶಾಸ್ತ್ರದ ಪ್ರಯೋಗಗಳಿಂದ ಸ್ಥಿರಪಟ್ಟಿದೆ ; ಅಲ್ಲದೆ ನಮ್ಮ ಅನುಭವವು ಕೂಡ ಅದನ್ನೇ ವ್ಯಕ್ತಗೊಳಿಸುವುದು. ಹಾಗೆಯೇ ನೋಡಿದರೆ ಮಕ್ಕಳು ಒಬ್ಬೊಬ್ಬರೇ ಆಡುವುದಕ್ಕಿಂತ ಇತರರ ಜೊತೆಯಲ್ಲಿ ಆಟವಾಡುವಾಗ ಅತ್ಯಂತ ಉಲ್ಲಾಸದಿಂದ ಇರುತ್ತಾರೆ. ಮಕ್ಕಳು ಸದಾಕಾಲದಲ್ಲಿಯೂ ದೊಡ್ಡವರ ಸಂಗಡಲೇ ಇದ್ದರೆ ಅವರು ಅಷ್ಟು ಸ್ವತಂತ್ರವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಮಾತನಾಡುವುದಕ್ಕಾಗಲಿ ನಾನಾವಿಧ ವಾದ ಆಟವಾಡುವುದಕ್ಕಾಗಲಿ ಅವಕಾಶಗಳಿರುವುದಿಲ್ಲ. ಸ್ವಲ್ಪ

ಹೆಚ್ಚುಕಡಮೆ ತಮ್ಮ ವಯಸ್ಸಿನ ಮಕ್ಕಳ ಜೊತೆಯಲ್ಲಿದ್ದರೆ ಅವರಿಗೆ ಬಹಳ ಸಂತೋಷ, ಅವರ ಬೆಳವಣಿಗೆಯು ತೃಪ್ತಿಕರವಾಗಿರುತ್ತದೆ. ಆದುದರಿಂದ ಮಕ್ಕಳಿಗೆ ಆಟವು ಎಷ್ಟು ಆವಶ್ಯಕವೋ ಜೊತೆಗಾರರೂ ಅಷ್ಟೇ ಆವಶ್ಯಕ. ಈ ಅನುಕೂಲಕ್ಕಾಗಿಯಾದರೂ ಐಶ್ವರ್ಯವಂತರ ಮಕ್ಕಳಿಗೂ ಸಹ ಶಿಶುವಿಹಾರಗಳ ಶಿಕ್ಷಣವು ಅಗತ್ಯ. ಒಟ್ಟಿನಲ್ಲಿ ಹೇಳಬೇಕಾದರೆ ಶಿಶುವಿಹಾರಗಳು ಬಡವರ ಮಕ್ಕಳು ಮತ್ತು ಐಶ್ವರ್ಯವಂತರ ಮಕ್ಕಳು ಎಂಬ ವ್ಯತ್ಯಾಸವಿಲ್ಲದೆ ದೇಶದ ಎಲ್ಲಾ ಮಕ್ಕಳಿಗೂ ಆವಶ್ಯಕ ಎಂದು ಧಾರಾಳವಾಗಿ ಹೇಳಬಹುದು. ಇದು ನಿರ್ವಿವಾದವಾದ ವಿಷಯ. ಹಿಂದೆಯೇ ಹೇಳಿರುವಂತೆ ಪಾಶ್ಚಾತ್ಯ ದೇಶಗಳ ಅನುಭವದಿಂದಲೂ, ಮನಶ್ಶಾಸ್ತ್ರಜ್ಞರ ಪ್ರಯೋಗಗಳಿಂದಲೂ ಇದು ನಿಸ್ಸಂದೇಹವಾಗಿ ಸ್ಥಿರಪಟ್ಟಿದೆ. ಅಮೆರಿಕಾದ ಸುಪ್ರಸಿದ್ಧ ಮನಶ್ಶಾಸ್ತ್ರಜ್ಞರಲ್ಲೊಬ್ಬರಾದ ವಿನ್ನಿಕಾಟ್ (D. W. Winnicot) ಎಂಬವರ ಅನುಭವವಿದು: ಎರಡು ವರ್ಷಗಳಿಂದ ಐದು ವರ್ಷಗಳೊಳಗಿರುವ ಮಕ್ಕಳು ಮನೆಯಲ್ಲಿ ತಮ್ಮ ತಾಯಿಂದಿರೊಡನೆ ಇರುವುದಕ್ಕಿಂತ ಸುಶಿಕ್ಷಿತರಾದ ಉಪಾಧ್ಯಾಯರಿಂದ ಕೂಡಿದ ಶಿಶುವಿಹಾರಗಳಲ್ಲಿರುವುದು ಎಷ್ಟೋ ಮೇಲು ಎಂದು ನನ್ನ ಹದಿನೈದು ವರುಷಗಳ ಅನುಭವದಿಂದ ತಿಳಿದು ಬಂದಿದೆ. ಆ ವಯಸ್ಸಿನ ಮಕ್ಕಳಿಗೆ ಬೇಕಾದುದು ಪೋಷಣೆ, ಇತರ ಮಕ್ಕಳ ಸಹವಾಸ—ಇವೆರಡೇ. ಸಾಮಾನ್ಯವಾಗಿ ತಾಯಿಯರು ತಮ್ಮ ಮಕ್ಕಳಿಗೆ ಇದರಲ್ಲಿ ಒಂದಲ್ಲ ಒಂದನ್ನು ಮಿತಿಮೀರಿ ಒದಗಿಸುತ್ತಾರೆ."

# ೪. ಶಿಶುವಿಹಾರದ ಕೆಲಸಗಳು

ಇದುವರೆಗೂ ಶಿಶುವಿಹಾರಗಳ ಧ್ಯೇಯವೇನೆಂಬುದನ್ನೂ ಅವುಗಳ ಆವಶ್ಯಕತೆಯನ್ನೂ ಪಾಶ್ಚಾತ್ಯದೇಶಗಳಲ್ಲಿ ಅವುಗಳಿಗೆ ಎಷ್ಟರಮಟ್ಟಿಗೆ ಉತ್ತೇಜನ ದೊರೆತು ಅಭಿವೃದ್ಧಿಗೆ ಬಂದಿವೆ ಎಂಬುದನ್ನೂ ತಿಳಿದುಕೊಂಡಾಯಿತು. ಇನ್ನು ಶಿಶುವಿಹಾರಗಳಲ್ಲಿ ಯಾವ ಸಲಕರಣೆಗಳಿವೆ? ಅಲ್ಲಿ ಏನು ಕೆಲಸ ನಡೆಯುತ್ತದೆ? ಮಕ್ಕಳಿಗೆ ಶಿಕ್ಷಣಕೊಡಲು ಯಾವರೀತಿಯ ಸನ್ನಿವೇಶಗಳು ಏರ್ಪಟ್ಟಿವೆ? ಎಂಬುವನ್ನು ಸ್ವಲ್ಪಮಟ್ಟಿಗೆ ನೋಡೋಣ.

ಒಂದು ಶಾಲೆಯ ಕೆಲಸವನ್ನು ಸಾಮಾನ್ಯವಾಗಿ ಅಲ್ಲಿಯ ವೇಳಾಪತ್ರಿಕೆಯಿಂದಾಗಲಿ, ಸ್ವತಃ ಅಲ್ಲಿಗೇ ಹೋಗಿ ನೋಡಿಯಾಗಲಿ ತಿಳಿದುಕೊಳ್ಳಬಹುದು. ಇವುಗಳಲ್ಲಿ ಎರಡನೆಯದೇ ಉತ್ತಮವಾದ ಮಾರ್ಗ. ಆದುದರಿಂದ ನಾವು ಇಂಗ್ಲೆಂಡಿನ ಒಂದು ಉತ್ತಮವಾದ ಶಿಶುವಿಹಾರಕ್ಕೆ ಹೋಗಿ ನೋಡೋಣ. ಅಲ್ಲಿನ ಶಿಶುವಿಹಾರಗಳು ಬೆಳಗ್ಗೆ ಸುಮಾರು ೮-೩೦ ಘಂಟೆಗೆ ಪ್ರಾರಂಭವಾಗುತ್ತವೆ. ನಾವು ಇದಕ್ಕೂ ಸ್ವಲ್ಪ ಮುಂಚಿತವಾಗಿಯೇ ಅಲ್ಲಿರೋಣ. ಅಲ್ಲಿನ ಉಪಾಧ್ಯಾಯರೆಲ್ಲರೂ ಸ್ತ್ರೀಯರು.[1] ಅವರು ಮುಗುಳುನಗೆ ಉತ್ಸಾಹಗಳಿಂದ ನಮ್ಮನ್ನು ಬರಮಾಡಿಕೊಳ್ಳುತ್ತಾರೆ.

---


[1] ಚಿಕ್ಕಮಕ್ಕಳಿಗೆ ಸ್ತ್ರೀಯರೇ ಸರಿಯಾದ ಉಪಾಧ್ಯಾಯರು ಎಂದು ಅನುಭವದಿಂದ ತಿಳಿದುಬಂದಿದೆ. ಸ್ವಭಾವಜನ್ಯವಾದ ತಾಳ್ಮೆ ಪ್ರೀತಿ ವಿಶ್ವಾಸಗಳಿಂದ ಮಕ್ಕಳ ಶಿಕ್ಷಣಕ್ಕೆ ಉತ್ತಮವಾದ ಸನ್ನಿವೇಶವನ್ನು ಅವರು ಕಲ್ಪಿಸುವರು. ಗಂಡಸರು ಎಷ್ಟೇ ಪ್ರೀತಿ ದಯೆ ತೋರಿಸಿದರೂ ಸ್ವಲ್ಪ ಕಠಿನರೇ. ಸಣ್ಣ ಪುಟ್ಟ ಮಕ್ಕಳಿರುವ ಶಾಲೆಗಳಲ್ಲಂತೂ ಇವರಿಗೆ ಸ್ಥಳವಿಲ್ಲ. ನಮ್ಮ ದೇಶದವರು ಇದನ್ನು ಮುಖ್ಯವಾಗಿ ಮನಗಾಣಬೇಕು.

ಶಿಶುವಿಹಾರವಿರುವ ಸನ್ನಿವೇಶವನ್ನು ಸ್ವಲ್ಪ ನೋಡೋಣ. ಸುತ್ತಲೂ ಮಕ್ಕಳು ಆಟವಾಡಲು ವಿಶಾಲವಾದ ಬೈಲು; ಈ ಬೈಲಿನಲ್ಲಿ ಕೆಲವು ಹೂವಿನ ಗಿಡಗಳು; ಅಲ್ಲಲ್ಲಿ ಚಿಕ್ಕಪುಟ್ಟ ಪೊದೆಗಳು; ಒಂದು ಕಡೆ ಸಣ್ಣ ಕೈತೋಟ ಇದೆ. ಈ ತೋಟದಲ್ಲಿ ಅನೇಕ ವಿಧವಾದ ಹೂವು, ತರ್ಕಾರಿ ಮತ್ತು ಹಣ್ಣಿನ ಗಿಡಗಳಿವೆ. ಮಕ್ಕಳೇ ತೋಟದ ಕೆಲಸಮಾಡಲು ಚಿಕ್ಕ ಚಿಕ್ಕ ಪಾತಿಗಳಿವೆ. ಬೈಲಿನ ಮತ್ತೊಂದು ಭಾಗದಲ್ಲಿ ಮಕ್ಕಳು ಆಟವಾಡಲು ಬೇಕಾಗುವ ಜಾರುಗುಪ್ಪೆ, ಉಯ್ಯಾಲೆ, ರಾಟೆ, ಮಕ್ಕಳು ಹತ್ತಿ ಇಳಿಯಲು ಅನುಕೂಲವಾದ ಮರದ ಚೌಕಟ್ಟುಗಳು (Climbing Frame), ಹಳೆಯ ಮೋಟಾರ್ ಮತ್ತು ಬೈಸಿಕಲ್ ಟೈರುಗಳು, ಮೂರುಚಕ್ರದ ಬೈಸಿಕಲ್‌ಗಳು, ಮಕ್ಕಳನ್ನು ತಳ್ಳಿಕೊಂಡು ಹೋಗುವ ತೊಟ್ಟಿಲುಗಾಡಿಗಳು (Prams) ಇವೆ. ಇನ್ನೊಂದು ಕಡೆ ಒಂದು ವಿಶಾಲವಾದ ಸಿಮೆಂಟಿನ ತೊಟ್ಟಿ; ಅದರ ತುಂಬ ಮರಳು. ಅದಕ್ಕೆ ಸ್ವಲ್ಪ ದೂರದಲ್ಲಿಯೇ ಒಂದು ನೀರಿನ ತೊಟ್ಟಿಯೂ ಇದೆ. ಅದರಲ್ಲಿ ನೀರು ಆಳವಾಗಿಲ್ಲ; ಸುಮಾರು ಆರರಿಂದ ಒಂಬತ್ತು ಅಂಗುಲದಷ್ಟು ಆಳಮಾತ್ರ ಇದೆ. ಹಾಗೆಯೇ ಮತ್ತೊಂದು ಕಡೆ ತಿರುಗಿ ನೋಡಿದರೆ ಅಲ್ಲಿ ಕೆಲವು ಗೂಡುಗಳ ನ್ನಿಟ್ಟು ಗಿಣಿ, ಪಾರಿವಾಳ, ಕೋಳಿ, ಮೊಲ, ಮೀನು, ನಾಯಿ ಮರಿ ಮೊದಲಾದ ಪ್ರಾಣಿಗಳನ್ನು ಸಾಕಿದ್ದಾರೆ. ಅಲ್ಲಲ್ಲಿ ಹುಲು ಸಾಗಿ ಬೆಳೆದಿರುವ ಹುಲ್ಲನ್ನು ಮಟ್ಟವಾಗಿ ಕತ್ತರಿಸಿದ್ದಾರೆ.

ಇನ್ನು ಶಿಶುವಿಹಾರದ ಒಳಕ್ಕೆ ಹೋಗೋಣ. ಅಲ್ಲಿನ ಕೊಠಡಿಗಳು ವಿಶಾಲವಾಗಿವೆ. ಗಾಳಿ, ಬೆಳಕು, ಬಿಸಿಲು ಧಾರಾಳವಾಗಿ ಬರುವಂತೆ ದೊಡ್ಡ ದೊಡ್ಡ ಕಿಟಕಿ ಬಾಗಿಲುಗಳಿವೆ.

ಈ ಕೊಠಡಿಗಳಿಗೆ ಆಟದ ಕೊಠಡಿಗಳೆಂದು ಹೆಸರು. ಇಲ್ಲಿಯ ಗೋಡೆಗಳಿಗೆ ಮಕ್ಕಳು ಬರೆದ ಕೆಲವು ಚಿತ್ರಗಳನ್ನು ನೇತು ಹಾಕಿರುತ್ತಾರೆ. ಈ ಆಟದ ಕೊಠಡಿಗಳಲ್ಲಿರುವ ಮೇಜು, ಕುರ್ಚಿ, ಬೆಂಚು ಮೊದಲಾದ ಸಾಮಾನುಗಳು ೩-೪ ವರ್ಷದ ಮಕ್ಕಳಿಗೆ ಅನುಕೂಲವಾದಷ್ಟೇ ಎತ್ತರವಾಗಿವೆ. ಅವರ ಮನಸ್ಸನ್ನು ಆಕರ್ಷಿಸಲು ಅವುಗಳಿಗೆ ನಾನಾ ವಿಧವಾದ ಬಣ್ಣಗಳನ್ನು (Pleasing Colours) ಹಾಕಿರುತ್ತಾರೆ. ಅಲ್ಲದೆ ಅವು ಭಾರವಿಲ್ಲದೆ ಇರುವುದರಿಂದ ಮಕ್ಕಳೇ ಅವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ತೆಗೆದುಕೊಂಡು ಹೋಗಬಲ್ಲರು. ಈ ಕೊಠಡಿಗಳಲ್ಲಿ ಸುತ್ತಲೂ ಗೋಡೆಗಳ ಸಮೀಪದಲ್ಲಿ ಚಿಕ್ಕ ಪುಟ್ಟ ಬೀರುಗಳಿವೆ. ಆ ಬೀರುಗಳಲ್ಲಿ ಮಕ್ಕಳ ಆಟದ ಸಾಮಾನುಗಳಿವೆ. ಇವುಗಳಿಂದ ತಮಗೆ ಬೇಕಾದ ಸಾಮಾನುಗಳನ್ನು ತಾವೇ ತೆಗೆದುಕೊಳ್ಳಬಲ್ಲರು.

ಈ ಕೊಠಡಿಯ ಒಂದು ಮೂಲೆಯಲ್ಲಿ ಪಿಯಾನೋ ಇದೆ. ಇದರ ಪಕ್ಕದಲ್ಲಿ ಚಿತ್ರಬರೆಯುವ ಕೊಠಡಿ. ಅಲ್ಲಿ ಮಕ್ಕಳಿಗೆ ಎಟುಕುವ ಹಾಗೆ ಕಪ್ಪು ಹಲಗೆಗಳಿವೆ. ಇವುಗಳ ಮೇಲೆ ಮಕ್ಕಳು ಬಣ್ಣ ಬಣ್ಣದ ಸೀಮೆಸುಣ್ಣಗಳಿಂದ (Crayons) ಚಿತ್ರ ಬರೆಯುತ್ತಾರೆ. ಕೆಲವು ವೇಳೆ ಕಪ್ಪು ಹಲಗೆಗಳಿಗೆ ಕಾಗದ ಅಂಟಿಸಿ ಬರೆದ ಚಿತ್ರಗಳಿಗೆ ಬಣ್ಣ ಹಾಕುತ್ತಾರೆ. ಅಲ್ಲಿಂದ ಮುಂದೆ ಹೋದರೆ ಒಂದು ಕೊಠಡಿಯಲ್ಲಿ ಸಾಲಾಗಿ ಟವಲುಗಳನ್ನು ನೇತುಹಾಕಿದ್ದಾರೆ. ಅದರ ಪಕ್ಕದಲ್ಲಿಯೇ ಒಂದೊಂದು ಬಟ್ಟಲು, ಹಲ್ಲುಜ್ಜುವ ಬ್ರಷ್, ಸೋಪು ಮೊದಲಾದುವು ಇವೆ. ಇದು ಮಕ್ಕಳು ಮುಖ ಕೈಕಾಲು ತೊಳೆದುಕೊಳ್ಳುವ ಕೊಠಡಿ ಅಥವಾ ಸ್ನಾನದ ಮನೆ. ಇಲ್ಲಿ ಒಂದೆರಡು



ಮಕ್ಕಳು ಮುಖ ಕೈಕಾಲು ತೊಳೆದುಕೊಳ್ಳುವ ಕೊಠಡಿ


ಸ್ನಾನದ ತೊಟ್ಟಿಗಳೂ (Bath Tubs) ಇವೆ. ಅದರಲ್ಲಿಯೇ ಮತ್ತೊಂದು ಕಡೆ ಮಕ್ಕಳು ದೇಹಬಾಧೆಯನ್ನು ತೀರಿಸಿಕೊಳ್ಳಲು ಫ್ಲಷ್ ಕಕ್ಕಸುಗಳಿವೆ. ಮುಂದೆ ಹೋದರೆ, ಮಕ್ಕಳು ತಮ್ಮ ಬಟ್ಟೆಗಳನ್ನಿಡುವ ಕೊಠಡಿ. ಹಾಗೆಯೇ ಹೋದರೆ ಒಂದು ಕೊನೆಯಲ್ಲಿ ಶಾಲೆಯ ಉಗ್ರಾಣ ಅಡಿಗೆಮನೆಗಳಿವೆ. ನಾವು ಈಗಲೇ ಅಡಿಗೆಮನೆಗೆ ಹೋಗುವುದು ಬೇಡ.

ಇವುಗಳನ್ನೆಲ್ಲಾ ನೋಡುವ ಹೊತ್ತಿಗೆ ೮-೩೦ ಘಂಟೆಯಾಗುತ್ತದೆ. ಮಕ್ಕಳು ಬರಲು ಪ್ರಾರಂಭಿಸುತ್ತಾರೆ. ನಾವೊಂದು ಕಡೆ ನಿಂತು ನೋಡೋಣ. ಮಕ್ಕಳು ತಾವಾಗಿಯೇ ಸಂತೋಷದಿಂದ ನಗುತ್ತ, ಕುಣಿಯುತ್ತ, ಶಾಲೆಗೆ ಓಡಿಬರುತ್ತಾರೆ. ಬಹಳ ಚಿಕ್ಕ ಮಕ್ಕಳ ಜೊತೆಯಲ್ಲಿ ಅವರ ತಾಯಂದಿರೋ ಅಣ್ಣಂದಿರೋ ಅಕ್ಕಂದಿರೋ ಬರುತ್ತಾರೆ. ಉಪಾಧ್ಯಾಯರು

ಶಾಲೆಯ ಆವರಣದಲ್ಲಿಯೇ ಇದ್ದುಕೊಂಡು ಮಕ್ಕಳನ್ನು ಪ್ರೀತಿ ವಿಶ್ವಾಸಗಳಿಂದ ನಗುನಗುತ್ತಾ ಬರಮಾಡಿಕೊಳ್ಳುತ್ತಾರೆ. ಮಕ್ಕಳು ಉಪಾಧ್ಯಾಯರಿಗೆ ನಮಸ್ಕರಿಸಿ ತಮ್ಮ ತಮ್ಮ ಕೆಲಸ ಗಳಿಗೆ ಹೋಗುತ್ತಾರೆ. ಕೆಲವು ಮಕ್ಕಳು ಸಂಕೋಚವಿಲ್ಲದೆ ಭಯವಿಲ್ಲದೆ, ಅಲ್ಲಿಗೆ ಪ್ರೇಕ್ಷಕರಾಗಿ ಹೋಗಿರುವ ನಮಗೂ ವಂದಿಸಿ ತಮ್ಮ ಪುಟ್ಟ ಕೈಗಳನ್ನು ಹಸ್ತಲಾಘವ ಕೊಡಲು ನೀಡುತ್ತಾರೆ. ಉಪಾಧ್ಯಾಯರು ಸಮಯವರಿತು " ಮಗೂ, ಈ ಹೊತ್ತು ಗುಲಾಬಿ ಹೂ ಎಷ್ಟು ಚೆನ್ನಾಗಿದೆ ನೋಡಿದೆಯಾ ? ಹೋಗಿ ನೋಡು. ತೋಟದಲ್ಲಿ ಮೊನ್ನೆ ನೆಟ್ಟ ಬೀಜ ಮೊಳಕೆ ಬಂದಿವೆಯೇ ? ಪುಟ್ಟ ಮೀನನ್ನು ನೋಡಿದೆಯಾ ? ನೋಡು ಏನು ಮಾಡುತ್ತಿದೆ ?"--ಇವೇ ಮೊದಲಾದ ಒಂದೆರಡು ಮಾತು ಗಳನ್ನಾಡಿ ಮಕ್ಕಳ ಗಮನವನ್ನು ಯಾವುದಾದರೂ ಒಂದು ಹೂ, ಗಿಡ, ಆಟ ಅಥವಾ ಪ್ರಾಣಿಯ ಕಡೆಗೆ ತಿರುಗಿಸು ತ್ತಾರೆ. ಮಕ್ಕಳು ಉತ್ಸಾಹದಿಂದ ಓಡಿಹೋಗುತ್ತಾರೆ. ಇದೇ ಕಾಲದಲ್ಲಿ ಉಪಾಧ್ಯಾಯರು ಮಕ್ಕಳೊಡನೆ ಬಂದಿರುವ ಪೋಷಕರೊಡನೆ ಸ್ವಲ್ಪ ಹೊತ್ತು ಮಾತನಾಡಿ ಮಕ್ಕಳ ಪೋಷಣೆ ಮತ್ತು ಆರೋಗ್ಯದ ವಿಚಾರವಾಗಿ ಮುಖ್ಯ ವಿಷಯ ಗಳನ್ನು ತಿಳಿದುಕೊಂಡು ಸಂದರ್ಭಾನುಸಾರ ಕೆಲವು ಆವಶ್ಯ ವಾದ ಸಲಹೆಗಳನ್ನೀಯುವರು.

ಮಕ್ಕಳು ಶಾಲೆಗೆ ಬಂದಕೂಡಲೆ ತಮ್ಮ ಮೇಲಂಗಿಗಳನ್ನು[2] ತೆಗೆದು ಅವುಗಳನ್ನಿಡಲು ಏರ್ಪಡಿಸಿರುವ ಕೊಠಡಿಯಲ್ಲಿ ಒಬ್ಬೊ ಬ್ಬರಿಗೂ ಗೊತ್ತುಮಾಡಿಕೊಟ್ಟಿರುವ ಸ್ಥಳದಲ್ಲಿ ಇಡುತ್ತಾರೆ.

[2] ಇಂಗ್ಲೆಂಡ್ ಬಹಳ ಚಳಿದೇಶವಾದ್ದರಿಂದ ಮಕ್ಕಳು ಶಾಲೆಗೆ ಬರು ವಾಗ ಶಾಖವಾಗಿರಲು ಹೆಚ್ಚಿಗೆ ಬಟ್ಟೆಗಳನ್ನು ಹಾಕಿಕೊಂಡಿರುತ್ತಾರೆ.



ಮೇಲಂಗಿಗಳನ್ನಿಡುವ ಕೊಠಡಿ

ಅನಂತರ ಹಲ್ಲುಜ್ಜಿ,[3] ಮುಖಕೈಕಾಲುಗಳನ್ನು ತಾವೇ ಚೊಕ್ಕಟವಾಗಿ ತೊಳೆದುಕೊಳ್ಳುತ್ತಾರೆ. ಇದಾದ ಮೇಲೆ ಕೆಲವು ಶಾಲೆಗಳಲ್ಲಿ ಮಕ್ಕಳಿಗೆ ಹಾಲು, ಹಣ್ಣು, ಬಿಸ್ಕತ್ ಕೊಡುತ್ತಾರೆ. ಐದು ಆರು ವರ್ಷದ ಮಕ್ಕಳು ತಮಗಿಂತ ಚಿಕ್ಕವರಿಗೆ ಹಾಲು ತೆಗೆದುಕೊಂಡುಹೋಗಿ ಕೊಡುತ್ತಾರೆ.

ಅನಂತರ ೯-೩೦ ಘಂಟೆಯ ವರೆಗೆ ಮಕ್ಕಳು ತಮ್ಮಿಷ್ಟಕ್ಕೆ ತಾವೇ ಬೈಲಿನಲ್ಲಿ ಆಡುತ್ತಿರುವರು. ಚಿಕ್ಕಪುಟ್ಟ ಗುಂಪುಗಳಲ್ಲಿ ಒಬ್ಬರೊಡನೊಬ್ಬರು ಮಾತನಾಡುತ್ತ ಶಾಲೆಯ ತೋಟದಲ್ಲಿ ಬೆಳೆದ ಗಿಡಗಳನ್ನೂ ಅಲ್ಲಿ ಸಾಕಿರುವ ಪ್ರಾಣಿಗಳನ್ನೂ ನೋಡುತ್ತ ಮನಸ್ವಿಯಾಗಿ ಓಡಾಡುತ್ತಿರುವರು.

[3] ಇಂಗ್ಲೆಂಡಿನಲ್ಲಿ ಹಲ್ಲಿಗೆ ಸಂಬಂಧಪಟ್ಟ ಕಾಯಿಲೆ ಬಹಳವಾಗಿರುವುದರಿಂದ ಹಲ್ಲುಜ್ಜುವುದಕ್ಕೆ ಇಷ್ಟು ಪ್ರಾಮುಖ್ಯ ಬಂದಿದೆ.

೯-೩೦ ಘಂಟೆಯಿಂದ ಮಕ್ಕಳು ಪ್ರಾರ್ಥನೆ, ಹಾಡುವುದು, ಹಾಡಿನ ತಾಳಕ್ಕೆ ಸರಿಯಾಗಿ ಕುಣಿಯುವುದು, ಕೈಚಪ್ಪಾಳೆ ತಟ್ಟುವುದು, ಅಭಿನಯಿಸುವುದು—ಇವುಗಳಲ್ಲಿ ಕಾಲಕಳೆಯುವರು. ಕೆಲವುವೇಳೆ ಕಣ್ಣುಮುಚ್ಚಾಲೆ ಮೊದಲಾದ ಗುಂಪಿನ ಆಟಗಳನ್ನೂ ಆಡುವರು.

ಸುಮಾರು ೧೦-೩೦ ಘಂಟೆಗೆ ಕೈಕೆಲಸ : ಮಕ್ಕಳು ತಮಗೆ ಬೇಕಾದ ಸಾಮಾನುಗಳನ್ನು ಆರಿಸಿಕೊಂಡು, ಮಣಿ ಪೋಣಿಸುವುದು, ಕಾಗದ ಕತ್ತರಿಸಿ ಮಡಿಸುವುದು, ಜೇಡಿಮಣ್ಣಿನಿಂದ ಮಾದರಿಗಳನ್ನು ಮಾಡುವುದು, ಚಿತ್ರಗಳನ್ನು ಬರೆಯುವುದು, ಬಣ್ಣಹಾಕುವುದು, ಚಿತ್ರಗಳನ್ನು ಕತ್ತರಿಸಿ ಅಂಟಿಸುವುದು, ಹಳೆಯ ಸ್ಟ್ಯಾಂಪುಗಳನ್ನು ಒಂದು ಕ್ರಮವರಿತು ರಟ್ಟುಗಳಿಗೆ ಹಚ್ಚುವುದು, ಮರದ ಸಣ್ಣ ಸಣ್ಣ ತುಂಡುಗಳಿಂದ ಗೋಪುರ, ಮನೆ, ಸೇತುವೆ, ರೈಲು—ಇವುಗಳನ್ನು ಕಟ್ಟುವುದು ಮೊದಲಾದ ಕೆಲಸಗಳನ್ನು ಒಬ್ಬೊಬ್ಬರೇ ಮಾಡುತ್ತಾರೆ.

ಮಕ್ಕಳು ಹೀಗೆ ತಾವೇ ಆರಿಸಿಕೊಂಡ ಕೆಲಸಗಳಲ್ಲಿ ತೊಡಗಿರುವಾಗ ಶಾಲೆಯ ದಾದಿ ಮಕ್ಕಳ ದೇಹಸ್ಥಿತಿಯನ್ನು ಸ್ಥೂಲವಾಗಿ ಪರೀಕ್ಷಿಸುವಳು. ಏನಾದರೂ ಸ್ವಲ್ಪ ಅನುಮಾನ ಬಂದರೆ ಮಕ್ಕಳ ತೂಕ, ಶಾಖ, ನಾಡಿ ಮುಂತಾದುವನ್ನು ವಿವರವಾಗಿ ಪರೀಕ್ಷೆಮಾಡುವಳು. ಡಾಕ್ಟರು ವಾರಕ್ಕೊಂದು ಸಲವಾದರೂ ಶಾಲೆಗೆ ಬಂದು ಆವಶ್ಯಕವಿದ್ದ ಮಕ್ಕಳನ್ನು ಪರೀಕ್ಷಿಸುತ್ತಾರೆ. ಏನಾದರೂ ಕಾಯಿಲೆಯಾಗಲಿ ನ್ಯೂನತೆಯಾಗಲಿ ಕಂಡುಬಂದಲ್ಲಿ ಚಿಕಿತ್ಸೆಗಾಗಿ ಮಕ್ಕಳ ಆಸ್ಪತ್ರೆಗಳಿಗೆ ಕಳುಹಿಸುತ್ತಾರೆ.

೧೧ ಘಂಟೆಗೆ ಬಯಲಿನ ಆಟಗಳು. ಇದರಲ್ಲಿ ಅನೇಕ ವಿಧಗಳಿವೆ :

೧. **ಮರಳಿನ ಆಟಗಳು**-ಕೆಲವರು ಮರಳಿನಲ್ಲಿ ಗುಬ್ಬಚ್ಚಿ ಗೂಡು, ಮನೆ, ಕಾಂಪೌಂಡ್, ಗೋಪುರ—ಇವುಗಳನ್ನು ಕಟ್ಟುತ್ತಾರೆ. ಇವನ್ನು ಕಟ್ಟುತ್ತಿರುವ ಹಾಗೆಯೇ ಹಾಡುತ್ತಾರೆ. ಇನ್ನು ಕೆಲವರು ಮರಳಿನಲ್ಲಿ ಚಿತ್ರಗಳನ್ನು ಬರೆಯುತ್ತಾರೆ. ಒಂದೆರಡು ಮಕ್ಕಳು ಬಾವಿ ಕಾಲುವೆಗಳನ್ನು ಅಗೆಯುತ್ತಾರೆ. ಅಲ್ಲೊಬ್ಬರು ಇಲ್ಲೊಬ್ಬರು ಮರಳಿನಲ್ಲಿ ಉಂಡೆ ಕಡುಬು ಮೊದಲಾದುವನ್ನು ಮಾಡಿ ಒಡೆದು ಸಂತೋಷಪಡುತ್ತಾರೆ. ಇನ್ನು ಕೆಲವರು ಮರಳಿನಲ್ಲಿಯೇ ತೋಟಮಾಡುತ್ತಾರೆ. ಹಲವರು ಚಿಕ್ಕತಗಡಿನ ಡಬ್ಬಿಗಳಲ್ಲಿ ಮರಳನ್ನು ಅಳತೆಮಾಡಿ ದೊಡ್ಡ ದೊಡ್ಡ ಬಕೀಟುಗಳಿಗೆ ತುಂಬುತ್ತಾರೆ.

೨. **ನೀರಿನ ಆಟಗಳು**—ನೀರಿನ ತೊಟ್ಟಿಯಲ್ಲಿ ಓಡಾಡುವುದು, ದೋಣಿಗಳನ್ನು ಬಿಡುವುದು, ಬೊಂಬೆಗೆ ಸ್ನಾನಮಾಡಿಸುವುದು, ರಬ್ಬರ್ ಕೊಳವೆ, ಸಣ್ಣ ಬಾಯುಳ್ಳ ಸೀಸೆ ಅಥವಾ ಪಾತ್ರೆಗೆ ನೀರು ತುಂಬುವುದು[4]—ಹೀಗೆ ನೀರಿನಲ್ಲಿ ಆಡುವುದು ಮಕ್ಕಳಿಗೆ ಬಹಳ ಸಂತೋಷಕರ.

೩. **ತೋಟದ ಆಟಗಳು**— ಇವು ನಿಜವಾಗಿಯೂ ತೋಟದ ಕೆಲಸಗಳಾದರೂ ಮಕ್ಕಳಿಗೆ ಅವು ಆಟವಾಗಿಯೇ ಕಂಡುಬರುತ್ತವೆ. ತೋಟದಲ್ಲಿ ಅಗೆಯುವುದು, ಪಾತಿಗಳನ್ನು ಮಾಡುವುದು, ಬೀಜ ಅಥವಾ ಗಿಡಗಳನ್ನು ನೆಡುವುದು, ಕಳೆ ಕೀಳುವುದು, ಗಿಡಗಳಿಗೆ ನೀರುಹಾಕುವುದು ಇತ್ಯಾದಿ ಕೆಲಸಗಳು ಮಕ್ಕಳು ತೋಟದಲ್ಲಿ ಮಾಡುವ ಕೆಲಸಗಳು.

---

[4] ಇದು ಮಕ್ಕಳ ಹಸ್ತಕೌಶಲ್ಯ ಹೆಚ್ಚಲು ಸಹಾಯವಾಗುತ್ತದೆ. ಹೀಗೆ ನೀರನ್ನು ತುಂಬಿ ಅಭ್ಯಾಸವಾದ ಮಕ್ಕಳು ಮನೆಯಲ್ಲಿ ಕಾಫಿ ಆರಿಸುವಾಗ ಸ್ವಲ್ಪವೂ ಚೆಲ್ಲುವುದಿಲ್ಲವೆಂಬುದು ಅನುಭವದ ಮಾತು.

೪. **ಇತರ ಆಟಗಳು**—ಅನೇಕ ಮಕ್ಕಳು ತಮಗೆ ಮನಸ್ಸು ಬಂದ ಇತರ ಆಟಗಳನ್ನು ಆಡುತ್ತಾರೆ. ಗೊಂಬೆ ಆಟ ಆಡುವುದು, ಪ್ರಾಣಿಗಳಿಗೆ ತಿಂಡಿ ಹಾಕುವುದು, ಜಾರುಗುಪ್ಪೆಯಲ್ಲಿ[೬] ಜಾರುವುದು, ಉಯ್ಯಾಲೆ ತೂಗುವುದು, ಕುಪ್ಪಳಿಸುವುದು, ಮರದ ಚೌಕಟ್ಟಿನ ಮೇಲೆ ಹತ್ತುವುದು, ಅಲ್ಲಿಂದ ಕೆಳಕ್ಕೆ ಧುಮುಕುವುದು, ಭೂಮಿಯಿಂದ ಒಂದಡಿ ಎತ್ತರದಲ್ಲಿರುವ ಹಲಗೆಯ ಮೇಲೆ ಓಡಾಡುವುದು, ಮೋಟಾರು ಟೈರುಗಳನ್ನು ಗುಡುಗಿಸಿ ಆಡುವುದು, ಮೂರು ಚಕ್ರದ ಗಾಡಿಗಳಲ್ಲಿ ಓಡಾಡುವುದು ಇತ್ಯಾದಿ.

ಹೀಗೆ ಎಲ್ಲಿ ನೋಡಿದರೂ ಸಣ್ಣ ಪುಟ್ಟ ಮಕ್ಕಳು ಯಾವುದೊಂದು ಭೀತಿಯೂ ಇಲ್ಲದೆ ಸ್ವತಂತ್ರರಾಗಿ ಆನಂದದಿಂದ ಹಾಡುತ್ತಾ, ಕುಣಿಯುತ್ತಾ ಆಡುತ್ತಿರುವರು. ಇದರಿಂದ ಮಕ್ಕಳು ಯಾವಾಗಲೂ ಸಂತೋಷಚಿತ್ತರಾಗಿರುವರು. ಇದಕ್ಕಿಂತಲೂ ಹೆಚ್ಚು ಸಂತೋಷಕರವಾದ ನೋಟವು ವಿದ್ಯಾಪ್ರಪಂಚದಲ್ಲಿ ಮತ್ತೆಲ್ಲಿಯೂ ಕಾಣುವುದಿಲ್ಲ.

೧೧-೪೫ ಘಂಟೆಯ ವೇಳೆಗೆ ಮಧ್ಯಾಹ್ನದ ಊಟಕ್ಕೆ ಅಣಿಯಾಗುವುದು. ಕೆಲವು ಮಕ್ಕಳು ಜೊತೆ ಜೊತೆಯಾಗಿ ಸೇರಿ ಮೇಜುಗಳನ್ನು ಜೋಡಿಸಿ ಅವುಗಳ ಮೇಲೆ ಬಟ್ಟೆ ಹಾಸಿ, ತಟ್ಟೆ ಬಟ್ಟಲು ಚಮಚಗಳನ್ನು ಇಡುತ್ತಾರೆ. ಇತರರು ದೇಹಬಾಧೆಯನ್ನು ತೀರಿಸಿಕೊಂಡು ಮುಖಕೈಕಾಲುಗಳನ್ನು ಚೊಕ್ಕಟವಾಗಿ ತೊಳೆದುಕೊಂಡು ಊಟಕ್ಕೆ ಸಿದ್ಧರಾಗುವರು. ಈ ಊಟಕ್ಕೆ ಶಾಸ್ತ್ರೀಯವಾಗಿ ನಿರ್ಧರಿಸಿರುವ ಪುಷ್ಟಿಯಾದ ಮತ್ತು


---


[೬] ಇಂಥಾ ದೃಶ್ಯಗಳ ಚಿತ್ರವನ್ನು ಮುಂದೆ ಕೊಟ್ಟಿದೆ.

ಆರೋಗ್ಯಕರವಾದ ಆಹಾರವನ್ನು ಒದಗಿಸುತ್ತಾರೆ. ಊಟವಾದ ಮೇಲೆ ಮಕ್ಕಳೇ ತಟ್ಟೆಗಳನ್ನೂ ಬಟ್ಟಲುಗಳನ್ನೂ ತೊಳೆದು ಕ್ರಮವಾಗಿಡುತ್ತಾರೆ.

೧೨-೩೦ ಯ ವೇಳೆಗೆ ವಿಶ್ರಾಂತಿಗೆ ಅಣಿಮಾಡುವುದು. ಅನೇಕ ಮಕ್ಕಳು ತಾವೇ ಅಲ್ಲಿರುವ ಕ್ಯಾಂಪ್‌ಕಾಟ್ ತರದ ಮಂಚಗಳನ್ನು ಹಾಕಿಕೊಂಡು ಮಲಗುತ್ತಾರೆ. ಬಹಳ ಚಿಕ್ಕ ಮಕ್ಕಳಿಗೆ ದೊಡ್ಡಮಕ್ಕಳಾಗಲಿ ಉಪಾಧ್ಯಾಯರಾಗಲಿ ಮಂಚಗಳನ್ನು ಹಾಕಿಕೊಳ್ಳಲು ಸಹಾಯ ಮಾಡುತ್ತಾರೆ. ಮಕ್ಕಳಿಗೆ ನಿದ್ದೆ ಬರಲಿ ಬಾರದೆ ಇರಲಿ, ಅವರು ಇತರರಿಗೆ ತೊಂದರೆಯಾಗದಂತೆ ನಿಶ್ಶಬ್ದವಾಗಿ ಸುಮಾರು ಎರಡು ಘಂಟೆಗಳ ಕಾಲ ಮಲಗಿರುತ್ತಾರೆ. ಈ ಮದ್ಯಾಹ್ನದ ವಿಶ್ರಾಂತಿ ಅಥವಾ ನಿದ್ದೆ ಮಕ್ಕಳಿಗೆ ಬಹಳ ಆವಶ್ಯಕ.

ಮಕ್ಕಳು ಮದ್ಯಾಹ್ನ ನಿದ್ದೆಹೋದರೆ ರಾತ್ರಿ ಸರಿಯಾಗಿ ನಿದ್ದೆಮಾಡುವುದಿಲ್ಲವೆಂದು ಸಾಮಾನ್ಯವಾಗಿ ಜನರ ಅಭಿಪ್ರಾಯ. ಇದು ಸರಿಯಲ್ಲ. ಮುಂದಿನ ಪುಟದ ೧ನೆಯ ಚಿತ್ರವು ಮಧ್ಯಾಹ್ನ ನಿದ್ದೆಹೋಗದ ಮಗುವಿಗಿಂತ ನಿದ್ದೆಮಾಡಿದ ಮಗು ರಾತ್ರಿ ಮಲಗಿದ ೨ನೆಯ ಗಂಟೆಯಿಂದ ೯ನೆಯ ಗಂಟೆಯ ವರೆಗೆ ಗಾಢವಾಗಿ ನಿದ್ರಿಸುವುದೆಂಬುದನ್ನು ತೋರಿಸುತ್ತದೆ. ೩ ವರ್ಷದ ಮಕ್ಕಳಿಗೆ ಪ್ರತಿದಿನವೂ ಸುಮಾರು ೧೨-೧೩ ಘಂಟೆಗಳ ಕಾಲವಾದರೂ ನಿದ್ದೆ ಬೇಕು. ಅದರಲ್ಲಿ ಮಧ್ಯಾಹ್ನ ೨ ಘಂಟೆಗಳ ಕಾಲ; ರಾತ್ರಿ ೧೦-೧೧ ಘಂಟೆಗಳ ಕಾಲ; ಮಧ್ಯಾಹ್ನದ ನಿದ್ರೆಯ ಕಾಲವನ್ನು ಕ್ರಮ ಕ್ರಮವಾಗಿ ಕಡಮೆ ಮಾಡಿ ಆರು ವರ್ಷಗಳಾದ ಮೇಲೆ ಪೂರ್ತಿಯಾಗಿ ತಪ್ಪಿಸುವುದು ಒಳ್ಳೆಯದು. ಮಕ್ಕಳು ಮಲಗಿಕೊಳ್ಳುವ ಕ್ರಮ ಅಥವಾ


1200
1000
800
600
400
200
— ನಿದ್ದೆ ಯಾದಮೇಲೆ
.... ನಿದ್ದೆ ಮಾಡದಿದ್ದಾಗ
0 1 2 3 4 5 6 7 8 9 10 11
ಗಂಟೆಗಳು



ಮಧ್ಯಾಹ್ನದ ವಿಶ್ರಾಂತಿ

ರೀತಿಯ ವಿಷಯವಾಗಿ ಒಂದೆರಡು ಮಾತನ್ನು ಇಲ್ಲಿ ಹೇಳಿದರೆ ಬಹುಶಃ ತಪ್ಪಾಗಲಾರದು. ಮಕ್ಕಳು ಮಲಗಿಕೊಳ್ಳುವಾಗ ಬೆನ್ನಿನ ಮೇಲೆ ಮಲಗಿಕೊಳ್ಳಬಾರದು. ಸಾಮಾನ್ಯವಾಗಿ ನಮ್ಮಲ್ಲಿ ಅನೇಕ ಮಕ್ಕಳಿಗೆ ಬೆನ್ನಿನ ಮೇಲೆ ಮಲಗುವ ಕೆಟ್ಟ ಅಭ್ಯಾಸ ಬಂದಿದೆ. ತಲೆದಿಂಬಿಲ್ಲದೆ ಹೀಗೆ ಮಲಗಿರುವಾಗ ಅವರ ಬಾಯಿ ತೆರೆದು, ನಾಲಗೆ ಗಂಟಲಿಗೆ ಅಡ್ಡವಾಗಿ ಹಿಂದಕ್ಕೆ ಬೀಳುತ್ತದೆ. ಇದರಿಂದ ಮೂಗಿನ ಮೂಲಕ ಉಸಿರಾಡುವುದು ಕಷ್ಟವಾಗಿ ಬಾಯಿಯ ಮೂಲಕ ಉಸಿರಾಡುವ ಅಭ್ಯಾಸವಾಗುವುದು. ಮುಖವನ್ನು ಒಂದು ಕಡೆಗೆ ತಿರುಗಿಸಿಕೊಂಡು ಹೊಟ್ಟೆಯ ಮೇಲೆ ಬೋರಲಾಗಿ ಮಲಗಿಕೊಂಡರೆ ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿ ಬರುವ ನೆಗಡಿ, ಕೆಮ್ಮಲು, ಟಾನ್ಸಿಲ್ಸ್ ಮುಂತಾದ ಕಾಯಿಲೆಗಳು ಬರುವುದಿಲ್ಲ. ಸ್ವಲ್ಪ ವಯಸ್ಸಾದ ಮೇಲೆ ಒಂದು ಕಡೆಗೆ, ಮುಖ್ಯವಾಗಿ ಬಲಗಡೆಗೆ ತಿರುಗಿಕೊಂಡು, ಮಲಗಬೇಕು. ಹಾಗೆ ಮಲಗಿದರೆ ಗೊರಕೆ ಹೊಡೆಯುವುದು ಬಹಳ ಮಟ್ಟಿಗೆ ಕಡಮೆಯಾಗುವುದು. ಇವೆಲ್ಲಾ ವಿಜ್ಞಾನದ ಪ್ರಯೋಗಗಳಿಂದ ತಿಳಿದು ಬಂದಿರುವ ವಿಷಯಗಳು. ಈ ಪ್ರಯೋಗಗಳ ಫಲಿತಾಂಶಗಳನ್ನನುಸರಿಸಿಯೇ ಶಿಶುವಿಹಾರದಲ್ಲಿ ಮಕ್ಕಳಿಗೆ ಮಧ್ಯಾಹ್ನದ ವಿಶ್ರಾಂತಿಗೆ ಏರ್ಪಾಡು ಮಾಡಿದ್ದಾರೆ.

ಸುಮಾರು ೨-೩೦ ಘಂಟೆಗೆ ಮಕ್ಕಳು ಒಬ್ಬೊಬ್ಬರಾಗಿ ಏಳುತ್ತಾರೆ. ಎದ್ದ ಕೂಡಲೇ ತಾವೇ ಕಕ್ಕಸಿಗೆ ಹೋಗಿ, ಮುಖ ಕೈಕಾಲು ತೊಳೆದುಕೊಳ್ಳುತ್ತಾರೆ. ಅನಂತರ ಸುಮಾರು ಅರ್ಧ ಗಂಟೆಯ ಕಾಲ ಕಥೆ ಕೇಳುವುದು, ಚಿತ್ರಗಳನ್ನು ನೋಡುವುದು, ಹಾಡುಗಳು ಇತ್ಯಾದಿ. ಈ ವೇಳೆಯಲ್ಲಿ ಉಪಾಧ್ಯಾಯರು ಮಕ್ಕಳಿಗೆ ಅನೇಕ ನೀತಿ ಮತ್ತು ಬುದ್ಧಿಯ ಕಥೆಗಳನ್ನು

ಬಹಳ ಸುಲಭರೂಪದಲ್ಲಿ ಹೇಳುತ್ತಾರೆ. ಪುಸ್ತಕಗಳಲ್ಲಿ ಮತ್ತು ಪಟಗಳಲ್ಲಿರುವ ಗಡಿಯಾರ, ಎಲೆಕ್ಟ್ರಿಕ್ ಬೆಲ್, ಎಲೆಕ್ಟ್ರಿಕ್ ದೀಪ, ಉಷ್ಣಮಾಪಕಯಂತ್ರ (Thermometer), ಬೈಸಿಕಲ್ ಬೆಲ್ ಮೊದಲಾದ ಸಾಮಾನುಗಳನ್ನು ತೋರಿಸಿ ಅವುಗಳ ವಿಷಯವಾಗಿ ಮಾತನಾಡುತ್ತಾರೆ. ಹಬ್ಬಹುಣ್ಣಿಮೆಗಳ ಕಾಲದಲ್ಲಿ ಅವುಗಳ ಪ್ರಾಮುಖ್ಯ ಏನು, ಅವುಗಳನ್ನು ಜನರು ಏತಕ್ಕೆ ಯಾವ ವಿಧವಾಗಿ ಆಚರಿಸುತ್ತಾರೆ ಮುಂತಾದ ವಿಷಯಗಳನ್ನು ಮಕ್ಕಳ ಯೋಗ್ಯತೆಗೆ ತಕ್ಕಹಾಗೆ ತಿಳಿಸುತ್ತಾರೆ. ಸಾಧ್ಯವಾದಷ್ಟು ಮಟ್ಟಿಗೆ ಈ ವಿಷಯುಗಳನ್ನು ಮಕ್ಕಳಿಂದಲೇ ಹೇಳಿಸುತ್ತಾರೆ. ಸುಮಾರು ೩-೧೫ ಕ್ಕೆ ಹಾಲು, ಬಿಸ್ಕತ್ ಕೊಡುತ್ತಾರೆ. ಆ ಮೇಲೆ ಮಕ್ಕಳ ಮಾತುಕತೆಗಳು, ಪ್ರಶ್ನೆಗಳು: ಈ ವೇಳೆಯಲ್ಲಿ ಮಕ್ಕಳು ಬಹಳ ಉತ್ಸಾಹದಿಂದ ತಾವು ನೋಡಿರುವ ಅಥವಾ ಕೇಳಿರುವ ಜನರು, ಗಿಡಗಳು, ಪ್ರಾಣಿ ಮತ್ತು ಚಿತ್ರಗಳ ವಿಷಯವಾಗಿಯೂ ಇನ್ನೂ ಇತರ ವಿಷಯವಾಗಿಯೂ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಅಲ್ಲದೆ ಅವುಗಳ ವಿಷಯವಾಗಿ ತಮಗೆ ತಿಳಿದುದನ್ನು ಹೇಳಲು ಉತ್ಸುಕತೆಯಿಂದ ಮುಂದೆ ಬರುತ್ತಾರೆ. ಪುನಃ ಬಯಲಿನಲ್ಲಿ ಆಟವಾಡಿದ ಮೇಲೆ ಸುಮಾರು ೪ ಘಂಟೆಯ ವೇಳೆಗೆ ಮನೆಗೆ ಹೋಗುವರು.

ಮೇಲಿನ ವಿವರಣೆಯಿಂದ ಶಿಶುವಿಹಾರಗಳ ಕೆಲಸಗಳು ಒಂದು ನಿರ್ದಿಷ್ಟವಾದ ವೇಳಾಪತ್ರಿಕೆಯನ್ನು ಚಾಚೂ ತಪ್ಪದೆ ಅನುಸರಿಸುತ್ತವೆ ಎಂದು ಯಾರೂ ತಿಳಿಯಬಾರದು. ನಾವು ನೋಡಿರುವುದು ಶಿಶುವಿಹಾರಗಳ ಕೆಲಸದ ಒಂದು ಸಾಮಾನ್ಯ ಚಿತ್ರ. ಮಕ್ಕಳ ಸ್ವಭಾವವನ್ನೂ, ಅಪೇಕ್ಷೆಗಳನ್ನೂ ಅನುಸರಿಸಿ ಕೆಲಸಗಳ ಕ್ರಮವನ್ನು ಬದಲಾಯಿಸುತ್ತಾರೆ. ಮಕ್ಕಳು ಇಂತಹ

ಆಟಗಳನ್ನೇ ಆಡಬೇಕು, ಈ ವೇಳೆಯಲ್ಲಿ ಈ ಕೆಲಸವನ್ನೇ ಮಾಡಬೇಕು ಎಂಬ ನಿರ್ಬಂಧವಿಲ್ಲ. ಅಲ್ಲಿನ ಉಪಾಧ್ಯಾಯರು ಮಕ್ಕಳ ಮನಶ್ಶಾಸ್ತ್ರದಲ್ಲಿ ತಕ್ಕಮಟ್ಟಿಗೆ ಪರಿಶ್ರಮವುಳ್ಳವರಾದು ದರಿಂದ ಸಮಯವರಿತು ಸೂಚನೆ, ಉತ್ತೇಜನ, ದೃಷ್ಟಾಂತ ಮತ್ತು ಸಲಹೆಗಳ ಮೂಲಕ ಮಕ್ಕಳು ಒಂದು ಕೆಲಸವನ್ನು ಮುಗಿಸಿ ಮತ್ತೊಂದು ಕೆಲಸವನ್ನು ಪ್ರಾರಂಭಿಸುವಂತೆ ಪ್ರೇರಿ ಸುತ್ತಾರೆ.

ಹೀಗೆ ಶಿಶುವಿಹಾರಗಳಲ್ಲಿ ನಡೆಯುವ ಕೆಲಸವು ಮನೆಯಲ್ಲಿ ಮಕ್ಕಳು ಮಾಡುವ ಕೆಲಸವೇ ಆಗಿರುತ್ತದೆ. ಆದ್ದರಿಂದ ಶಿಶು ವಿಹಾರಗಳನ್ನು "ಮಾದರಿಯ ಮನೆಗಳು" ಅಥವಾ "ಆದರ್ಶ ಗೃಹಗಳು" ಎಂದು ಹೇಳಬಹುದು. ಅಲ್ಲಿ ನಡೆಯುವ ಕೆಲಸ ಗಳು ಮಕ್ಕಳ ಮನೋವೃತ್ತಿ, ಅವರ ಬುದ್ಧಿಶಕ್ತಿ ಮತ್ತು ಸಹಜವಾದ ಆಸಕ್ತಿಗಳನ್ನು ಅನುಸರಿಸಿ ರೂಪುಗೊಳ್ಳುತ್ತವೆ. ಒಟ್ಟಿನಲ್ಲಿ ಈ ಶಿಶುವಿಹಾರದ ಕೆಲಸವನ್ನು ನೋಡಿದ್ದರಿಂದ ಅವು ಗಳ ಮುಖ್ಯ ಲಕ್ಷಣಗಳನ್ನು ಈ ರೀತಿ ವಿಂಗಡಿಸಬಹುದು.

೧. ಸ್ವಾತಂತ್ರ್ಯವೇ ಶಿಶುವಿಹಾರದ ಹೆಗ್ಗುರುತು. ಇಲ್ಲಿ ಮಕ್ಕಳನ್ನು ಹೆದರಿಕೆ ಬೆದರಿಕೆಗಳಿಂದ ಆಳುವುದಿಲ್ಲ. ಮಕ್ಕಳು ಯಾವ ವಿಧವಾದ ನಿರ್ಬಂಧಕ್ಕೂ ಒಳಗಾಗದೆ ತಮಗೆ ಇಷ್ಟ ವಾದ ಕೆಲಸಗಳಲ್ಲಿ ಸ್ವತಂತ್ರವಾಗಿ ತೊಡಗಿರಲು ಬೇಕಾದಷ್ಟು ಅವಕಾಶಗಳಿವೆ. ಇದು ಶಿಶುವಿಹಾರಗಳ ಮುಖ್ಯವಾದ ಅಂಶ.

೨. ಶಿಶುಶಾಲೆಗಳಲ್ಲಿ ಮಕ್ಕಳ ದೇಹಪೋಷಣೆಗೂ, ಬೆಳವಣಿ ಗೆಗೂ ಹೆಚ್ಚು ಪ್ರಾಮುಖ್ಯ ದೊರೆಯುತ್ತದೆ.

೩. ಆಟವಾಡುವುದು ಮಕ್ಕಳ ಹುಟ್ಟುಗುಣ. ಶಿಶುವಿಹಾರ ಗಳು ಈ ಮುಖ್ಯ ಸ್ವಭಾವವನ್ನು ಅನುಸರಿಸಿ ಆಟಗಳ ಮೂಲ

ಕವೇ ಅವರ ಮಾನಸಿಕ ಸಾಂಘಿಕ ಮತ್ತು ಶೀಲ ಶಕ್ತಿಗಳನ್ನು ಅಭಿವೃದ್ಧಿಗೊಳಿಸುತ್ತವೆ.

೪. ಓದುವುದು, ಬರೆಯುವುದು, ಲೆಕ್ಕಮಾಡುವುದು—ಇವುಗಳಿಗೆ ಶಿಶುವಿಹಾರಗಳಲ್ಲಿ ಅವಕಾಶವಿಲ್ಲ.

---

## ೫. ಅಲ್ಲಿಯ ಶಿಕ್ಷಣ

ಶಿಶುವಿಹಾರಗಳ ಕೆಲಸಗಳನ್ನು ಸ್ಥೂಲವಾಗಿ ನೋಡಿದರೆ ಅಲ್ಲಿ ಬರಿ ಆಟಕ್ಕೇ ಪ್ರಾಶಸ್ತ್ಯ, ಅಲ್ಲಿ ಮಕ್ಕಳಿಗೆ ಶಿಕ್ಷಣ ಹೇಗೆ ದೊರೆಯುತ್ತದೆ ಎಂದು ಅನೇಕರಿಗೆ ಸಂಶಯ ತೋರಬಹುದು. ಸ್ವಲ್ಪ ಪರಿಶೀಲಿಸಿದರೆ ಆ ಆಟದ ಮಹತ್ವವು ವ್ಯಕ್ತವಾಗುತ್ತದೆ. ಆರೋಗ್ಯವಾಗಿರುವ ಒಬ್ಬ ಸಣ್ಣ ಹುಡುಗನನ್ನು ನೋಡಿ; ಅವನು ಒಂದು ಗಳಿಗೆಯಾದರೂ ಸುಮ್ಮನಿರುವುದಿಲ್ಲ. ಒಂದು ಕೋಲನ್ನು ತೆಗೆದುಕೊಂಡು ಆಡಿಸುವುದೋ ಡಬ್ಬವನ್ನು ಹೊಡೆಯುವುದೋ ನೆಲದಲ್ಲಿ ಗುಂಡಿಮಾಡುವುದೋ ಇಲ್ಲವೆ ಮಣ್ಣಿನ ಕಟ್ಟೆ ಹಾಕುವುದೋ—ಹೀಗೆ ಏನಾದರೂ ಕೆಲಸಮಾಡುತ್ತಲೇ ಇರುವನು. ಇದೇನೂ ನಾವು ದಿನವಹಿ ನೋಡದ ವಿಷಯವಲ್ಲ. ಆದರೂ ಹುಡುಗನು ಚೇಷ್ಟೆ ಮಾಡುತ್ತಾನೆ ಎಂದು ನಾವು ಬೇಜಾರುಪಟ್ಟುಕೊಳ್ಳುತ್ತೇವೆಯೇ ಹೊರತು ಆ ಚೇಷ್ಟೆಗಳು ಮಗುವಿನ ಶಾರೀರಕ ಮಾನಸಿಕ ಶಕ್ತಿಗಳು ಬೆಳೆಯುವುದಕ್ಕೆ ಸಾಧನಗಳೆಂದು ತಿಳಿಯುವುದಿಲ್ಲ. ಏಕೆಂದರೆ ಈಗಲೂ ಸಹ ಕಲಿಯುವುದೆಂದರೆ ಪುಸ್ತಕ

ವನ್ನು ಹಿಡಿದುಕೊಂಡು ಓದುವುದು, ಪಾಠಶಾಲೆಯೆಂದರೆ ಮಕ್ಕಳು ಪುಸ್ತಕಗಳನ್ನು ನೋಡುತ್ತ ಉಪಾಧ್ಯಾಯರು ಹೇಳುವುದನ್ನು ಕೇಳುತ್ತ ನಿಶ್ಶಬ್ದವಾಗಿ ಅಲುಗಾಡದೆ ಕುಳಿತಿರುವ ಸ್ಥಳ ಎಂದು ನಮ್ಮೆಲ್ಲರನೇಕರ ಭಾವನೆ. ಉದಾಹರಣೆಗಾಗಿ ಹುಡುಗರು ಮನೆಯಲ್ಲಿ ಓಡುವುದು, ಬಾಗಿಲನ್ನು ಹಾಕಿ ತೆಗೆಯುವುದು, ಕುರ್ಚಿಯ ಮೇಲೆ ಹತ್ತುವುದು, ಕೂಗಾಡುವುದು–ಹೀಗೆ ಮಾಡುತ್ತಿದ್ದರೆ ತಾಯಿತಂದೆಗಳು ಮಕ್ಕಳನ್ನು ಗದರಿಸಿ ಕೂಗಾಡುವುದುಂಟು. ಹಾಗಲ್ಲದೆ ಏನೂ ಮಾಡದೆ ಸುಮ್ಮನೆ ಕುಳಿತಿದ್ದರೆ "ನೀನು ಜಾಣ" ಎಂದು ಮುದ್ದಿಸುತ್ತಾರೆ. ಅದೇ ರೀತಿಯಲ್ಲಿ ಹುಡುಗನು ಹೊಲ ತೋಟ ಮುಂತಾದುವುಗಳಲ್ಲಿ ಸುತ್ತುತ್ತಾ ಜೀರುದುಂಬಿಯನ್ನು ಹಿಡಿಯುವುದೋ, ಹಕ್ಕಿಗಳ ಗೂಡನ್ನು ಕೀಳುವುದೋ, ಮಾವಿನಮರ ಹತ್ತಿಕಾಯಿಗಳನ್ನು ಬೀಳಿಸುವುದೋ–ಹೀಗೆ ಮಾಡುತ್ತಿದ್ದರೆ 'ಅಯ್ಯೋ! ಅಪ್ಪಾಪೋಲಿ' ಎನ್ನುತ್ತಾರೆ. ಇದಕ್ಕೆ ಬದಲಾಗಿ ಗಣಿತವನ್ನೋ ಶಬ್ದಾದರ್ಶವನ್ನೋ ಮುಂದಿಟ್ಟುಕೊಂಡು ಕುಳಿತಿದ್ದರೆ, 'ಪರವಾ ಇಲ್ಲ, ಇವನು ಒಬ್ಬ ಬಿ.ಎ. ಆದರೂ ಆಗುತ್ತಾನೆ' ಎಂದು ಸಂತೋಷಪಡುತ್ತಾರೆ.


ಮಕ್ಕಳ ಇಂತಹ ವರ್ತನೆಯ ವಿಷಯದಲ್ಲಿ ಅನೇಕ ಶಾಸ್ತ್ರಜ್ಞರು ಪ್ರಯೋಗ ನಡೆಸಿ ಒಂದು ಮೂಲೆಯಲ್ಲಿ ಕುಳಿತು ಕಲಿಯುವುದು ವಯಸ್ಸಾದವರಿಗೆ ಸರಿಯಾದ ಮಾರ್ಗ, ಆಡುತ್ತಾ ಓಡುತ್ತಾ ಕೆಲಸಮಾಡುತ್ತಾ ಕಲಿಯುವುದು ಹುಡುಗರಿಗೆ ಸಹಜವಾದ ಮಾರ್ಗ ಎಂದು ನಿರ್ಧರಿಸಿದ್ದಾರೆ. ಅಲ್ಲದೆ ಶಾಸ್ತ್ರ, ಸಾಹಿತ್ಯ, ವಿಜ್ಞಾನ ಮುಂತಾದ ಪಾಠಗಳಿಂದ ಮಕ್ಕಳ ಬುದ್ಧಿಯು ಎಷ್ಟು ಪಕ್ವವಾಗುವುದೋ, ಕೆಲಸಮಾಡುವುದ

ರಿಂದಲೂ, ಆಟವಾಡುವುದರಿಂದಲೂ ಅಷ್ಟೇ ಪಕ್ವವಾಗುವುದ ರಲ್ಲಿ ಸ್ವಲ್ಪವೂ ಸಂದೇಹವಿಲ್ಲ ಎಂಬುದೂ ಶಾಸ್ತ್ರಜ್ಞರ ಅಭಿಪ್ರಾಯ. ಸಣ್ಣಮಕ್ಕಳ ವಿಷಯದಲ್ಲಿ ಇದು ಕೆಲಸ, ಇದು ಆಟ ಎಂದು ವಿಂಗಡಿಸಲು ಪ್ರಯತ್ನಿಸುವುದು ಸಾಧುವಲ್ಲ. ನಮಗೆ ಯಾವುದು ಬರಿ ಆಟವಾಗಿ ಕಂಡುಬರುತ್ತಿದೆಯೋ ಅದೇ ಚಿಕ್ಕ ಮಕ್ಕಳಿಗೆ ಉತ್ತಮವಾದ ಕೆಲಸವಾಗಿ ಪರಿಣಮಿಸುವುದು. ಮಕ್ಕಳಿಗೆ ವಿಷಯಗಳು ತಿಳಿಯಬೇಕಾದರೆ ಶಿಕ್ಷಣದಿಂದಲೇ ಎಂಬ ಮತ ಈಗ ಮಾಯವಾಗುತ್ತಿದೆ. ಯಾವ ವಿಷಯಗಳು ಶಿಕ್ಷಣದಿಂದಲೇ ಸಾಧ್ಯ ಎಂದು ಭಾವಿಸಿದ್ದರೊ ಅವುಗಳಲ್ಲಿ ಅನೇಕ ವಿಷಯಗಳನ್ನು ಮಕ್ಕಳು ತಮ್ಮಷ್ಟಕ್ಕೆ ತಾವೇ ಆಟ ದಲ್ಲಿಯೇ ಕಲಿಯಬಲ್ಲರೆಂಬುದು ಈಗಿನ ಮನಶ್ಶಾಸ್ತ್ರಜ್ಞರ ಅಭಿಪ್ರಾಯ. ಮಕ್ಕಳಿಗೆ ಆಟ ಸ್ವಾಭಾವಿಕವಾಗಿ ಬಂದದ್ದು. ಅನ್ನ, ನೀರು ಹೇಗೆ ಆವಶ್ಯಕವೋ ಆಟವೂ ಹಾಗೆಯೇ ಅಗತ್ಯ. ಅದು ಅವರ ಶಾರೀರಕಶಕ್ತಿಯನ್ನು ಹೆಚ್ಚಿಸುತ್ತದೆ; ವ್ಯಕ್ತಿತ್ವವನ್ನು ಬೆಳೆಸುತ್ತದೆ; ಬುದ್ಧಿಶಕ್ತಿಯನ್ನು ವಿಕಾಸಗೊಳಿಸುತ್ತದೆ; ಸ್ವತಃ ಆಲೋಚಿಸುವ ಶಕ್ತಿಯನ್ನು ಅಭ್ಯಾಸಮಾಡಿಕೊಡುತ್ತದೆ. ಅಷ್ಟೇ ಅಲ್ಲ. ಒಂದು ವಸ್ತುವನ್ನು ಇನ್ನೊಂದು ವಸ್ತುವಿನೊಂದಿಗೆ ಹೋಲಿಸಿ ತೂಕಮಾಡಿ ಅದರ ಬೆಲೆಯನ್ನು ಕಂಡುಹಿಡಿದು ಅವುಗಳ ವಿಷಯ ದಲ್ಲಿ ಒಂದು ತೀರ್ಮಾನಕ್ಕೆ ಬರಬಲ್ಲ ಸಾಮರ್ಥ್ಯವನ್ನು ಉಂಟು ಮಾಡಿಕೊಡುತ್ತದೆ. ಇವುಗಳ ಜೊತೆಗೆ ಮಗುವಿನ ರಾಗ ಭಾವ ಗಳನ್ನು ಒಂದು ಹದಕ್ಕೆ ತಂದುಕೊಡುತ್ತದೆ. ಮಗುವಿನ ಶೀಲ ವನ್ನು ಉತ್ತಮಗೊಳಿಸಿ ಆತ್ಮಾವಲಂಬನ, ಆತ್ಮಸಂಯಮ, ಕ್ಷಮೆ, ಔದ್ಯೋಗಿಕಶೀಲ ಮೊದಲಾದ ಗುಣಗಳನ್ನು ಸಂಪಾದಿಸಿಕೊಡುತ್ತದೆ. ಒಟ್ಟಿನಲ್ಲಿ ಆಟವು ಮಕ್ಕಳ ಶರೀರ, ಮನಸ್ಸು,

ಶೀಲ, ವ್ಯಕ್ತಿತ್ವ ಇವುಗಳ ವಿಷಯದಲ್ಲಿ ಸಂಪೂರ್ಣವಾದ ಶಿಕ್ಷಣವನ್ನು ಒದಗಿಸಿಕೊಡುತ್ತದೆ ಎನ್ನಬಹುದು. ಇದರಿಂದ ಮಕ್ಕಳಿಗೆ ಆಟವು ಎಷ್ಟರಮಟ್ಟಿಗೆ ಅಗತ್ಯ ಎಂಬುದನ್ನು ತಿಳಿಯಬಹುದು. "ಮಕ್ಕಳು ಚಿಕ್ಕವರಾಗಿರುವುದರಿಂದ ಆಡುವುದಿಲ್ಲ, ಆದರೆ ಅವರು ಆಟವಾಡಲಿ ಎಂದು ಚಿಕ್ಕವರಾಗಿದ್ದಾರೆ" ಎಂಬ ಮನಶ್ಶಾಸ್ತ್ರಜ್ಞನ ಮಾತು ಆಟದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಈ ದೃಷ್ಟಿಯಿಂದ ಶಿಶುವಿಹಾರಗಳಲ್ಲಿ ಮಕ್ಕಳಿಗೆ ಆಟಗಳ ಮೂಲಕವೇ ವಿದ್ಯಾಭ್ಯಾಸ ಮಾಡಿಸುವುದು.

ಮಕ್ಕಳ ದೈಹಿಕ, ಶೀಲ ಮತ್ತು ಬುದ್ಧಿಯ ಬೆಳವಣಿಗೆಯೇ ನಿಜವಾದ ವಿದ್ಯಾಭ್ಯಾಸದ ಗುರಿ ಎಂದು ಹಿಂದೆಯೇ ತಿಳಿಸಿದೆಯಷ್ಟೆ. ಇದು ಶಿಶುವಿಹಾರಗಳ ಕಲಾಪಗಳಿಂದ ಹೇಗೆ ಸಾಧ್ಯ ಎಂಬುದನ್ನು ನೋಡೋಣ.

೧. **ಶರೀರದ ಬೆಳವಣಿಗೆ**—ಮೊದಲು ಶರೀರದ ಬೆಳವಣಿಗೆಯನ್ನು ತೆಗೆದುಕೊಳ್ಳೋಣ. ಇದಕ್ಕೆ ಅಗತ್ಯವಾಗಿ ಬೇಕಾದುವು ಪುಷ್ಟಿಯಾದ ಮತ್ತು ಆರೋಗ್ಯಕರವಾದ ಆಹಾರ, ಶುದ್ಧವಾದ ಗಾಳಿ, ಬೆಳಕು, ಬಿಸಿಲು, ಮಕ್ಕಳ ಯೋಗ್ಯತೆಗೆ ತಕ್ಕ ಅಂಗಸಾಧನೆ, ಕಾಲಕಾಲಕ್ಕೆ ವಿಶ್ರಾಂತಿ, ಶುಚಿತ್ವ ಕ್ರಮವಾದ ವೈದ್ಯಪರೀಕ್ಷೆ, ತಕ್ಕ ಚಿಕಿತ್ಸೆ. ಇವುಗಳ ಜೊತೆಗೆ, ತನಗೆ ರಕ್ಷಣೆ ಇದೆ, ತನ್ನನ್ನು ಪ್ರೀತಿಸುವವರಿದ್ದಾರೆ ಎಂಬ ಭಾವನೆ, ಮಗು ಸಂತೋಷವಾಗಿರಲು ತಕ್ಕ ಆವರಣ—ಇವೂ ಬೇಕು. ಇವು ಶಿಶುವಿಹಾರಗಳಲ್ಲಿ ದೊರೆಯುತ್ತವೆ. ಅಲ್ಲಿ ಮಕ್ಕಳು ಒಬ್ಬರೊಡನೊಬ್ಬರು ಆಡುತ್ತಿರುವಾಗ ಸದಾ ಸಂತೋಷಚಿತ್ತರಾಗಿರುತ್ತಾರೆ. ಹೀಗೆ ಸಂತೋಷದಿಂದ ನಗು ನಗುತ್ತಾ ಇರುವುದು ಮಕ್ಕಳ ಆರೋಗ್ಯಕರವಾದ ಬೆಳವಣಿಗೆಗೆ



ಚೆಂಡನ್ನು ಒದೆಯುವ ಆಟ

ಅತ್ಯಂತ ಮುಖ್ಯವಾದುದೆಂಬುದು ವೈದ್ಯರ ಅಭಿಪ್ರಾಯ. ಮಕ್ಕಳಿಗೆ ಎಷ್ಟೇ ಪುಷ್ಟಿಯಾದ ಆಹಾರವಿರಲಿ, ಅಂಗಸಾಧನೆಗೆ ಎಷ್ಟೇ ಉತ್ತಮ ಅವಕಾಶವಿರಲಿ, ಅವರು ಸ್ವತಂತ್ರರಾಗಿ ಸಂತೋಷದಿಂದ ಆಡುವ ಸನ್ನಿವೇಶಗಳಿಲ್ಲದಿದ್ದರೆ ಅವರ ಬೆಳವಣಿಗೆ ಸಮರ್ಪಕವಾಗಿ ನಡೆಯಲಾರದು.

೨. **ನಡತೆಯ ಶಿಕ್ಷಣ**—ಮಕ್ಕಳು ಸ್ವಲ್ಪ ಹೆಚ್ಚು ಕಡಮೆ ತಮ್ಮ ವಯಸ್ಸಿನ ಇತರ ಮಕ್ಕಳೊಡನೆ ಶಿಶುವಿಹಾರದಲ್ಲಿ ಆಡುವಾಗ ಅವರ ನಡತೆಯ ಶಿಕ್ಷಣಕ್ಕೆ ಅನೇಕ ಉತ್ತಮ ಸನ್ನಿವೇಶಗಳು ದೊರೆಯುತ್ತವೆ. ಉದಾಹರಣೆಗಾಗಿ: ಒಂದು ಮಗುವು


ಪೆಟ್ಟಿಗೆಯನ್ನಾಗಲಿ, ಕುರ್ಚಿಯನ್ನಾಗಲಿ ಎತ್ತಲು ಸಾಧ್ಯವಿಲ್ಲ ದಿದ್ದರೆ ಇತರ ಮಕ್ಕಳ ಸಹಾಯದಿಂದ ಆ ಕೆಲಸವನ್ನು ಮಾಡಿ, ಎಲ್ಲರೊಡನೆಯೂ ಸೇರಿ ಸಂತೋಷದಿಂದ ಆಡುತ್ತದೆ. ಇದರಿಂದ ಮಕ್ಕಳು ಇತರ ಮಕ್ಕಳೊಡನೆ ಸಹಕರಿಸಿ, ಅವರಿಗೆ ಸಹಾಯ ಮಾಡಿ ಅವರ ಸುಖದುಃಖಗಳಲ್ಲಿ ಭಾಗಿಯಾಗುವ ಗುಣವನ್ನು ಹೊಂದುವರು. ಇದೇ ರೀತಿಯಲ್ಲಿ ತನಗೆ ಬೇಕಾದ ಆಟದ ಸಾಮಾನುಗಳೊಡನೆ ಇನ್ನೊಂದು ಮಗು ಆಡುತ್ತಿದ್ದರೆ ಅದರ ಆಟ ಮುಗಿಯುವವರೆಗೆ ತಾನು ಬೇರೆ ಯಾವುದಾದರೂ ಕೆಲಸಮಾಡಬೇಕಾಗುತ್ತದೆ. ಇದರಿಂದ ತಮ್ಮ ಹಾಗೆಯೇ ಇತರ ಮಕ್ಕಳಿಗೂ ಆಟದ ಸಾಮಾನುಗಳು ಬೇಕೆಂದು ತಿಳಿದು ತಮ್ಮ ಸರದಿಯು ಬರುವವರೆಗೆ ಕಾಯುವ ಪದ್ಧತಿ, ಕೋಪ ವನ್ನೂ, ಅಳುವನ್ನೂ,[6] ಅಸೂಯೆಯನ್ನೂ ತಡೆದು ಹತೋ ಟಿಯಲ್ಲಿಟ್ಟುಕೊಳ್ಳುವ ಅಭ್ಯಾಸ–ಇವೆಲ್ಲಾ ಕ್ರಮಕ್ರಮವಾಗಿ ಬೆಳೆಯುತ್ತವೆ.

ಮಕ್ಕಳು ಹೀಗೆ ಒಟ್ಟಿಗೆ ಕಲೆತು ಆಡುವುದರಿಂದಲೂ ಕೆಲಸ ಮಾಡುವುದರಿಂದಲೂ ಅವರಲ್ಲಿ ಐಕಮತ್ಯ, ಕಷ್ಟದಲ್ಲಿರುವ ವರಿಗೂ ಕೈಲಾಗದವರಿಗೂ ಸಹಾಯಮಾಡುವ ಬುದ್ಧಿ, ಒಬ್ಬ ರೊಡನೆ ಒಬ್ಬರು ಪ್ರೀತಿ ವಿಶ್ವಾಸಗಳಿಂದ ಸೇರಿ ಕೆಲಸಮಾಡು ವುದು, ಸ್ನೆಗಣೆ, ಕನಿಕರ, ಪಶ್ಚಾತ್ತಾಪ ಮುಂತಾದ, ಇತರ ರೊಡನೆ ಬದುಕಿ ಬಾಳಲು ಬೇಕಾಗುವ, ಸಾಮಾಜಿಕ ಗುಣ ಗಳೆಲ್ಲಾ ಬೆಳೆಯುತ್ತವೆ.


---

[6] ಶಿಶುವಿಹಾರಗಳಲ್ಲಿ ಶಿಕ್ಷಣಹೊಂದಿದ ಮಕ್ಕಳು ಮನೆಯಲ್ಲಿ ಹಠ ಹಿಡಿಯುವುದು ಬಹಳ ಮಟ್ಟಿಗೆ ಕಡಮೆ ಎಂಬುದು ಅನೇಕ ಪೋಷಕರ ಅನುಭವ.

೧



೨



೧. ಒಬ್ಬರು ಜಾರುತ್ತಿದ್ದರೆ ಇತರರು ತಮ್ಮ ಸರದಿಗಾಗಿ ಕಾಯುವರು.

೨. ನಾಯಕನನ್ನು ಹಿಂಬಾಲಿಸುವುದು.

ಮಕ್ಕಳು ಮರಳಿನಲ್ಲಿ ಆಡುವಾಗ ಎಷ್ಟು ಆನಂದದಿಂದಿರುತ್ತಾರೆ ಎಂಬುದು ಎಲ್ಲರ ಅನುಭವದಲ್ಲಿಯೂ ಕಂಡುಬಂದಿದೆ. ಅವರು ಸ್ನಾನಮಾಡಿ ಚೊಕ್ಕಟವಾದ ಬಟ್ಟೆಗಳನ್ನು ಹಾಕಿಕೊಂಡಮಾತ್ರಕ್ಕೆ ಅವರನ್ನು "ಮರಳಿನಲ್ಲಿ ಆಡಬೇಡಿ, ಬಟ್ಟೆಗಳೆಲ್ಲಾ ಕೊಳೆಯಾಗುತ್ತವೆ" ಎಂದು ಅಡ್ಡಿಮಾಡಬಾರದು. ಅವರು ಚೊಕ್ಕಟವಾದ ಬಟ್ಟೆಗಳನ್ನು ಹಾಕಿಕೊಳ್ಳಬೇಕು, ಮಣ್ಣಿನಲ್ಲಿ ಆಡಿ ಆ ಬಟ್ಟೆಗಳನ್ನು ಕೊಳೆಮಾಡಿಕೊಳ್ಳಬೇಕು; ಅಂದರೆ ಚೊಕ್ಕಟವಾದ ಬಟ್ಟೆಗಳನ್ನು ಹಾಕಿಕೊಳ್ಳುವುದು ಎಷ್ಟು ಆಗತ್ಯವೋ ಅವನ್ನು ಕೊಳೆಮಾಡಿಕೊಳ್ಳುವುದೂ ಅಷ್ಟೇ ಆಗತ್ಯ. "ನನ್ನ ಬಟ್ಟೆ ಕೊಳೆಯಾಗುತ್ತೆ, ನನ್ನ ಕೈ ಮಣ್ಣಾಗುತ್ತೆ" ಎಂದು ಒಂದು ಕಡೆ ಕುಳಿತು ಆಡದೆ ಇರುವುದು ಮಕ್ಕಳ ಬೆಳವಣಿಗೆಗೆ ಬಹಳ ಕುಂದಕ. ಬಟ್ಟೆಗಳನ್ನು ಕೊಳೆಮಾಡಿಕೊಳ್ಳದೆ ಯಾವಾಗಲೂ ಚೊಕ್ಕಟವಾಗಿಯೇ ಇದ್ದು ಬಿಟ್ಟರೆ ಶುಭ್ರವಾದ ಬಟ್ಟೆಗಳನ್ನು ಹಾಕಿಕೊಳ್ಳಬೇಕು, ಕೈಕಾಲುಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು ಎಂಬ ಅಭ್ಯಾಸವು ಮಕ್ಕಳಲ್ಲಿ ಬೇರೂರಲು ಅವಕಾಶವೇ ಇರುವುದಿಲ್ಲ. ಮಕ್ಕಳು ಮಣ್ಣಿನಲ್ಲಿ ಆಟವಾಡಿದನಂತರ ಮೈ, ಕೈಕಾಲು ತೊಳೆದುಕೊಂಡು ಶುಚಿಯಾದ ಬಟ್ಟೆಗಳನ್ನು ಹಾಕಿಕೊಳ್ಳುವುದರ ಮೂಲಕ ನೈರ್ಮಲ್ಯದ ಬೆಲೆಯನ್ನೂ ಆಗತ್ಯವನ್ನೂ ಕಾರ್ಯತಃ ತಿಳಿಯುವರು. ಶಿಶುವಿಹಾರಗಳಲ್ಲಿ ಪ್ರಾರಂಭಿಸಿದ ಈ ಅಭ್ಯಾಸವೇ ಮುಂದೆಯೂ ಸ್ಥಿರವಾಗಿ ನಿಲ್ಲುವುದು.

ಮಕ್ಕಳು ತಮ್ಮ ತಮ್ಮ ಕೆಲಸಗಳನ್ನು ಸಾಧ್ಯವಾದಮಟ್ಟಿಗೆ ತಾವೇ ಮಾಡಿಕೊಳ್ಳುವುದರಿಂದ ಅವರಲ್ಲಿ ಇತರರಿಗಾಗಿ ಕಾಯದೆ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಗುಣ, ಅಂದರೆ

ಸ್ವಾವಲಂಬನ ಬೆಳೆಯುತ್ತದೆ. ಇಷ್ಟೇ ಅಲ್ಲದೆ ನಿರ್ಭಯರಾಗಿ ಸ್ವತಂತ್ರದಿಂದ ಮಾತನಾಡುವುದು, ನಿಜಹೇಳುವುದು, ಅಸ್ವಾರ್ಥತೆ, ಕೃತಜ್ಞತೆ, ದೊಡ್ಡವರಲ್ಲಿ ಮರ್ಯಾದೆ, ಪರೋಪಕಾರ ಬುದ್ಧಿ, ಪ್ರಾಣಿದಯೆ, ಯಾವ ಕೆಲಸವನ್ನು ಮಾಡಿದರೂ ಕಾಲಕ್ಕೆ ಸರಿಯಾಗಿ ಒಂದು ಕ್ರಮವರಿತು ಶಿಸ್ತಿನಿಂದ ಮಾಡುವುದು—ಇವೆಲ್ಲಾ ಶಿಶುವಿಹಾರಗಳಲ್ಲಿ ಕಲಿಯಬಹುದಾದ ಅತ್ಯುತ್ತಮ ಗುಣಗಳು. ಇವೇ ಭಾವೀಜೀವನಕ್ಕೆ ಅಗತ್ಯವಾದ ಗುಣಗಳು. ಈ ಅಭ್ಯಾಸಗಳ ಸಾಧನೆಯು ಉಪನ್ಯಾಸಗಳಿಂದ ಅಂದರೆ ಕೇವಲ ನೀತಿಬೋಧೆಯಿಂದ ಆಗುವುದಿಲ್ಲ, ಸನ್ನಿವೇಶ ಮತ್ತು ಚಟುವಟಿಕೆಗಳ ಪ್ರಭಾವದಿಂದಲೇ ಇವು ಮಕ್ಕಳಲ್ಲಿ ಬೇರೂರುತ್ತವೆ.

ಶಿಶುವಿಹಾರಗಳಲ್ಲಿ ಶೀಲಶಿಕ್ಷಣಕ್ಕಿರುವ ಸನ್ನಿವೇಶವೇ ಮತಬೋಧೆಗೂ ಅನುಕೂಲವಾಗುತ್ತದೆ. ಉಪನ್ಯಾಸಗಳಿಂದಲೂ ಕೃತಕಸನ್ನಿವೇಶಗಳನ್ನು ಕಲ್ಪಿಸಿಕೊಂಡು ಪಾಠಹೇಳುವುದರಿಂದಲೂ ಮತಬೋಧನೆ ಅಷ್ಟು ಫಲಕಾರಿಯಾಗಿ ಪರಿಣಮಿಸುವುದಿಲ್ಲವೆಂದು ಆಧುನಿಕ ಶಿಕ್ಷಣಶಾಸ್ತ್ರಜ್ಞರ ಅನುಭವ. ಶಿಶುವಿಹಾರಗಳಲ್ಲಿ ನಡೆಯುವ ಮತಬೋಧೆಯೂ ಈ ತತ್ವವನ್ನೇ ಸಂಪೂರ್ಣವಾಗಿ ಅನುಸರಿಸಿದೆ. ಅಲ್ಲಿನ ಸ್ವಾಭಾವಿಕ ಸನ್ನಿವೇಶವೂ ಸಾಧಾರಣವಾಗಿ ನಡೆಯುವ ಕೆಲಸಗಳೂ ಮಕ್ಕಳಲ್ಲಿ ದೈವಭಕ್ತಿಯನ್ನು ಹುಟ್ಟಿಸಬಲ್ಲವು. ಪ್ರೀತಿ ವಿಶ್ವಾಸ ಸ್ವಾತಂತ್ರ್ಯ ಸಂತೋಷಗಳು ತುಂಬಿರುವ ಆವರಣದಲ್ಲಿ ಬೆಳೆಯುವ ಮಕ್ಕಳಿಗೆ ದೇವರಲ್ಲಿ ಪ್ರೀತಿ ಸ್ವಾಭಾವಿಕವಾಗಿ ಹುಟ್ಟುವುದೇನೂ ಆಶ್ಚರ್ಯವಲ್ಲ. ಅಲ್ಲದೆ ನಾನಾಪ್ರಾಣಿಗಳ ಚಟುವಟಿಕೆಗಳನ್ನೂ, ಗಿಡ ಮರಗಳ ಆಶ್ಚರ್ಯಕರವಾದ ಬೆಳವಣಿಗೆಯನ್ನೂ

೧



೨



೧. ಮಕ್ಕಳು ತಮ್ಮ ಸರದಿಗಾಗಿ ತಾಳ್ಮೆಯಿಂದ ಕಾಯುತ್ತಿದ್ದಾರೆ.

೨. ಒಂದು ಸೂಚನೆಯ ಪ್ರಕಾರ ಎಲ್ಲರೂ ಒಂದೇ ಕಾಲದಲ್ಲಿ ಕೆಲಸ ಮಾಡುವರು.

ಪ್ರತಿನಿತ್ಯವೂ ನೋಡುತ್ತಿರುವ ಸಣ್ಣಪುಟ್ಟ ಮಕ್ಕಳು ಯಾರಿಂದಲೂ ಹೇಳಿಸಿಕೊಳ್ಳದೆ ತಾವಾಗಿಯೇ ಸೃಷ್ಟಿಕರ್ತನಾದ ಭಗವಂತನನ್ನು ನೆನೆಯುವರು. ಇವೆಲ್ಲಕ್ಕೂ ಉಪಾಧ್ಯಾಯರ ಮೇಲ್ಪಂಕ್ತಿಯೂ ಅವರ ವಿಶಾಲ ಮನೋಭಾವನೆಯೂ ಪ್ರೀತಿ ವಿಶ್ವಾಸಗಳೂ ಮುಖ್ಯವಾದುವು ಎಂಬುದನ್ನು ಯಾರೂ ಮರೆಯಲಾಗದು. ಏಕೆಂದರೆ ಮಕ್ಕಳು ಬಹುಮಟ್ಟಿಗೆ ತಿಳಿದೋ ತಿಳಿಯದೆಯೋ ಉಪಾಧ್ಯಾಯರನ್ನೇ ಮಾದರಿಯಾಗಿಟ್ಟುಕೊಂಡು ಅವರ ರೀತಿನೀತಿಗಳನ್ನೇ ಅನುಸರಿಸುವರು. ಮಕ್ಕಳು ಬಹಳ ಆಶ್ಚರ್ಯಕರವಾದ ಪದಾರ್ಥಗಳನ್ನು ನೋಡುವಾಗಾಗಲಿ, ಇತರ ಪ್ರಾಣಿಗಳನ್ನು ಮುದ್ದಿಸಿ ಪ್ರೀತಿಸುತ್ತಿರುವಾಗಾಗಲಿ, ಅವರು ಹೆಚ್ಚು ಸಂತೋಷದಿಂದ ಕುಣಿದು ಆಡುತ್ತಿರುವ ಕಾಲದಲ್ಲಿಯಾಗಲಿ ಉಪಾಧ್ಯಾಯರು ಸಮಯವರಿತು ದೇವರ ಪ್ರಾರ್ಥನೆ, ದಯಾಮಯನಾದ ಭಗವಂತನ ವಿಷಯದಲ್ಲಿ ಕಥೆಗಳನ್ನು ಹೇಳುವುದು-ಇವುಗಳ ಮೂಲಕ ಮುಂದೆ ನಡೆಯಬಹುದಾದ ಮತಬೋಧೆಗೆ ಸರಿಯಾದ ಅಸ್ತಿಭಾರವನ್ನು ಹಾಕಬಹುದು. ಒಟ್ಟಿನಲ್ಲಿ ಪ್ರೀತಿ, ದಯೆ, ಆಶ್ಚರ್ಯ—ಇವೇ ಮಕ್ಕಳ ದೈವಭಕ್ತಿಗೆ ಅಡಿಗಲ್ಲಾಗಿರಬೇಕಲ್ಲದೆ ನಿರ್ದಿಷ್ಟವಾದ ಯಾವ ಮತಬೋಧೆಗೂ ಶಿಶುವಿಹಾರದಲ್ಲಿ ಅವಕಾಶವಿರಕೂಡದು.

೩. **ಮಾನಸಿಕ ಶಿಕ್ಷಣ**—ಇನ್ನು ಮಾನಸಿಕ ಅಥವಾ ಬುದ್ಧಿಯ ಬೆಳವಣಿಗೆಗೆ ಶಿಶುವಿಹಾರಗಳಲ್ಲಿ ಅವಕಾಶವಿರುವ ವಿಚಾರ. ಕೇವಲ ಚಿಕ್ಕವಯಸ್ಸಿನಲ್ಲಿ ಮಕ್ಕಳ ಆರೋಗ್ಯ, ದೇಹದ ಬೆಳವಣಿಗೆ ಮತ್ತು ಬುದ್ಧಿವಿಕಸನ—ಇವು ಒಂದಕ್ಕೊಂದು ಹೆಣೆದುಕೊಂಡಿವೆ. ಸದಾ ಆಡುತ್ತಾ ಓಡಾಡುತ್ತಿರುವುದು ಮಕ್ಕಳ ಜಾಯಮಾನ. ಶಿಶುವಿಹಾರದಲ್ಲಿ ಮಕ್ಕಳು ಓಡುತ್ತಲೂ ಕುಪ್ಪ

ಳಿಸುತ್ತಲೂ ನೆಗೆಯುತ್ತಲೂ ಮೆಟ್ಟಿಲುಗಳ ಮೇಲಾಗಲಿ ಮರದ ಚೌಕಟ್ಟಿನ ಮೇಲಾಗಲಿ ಹತ್ತಿ ಧುಮುಕುತ್ತಲೂ ಜಾರುಗುಪ್ಪೆಯಲ್ಲಿ ಜಾರುತ್ತಲೂ ಭಾರವಾದ ಸಾಮಾನುಗಳನ್ನು ಎತ್ತುತ್ತಲೂ ಮರಳಿನಲ್ಲಿ ಅಗೆಯುತ್ತಲೂ ಯಾವುದಾದರೂ ಕೆಲಸಮಾಡುತ್ತಲೇ ಇರುತ್ತಾರೆ. ಇವು ಅವರ ಅಂಗಾಂಗಗಳ ಚಲನವಲನಗಳಿಗೆ ಸಹಾಯಮಾಡುವುವಲ್ಲದೆ, ಕೈಕಾಲುಗಳ ದೊಡ್ಡ ಮಾಂಸಖಂಡಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅವಕಾಶವನ್ನುಂಟುಮಾಡುತ್ತವೆ. ಮಕ್ಕಳು ಮರದ ಸಣ್ಣ ಸಣ್ಣ ತುಂಡುಗಳಿಂದಲೂ ಪಟ್ಟಿಗಳಿಂದಲೂ ಗೋಪುರ, ಮನೆ, ರೈಲು, ಬಾವಿ, ಸೇತುವೆ, ಹೆಬ್ಬಾಗಿಲು, ಮಹಡಿಮೆಟ್ಟಿಲುಗಳು—ಇತ್ಯಾದಿಗಳನ್ನು ಕಟ್ಟುತ್ತಾರೆ, ಮಣಿಪೋಣಿಸುತ್ತಾರೆ, ಚಿತ್ರಬರೆಯುತ್ತಾರೆ, ಚಿತ್ರಗಳನ್ನು ಕತ್ತರಿಸಿ ಅಂಟಿಸುತ್ತಾರೆ, ಜೇಡಿಮಣ್ಣಿನಲ್ಲಿ ಮಾದರಿಗಳನ್ನು ಮಾಡುತ್ತಾರೆ. ಇವುಗಳಿಂದ ಸಣ್ಣ ಮಾಂಸಖಂಡಗಳ ಮೇಲೆ ಹತೋಟಿ ಬರುವುದಲ್ಲದೆ ಅವರ ಚಮತ್ಕಾರವೂ ಹಸ್ತಕೌಶಲವೂ ಬೆಳೆಯಲು ಅವಕಾಶವಾಗುವುದು. ಅಲ್ಲದೆ ಅವರ ಬುದ್ಧಿಯ ಬೆಳವಣಿಗೆಗೂ ಇವೇ ಸಹಕಾರಿಯಾಗುವುವು. ಉದಾಹರಣೆಗಾಗಿ: ಮರದ ತುಂಡುಗಳಿಂದ ಆಡುವ ಆಟಗಳನ್ನು ತೆಗೆದುಕೊಳ್ಳೋಣ. ಮಕ್ಕಳು ಒಂದು ಗೋಪುರವನ್ನು ಕಟ್ಟುವಾಗ ಉಪಯೋಗಿಸುವ ಮರದ ತುಂಡುಗಳ ಆಕಾರ ಗಾತ್ರ ಬಣ್ಣಗಳನ್ನು ಪರೀಕ್ಷಿಸುತ್ತಾರೆ. ಬೇರೆ ಬೇರೆ ತೂಕದ ತುಂಡುಗಳನ್ನು ಎತ್ತಿ ಹೋಲಿಸುವುದರಿಂದ ತೂಕಗಳ ಸಾಮ್ಯ ಮತ್ತು ವ್ಯತ್ಯಾಸಗಳ ಅನುಭವವಾಗುತ್ತದೆ. ದೂರದಲ್ಲಿರುವ



ಏಣಿಯಂತಿರುವ ಮರದ ಚೌಕಟ್ಟು





ತೂಗುವ ಕುದುರೆ

ಓಡುವ ಕುದುರೆ

೧



೨

೧. ಮರದ ತುಂಡುಗಳಿಂದ ಗೋಪುರವನ್ನು ಕಟ್ಟುವುದು.

೨. ಮಣಿಗಳನ್ನು ವಿಂಗಡಿಸುವುದು.

ತುಂಡುಗಳನ್ನು ಎಟುಕಿಸಿಕೊಳ್ಳುವಾಗ ದೂರ, ಹತ್ತಿರ ಎಂಬುದು ತಿಳಿಯುತ್ತದೆ. ಕಟ್ಟುತ್ತಿರುವ ಗೋಪುರ ಬಿದ್ದು ಹೋದರೆ ಮಕ್ಕಳು ಯೋಚನೆಯಲ್ಲಿ ಮಗ್ನರಾಗುತ್ತಾರೆ. ಇದೇತಕ್ಕೆ ಹೀಗಾಯಿತು ; ಮತ್ತೊಂದು ಸಲ ಕಟ್ಟುವಾಗ ಹೆಚ್ಚು ಜಾಗರೂಕತೆಯಿಂದ ಕಟ್ಟಡ ಅಲುಗಾಡದ ಹಾಗೆ ತುಂಡುಗಳನ್ನು ಜೋಡಿಸಬೇಕು ಎಂದು ತಿಳಿಯುತ್ತಾರೆ. ತಾವು ಯಾವವಿಧವಾದ ಕಟ್ಟಡವನ್ನು ರಚಿಸಬೇಕೊ ಅದಕ್ಕೆ ತಕ್ಕಹಾಗೆ ಮರದ ತುಂಡುಗಳನ್ನೂ ಪಟ್ಟಿಗಳನ್ನೂ ಆರಿಸಿಕೊಳ್ಳುತ್ತಾರೆ. ಇತರರು ಕಟ್ಟುತ್ತಿರುವುದನ್ನು ಕುತೂಹಲದಿಂದ ನೋಡುತ್ತಾರೆ. ತಮ್ಮ ಹಿಂದಿನ ಅನುಭವವನ್ನು ಜ್ಞಾಪಕಕ್ಕೆ ತಂದುಕೊಂಡು ಅದಕ್ಕೆ ತಕ್ಕ ಹಾಗೆ ನಡೆದುಕೊಳ್ಳುತ್ತಾರೆ. ಮತ್ತೆ ಮತ್ತೆ ಪ್ರಯತ್ನಿಸಿ ಹಿಡಿದ ಕೆಲಸವನ್ನು ಸಾಧಿಸುತ್ತಾರೆ. ಈ ಕಾರಣಗಳಿಂದ ಮರದ ತುಂಡುಗಳ ರಚನೆಯ ಆಟವು ಮಕ್ಕಳ ಜ್ಞಾಪಕಶಕ್ತಿ, ವಸ್ತುಪರಿಶೀಲನಾ ಶಕ್ತಿ, ವಿವೇಚನಾಶಕ್ತಿ, ಗಮನವಿಟ್ಟು ತಾಳ್ಮೆಯಿಂದ ಕೆಲಸ ಮಾಡುವುದು—ಇವೆಲ್ಲಾ ಬೆಳೆಯಲು ಅವಕಾಶವಾಗುತ್ತದೆ. ಮಕ್ಕಳು ಆಟದ ಸಾಮಾನನ್ನು ಆರಿಸಿಕೊಳ್ಳುವಾಗ ಒಂದನ್ನು ಮುಟ್ಟುತ್ತಾ ಇನ್ನೊಂದರ ಕಡೆ ನೋಡುತ್ತಾ ಮತ್ತೊಂದರ ವಿಷಯವಾಗಿ ಆಲೋಚಿಸುತ್ತಾ ಇರುತ್ತಾರೆ. ಇದರಲ್ಲಿ ದೊಡ್ಡವರು ಪುಸ್ತಕಭಂಡಾರಕ್ಕೆ ಹೋಗಿ ತಮಗೆ ಬೇಕಾದ ಗ್ರಂಥವನ್ನು ಆರಿಸಿಕೊಳ್ಳುವಾಗ ತೋರಿಸುವ ಉತ್ಸುಕತೆಯೇ ಕಂಡು ಬರುತ್ತದೆ.

ಮಣಿಪೋಣಿಸುವಾಗ ಮಕ್ಕಳು ನಾನಾವಿಧವಾದ ಆಕಾರ ಗಾತ್ರ ಬಣ್ಣಗಳುಳ್ಳ ಮಣಿಗಳನ್ನು ಆರಿಸಿ ಪೋಣಿಸಬೇಕಾಗುತ್ತದೆ. ಕೆಲವು ವೇಳೆ ಯಾವ ಯಾವ ವಿಧದ ಎಷ್ಟೆಷ್ಟು

ಮಣಿಗಳನ್ನು ಪೋಣಿಸಿದ್ದಾರೆಂಬುದನ್ನೂ ಎಣಿಸುತ್ತಾರೆ. ಮಣಿ ಪೋಣಿಸುವುದರಿಂದ ಮಕ್ಕಳಿಗೆ ಕಣ್ಣಿನ ನೋಟ ಕೈಚಲನೆಗಳ ಹೊಂದಾಣಿಕೆಯಾಗಿ ಮುಂದೆ ಕುಶಲ ಕೆಲಸಗಳನ್ನು ಮಾಡಲು ಬೇಕಾಗುವ ಜಾಣತನ ಬರುತ್ತದೆ. ಕಾಗದಗಳನ್ನು ಕತ್ತರಿಸುವುದರಿಂದಲೂ, ಅವುಗಳನ್ನು ಮಡಿಸುವುದರಿಂದಲೂ, ರಟ್ಟುಗಳನ್ನು ಹೊಲಿಯುವುದರಿಂದಲೂ ಈ ಶಕ್ತಿಯು ಬೆಳೆಯುತ್ತದೆ. ಈ ಕೆಲಸಗಳಲ್ಲಿ ಅನುಭವವಿರುವ ಮಕ್ಕಳು ಮುಂದೆ ಅಕ್ಷರ ಅಂಕಿಗಳ ಬರವಣಿಗೆಯನ್ನು ಕಲಿಯುವಾಗ ಬಹಳ ಸುಲಭವಾಗಿಯೂ, ಚೆನ್ನಾಗಿಯೂ ಕಲಿಯುತ್ತಾರೆಂಬುದು ಅನುಭವದಲ್ಲಿ ಕಂಡುಬಂದಿದೆ. ಆದುದರಿಂದಲೇ ಶಿಶುವಿಹಾರದ ಆಟಪಾಟಗಳು ಮುಂದೆ ಮಕ್ಕಳು ಓದುಬರಹವನ್ನು ಕಲಿಯಲು ಪೂರ್ವಸಿದ್ಧತೆ ಎಂದು ಹೇಳುತ್ತಾರೆ.


ತೋಟದಲ್ಲಿ ಕೆಲಸಮಾಡುವುದರಿಂದ ಸಸ್ಯಾದಿಗಳ ಜೀವನ, ಅವುಗಳನ್ನು ಬೆಳಸುವ ಕ್ರಮ, ಅವುಗಳಿಂದಾಗುವ ಉಪಯೋಗ—ಇವು ತಿಳಿಯುವುವಲ್ಲದೆ, ನಾನಾಬಗೆಯ ಗಿಡ ಹೂವು ಕಾಯಿ ಹಣ್ಣುಗಳ ಪರಿಚಯವಾಗಿ, ಯಾವ ಯಾವ ಋತುವಿನಲ್ಲಿ ಯಾವ ಯಾವ ಗಿಡಗಳನ್ನು ಬೆಳೆಯಬಹುದು ಎಂಬುದೂ ತಿಳಿಯುತ್ತದೆ. ಆದುದರಿಂದ ತೋಟವೇ ಅನೇಕ ವಿಚಾರಗಳನ್ನು ತಿಳಿಸುವ ಕೇಂದ್ರಸ್ಥಾನವಾಗುತ್ತದೆ. ಶಾಲೆಯಲ್ಲಿ ಸಾಕುವ ಪ್ರಾಣಿಗಳನ್ನು ನೋಡುವುದರಿಂದಲೂ, ಅವುಗಳಿಗೆ ಆಹಾರವನ್ನು ಒದಗಿಸಿ ಅವುಗಳೊಡನೆ ಆಡುವುದರಿಂದಲೂ ಮಕ್ಕಳ ಮನಸ್ಸಿನಮೇಲೆ ಆಗುವ ಪರಿಣಾಮವು ಇಷ್ಟೆಂದು ಅಳತೆ ಮಾಡಲಾಗದು.

ಗೋಪುರವನ್ನು ಕಟ್ಟುವಾಗಲೂ, ಚಿತ್ರಗಳನ್ನು ಬರೆಯು

ಮಣಿಗಳನ್ನು ಪೋಣಿಸಿದ್ದಾರೆಂಬುದನ್ನೂ ಎಣಿಸುತ್ತಾರೆ. ಮಣಿ ಪೋಣಿಸುವುದರಿಂದ ಮಕ್ಕಳಿಗೆ ಕಣ್ಣಿನ ನೋಟ ಕೈಚಲನೆಗಳ ಹೊಂದಾಣಿಕೆಯಾಗಿ ಮುಂದೆ ಕುಶಲ ಕೆಲಸಗಳನ್ನು ಮಾಡಲು ಬೇಕಾಗುವ ಜಾಣತನ ಬರುತ್ತದೆ. ಕಾಗದಗಳನ್ನು ಕತ್ತರಿಸುವುದರಿಂದಲೂ, ಅವುಗಳನ್ನು ಮಡಿಸುವುದರಿಂದಲೂ, ರಟ್ಟುಗಳನ್ನು ಹೊಲಿಯುವುದರಿಂದಲೂ ಈ ಶಕ್ತಿಯು ಬೆಳೆಯುತ್ತದೆ. ಈ ಕೆಲಸಗಳಲ್ಲಿ ಅನುಭವವಿರುವ ಮಕ್ಕಳು ಮುಂದೆ ಅಕ್ಷರ ಅಂಕಿಗಳ ಬರವಣಿಗೆಯನ್ನು ಕಲಿಯುವಾಗ ಬಹಳ ಸುಲಭವಾಗಿಯೂ, ಚೆನ್ನಾಗಿಯೂ ಕಲಿಯುತ್ತಾರೆಂಬುದು ಅನುಭವದಲ್ಲಿ ಕಂಡುಬಂದಿದೆ. ಆದುದರಿಂದಲೇ ಶಿಶುವಿಹಾರದ ಆಟಪಾಟಗಳು ಮುಂದೆ ಮಕ್ಕಳು ಓದುಬರಹವನ್ನು ಕಲಿಯಲು ಪೂರ್ವಸಿದ್ಧತೆ ಎಂದು ಹೇಳುತ್ತಾರೆ.

ತೋಟದಲ್ಲಿ ಕೆಲಸಮಾಡುವುದರಿಂದ ಸಸ್ಯಾದಿಗಳ ಜೀವನ, ಅವುಗಳನ್ನು ಬೆಳಸುವ ಕ್ರಮ, ಅವುಗಳಿಂದಾಗುವ ಉಪಯೋಗ– ಇವು ತಿಳಿಯುವುವಲ್ಲದೆ, ನಾನಾಬಗೆಯ ಗಿಡ ಹೂವು ಕಾಯಿ ಹಣ್ಣುಗಳ ಪರಿಚಯವಾಗಿ, ಯಾವ ಯಾವ ಋತುವಿನಲ್ಲಿ ಯಾವ ಯಾವ ಗಿಡಗಳನ್ನು ಬೆಳೆಯಬಹುದು ಎಂಬುದೂ ತಿಳಿಯುತ್ತದೆ. ಆದುದರಿಂದ ತೋಟವೇ ಅನೇಕ ವಿಚಾರಗಳನ್ನು ತಿಳಿಸುವ ಕೇಂದ್ರಸ್ಥಾನವಾಗುತ್ತದೆ. ಶಾಲೆಯಲ್ಲಿ ಸಾಕುವ ಪ್ರಾಣಿಗಳನ್ನು ನೋಡುವುದರಿಂದಲೂ, ಅವುಗಳಿಗೆ ಆಹಾರವನ್ನು ಒದಗಿಸಿ ಅವುಗಳೊಡನೆ ಆಡುವುದರಿಂದಲೂ ಮಕ್ಕಳ ಮನಸ್ಸಿನಮೇಲೆ ಆಗುವ ಪರಿಣಾಮವು ಇಷ್ಟೆಂದು ಅಳತೆ ಮಾಡಲಾಗದು.


ಗೋಪುರವನ್ನು ಕಟ್ಟುವಾಗಲೂ, ಚಿತ್ರಗಳನ್ನು ಬರೆಯು



ಮರಳಿನಲ್ಲಿ ಆಡುವುದು. (ಮೇಲಿನ ಚಿತ್ರ)

ರಟ್ಟು ಹೊಲಿಯುತ್ತಿರುವರು. (ಕೆಳಗಿನ ಚಿತ್ರ)

೧



೨



೧. ಜಡೆ ಕೋಲಾಟ

೨. ನೃತ್ಯ

ವಾಗಲೂ ಮಕ್ಕಳೇ ಕಲ್ಪಿಸಿಕೊಂಡು ಅನೇಕ ವಿಧವಾದ ಕಟ್ಟಡಗಳನ್ನು ಕಟ್ಟುತ್ತಾರೆ, ಚಿತ್ರಗಳನ್ನು ಬರೆಯುತ್ತಾರೆ. ಇದರಿಂದ ಅವರ ಊಹಾಶಕ್ತಿಯು ಅಭಿವೃದ್ಧಿಯಾಗುತ್ತದೆ. ಅವರು ಆಡುವಾಗ ಅನೇಕ ಕಲ್ಪನೆಯ ಆಟಗಳನ್ನು ಆಡುತ್ತಾರೆ. ಆಟದಲ್ಲಿ ಅವರು ಪೋಲೀಸಿನವರಾಗುತ್ತಾರೆ; ರೈಲು ಅಥವಾ ಮೋಟಾರು ನಡೆಸುವವರಾಗುತ್ತಾರೆ, ತಂದೆ ತಾಯಿಗಳಂತೆ ನಟಿಸುತ್ತಾರೆ, ಅಂಚೆಯವನಂತೆ ಕಾಗದಗಳನ್ನು ಹಂಚುತ್ತಾರೆ, ಸೇನಾನಾಯಕರಾಗುತ್ತಾರೆ. ಅಲ್ಲದೆ ಸಿನಿಮಾ ಆಟ, ಸ್ಕೂಲಿನ ಆಟ, ಸೊಸೈಟಿ ಅಥವಾ ಅಂಗಡಿಯ ಆಟ, ಗೋಕುಲಾಷ್ಟಮಿ ಅಥವಾ ಗಣೇಶನ ಹಬ್ಬದ ಆಟ, ಮಗುವಿಗೆ (ಗೊಂಬೆಗೆ) ನೀರು ಹಾಕುವ ಆಟ—ಈ ರೀತಿಯಾಗಿ ಅನೇಕ ಆಟಗಳನ್ನು ಆಡುತ್ತಾರೆ. ತಾವು ನೋಡಿರುವ ನಾಟಕಗಳನ್ನೂ ಕೇಳಿರುವ ಕಥೆಗಳನ್ನೂ ಅಭಿನಯಿಸುತ್ತಾರೆ. ಈ ವೇಳೆಯಲ್ಲಿ ಅವರು ತಮ್ಮ ವಯೋಧರ್ಮಕ್ಕನುಗುಣವಾಗಿ ಉಲ್ಲಾಸ, ಕುತೂಹಲ, ಮೈತ್ರಿ, ಸಾಹಸಬುದ್ಧಿ—ಇವುಗಳನ್ನು ವ್ಯಕ್ತಪಡಿಸುವರು. ಇವು ಅವರ ಊಹಾಶಕ್ತಿಯನ್ನು ಹೆಚ್ಚಿಸಿ, ಈ ವಿಧದ ವಿಷಯಗಳಲ್ಲಿ ಅವರ ಅನುಭವವನ್ನು ವಿಸ್ತರಿಸಿ ಅವರು ಬುದ್ಧಿಸಂಸ್ಕಾರವನ್ನು ಹೊಂದಿ ವಿಚಾರಪರರಾಗಲು ಸಹಕಾರಿಯಾಗುತ್ತವೆ. ಇಷ್ಟೇ ಅಲ್ಲದೆ ಮಕ್ಕಳ ಭಾಷಾಶಕ್ತಿಯ ಬೆಳವಣಿಗೆಗೂ ಈ ಆಟಗಳೇ ಅವಕಾಶಗಳನ್ನೊದಗಿಸುತ್ತವೆ.


ಮಕ್ಕಳು ತಮ್ಮ ಆಟಗಳಲ್ಲಿ ಅನೇಕ ವಿಧವಾದ ಪದಾರ್ಥಗಳನ್ನು ಬಳಸುವಾಗ ಅವರಿಗೆ ಒರಟು, ನಯ; ದೊಡ್ಡದು, ಚಿಕ್ಕದು; ಉದ್ದ, ತುಂಡು; ಎತ್ತರ, ಮೋಟು; ಗುಂಡು, ಚದರ—ಇವುಗಳ ಅರ್ಥ ಅನುಭವಕ್ಕೆ ಬಂದು ಅವುಗಳನ್ನು

ಯಾವ ವೇಳೆಯಲ್ಲಿ ಹೇಗೆ ಉಪಯೋಗಿಸಬಹುದು ಎಂಬುದು ಸ್ವಲ್ಪಮಟ್ಟಿಗೆ ತಿಳಿಯುತ್ತದೆ.

ಭಾಷೆಯು ಮುಖ್ಯವಾಗಿ ಸಮಾಜ ಜೀವನಕ್ಕೆ ಅಗತ್ಯವಾದ ಸಲಕರಣೆ. ಶಿಶುವಿಹಾರಗಳಲ್ಲಿ ಮಕ್ಕಳಿಗೆ ದೊರೆಯುವ ಸಾಮಾಜಿಕ ಜೀವನವು ಅವರ ಭಾಷೆಯ ಬೆಳವಣಿಗೆಗೆ ಅತ್ಯಂತ ಸಹಾಯಕಾರಿ. ಅಲ್ಲಿ ಮಕ್ಕಳು ಸ್ವಲ್ಪ ಹೆಚ್ಚು ಕಡಮೆ ತಮ್ಮ ವಯಸ್ಕರೊಡನೆ ಆಟವಾಡುವಾಗ ತಾವು ಆಶ್ಚರ್ಯ ಸಂತೋಷಗಳೊಡನೆ ಕಂಡ ವಿಷಯಗಳಲ್ಲೋ ತಾವೇ ರಚಿಸಿದ ಪದಾರ್ಥಗಳ ವಿಷಯದಲ್ಲೋ ಮಾತನಾಡಬೇಕೆಂಬ ಬಯಕೆ ತಾನಾಗಿ ಉಂಟಾಗುತ್ತದೆ. ಮಕ್ಕಳು ಆಡುತ್ತಿರುವಾಗ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳುತ್ತಿರುವುದು ಎಲ್ಲರೂ ಸಾಧಾರಣವಾಗಿ ನೋಡಿರುವ ವಿಷಯ. ಅವರು ಒಬ್ಬರ ಪಕ್ಕದಲ್ಲೊಬ್ಬರು ಕುಳಿತು ಮಾತನಾಡಿಕೊಳ್ಳುತ್ತಾರೆ. ಒಬ್ಬರು ಹೇಳಿದುದನ್ನು ಇನ್ನೊಬ್ಬರು ಕೇಳಬಹುದು, ಕೇಳದೆ ಇರಬಹುದು. ಇದು ಅವರಿಗೆ ಅಷ್ಟು ಅಗತ್ಯವಲ್ಲ. ಇತರ ಮಕ್ಕಳು ಜೊತೆಯಲ್ಲಿದ್ದಾಗ ಅವರಿಗೆ ಮಾತನಾಡುವ ಇಚ್ಛೆ ಹುಟ್ಟುತ್ತದೆ. ಮಕ್ಕಳ ಭಾಷಾಭಿವೃದ್ಧಿಗೆ ಇದು ಮೂಲವೆಂದು ಹೇಳಬಹುದು.

ಮಕ್ಕಳು ಸ್ವಭಾವತಃ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ತಮ್ಮ ಸುತ್ತಮುತ್ತಲಿರುವ ಜನರ ಮತ್ತು ಪದಾರ್ಥಗಳ ವಿಷಯವನ್ನು ತಿಳಿದುಕೊಳ್ಳಲು ಅವರಿಗಿರುವ ಆತುರಾಸಕ್ತಿಗಳ ಸೂಚನೆಯೇ ಮಕ್ಕಳ ಪ್ರಶ್ನೆಗಳು. ಈ ಪ್ರಶ್ನೆಗಳು ಕೆಲವು ವೇಳೆ ಬಹಳ ವಿಚಿತ್ರವಾಗಿಯೂ, ಉತ್ತರ ಹೇಳಲು ಕಷ್ಟಸಾಧ್ಯವಾಗಿಯೂ ಇರುತ್ತವೆ. ಉದಾಹರಣೆಗೆ— ಹಸುವಿಗೇಕೆ ನಾಲ್ಕು ಕಾಲುಗಳಿವೆ ?, ಗುಲಾಬಿಗಿಡ ಏಕೆ ಪೊದೆಯಾಗಿ ಬೆಳೆಯು

೧



೨



೧. ಮಣಿ ಪೋಣಿಸುವುದು.  ೨. ಪಕ್ಷಿಗಳ ವಿಚಾರ ಸಂಭಾಷಣೆ.

ತ್ತದೆ?, ಚಂದ್ರನು ಏಕೆ ಅರ್ಧವಾಗಿ ಬಿಟ್ಟಿದ್ದಾನೆ? ಮಾವಿನ ಹಣ್ಣು ಏಕೆ ಸಿಹಿಯಾಗಿದೆ? ಇತ್ಯಾದಿ. ಉತ್ತರ ಹೇಳಲು ಕಷ್ಟವಾದರೂ ಮಕ್ಕಳ ಪ್ರಶ್ನೆಗಳಿಗೆ ಸಾಧ್ಯವಾದ ಮಟ್ಟಿಗೆ ಉತ್ತರ ಕೊಟ್ಟು ಅವರ ಪ್ರಶ್ನೆಗಳಿಗೆ ಉತ್ತೇಜನ ಕೊಡಬೇಕೇ ಹೊರತು, 'ಅವೆಲ್ಲಾ ನಿನಗೇಕೆ, ನಿನಗೆ ಗೊತ್ತಾಗುವುದಿಲ್ಲ. ಸುಮ್ಮನಿರು' ಎಂದು ನಿರಾಕರಿಸುವುದಾಗಲಿ ಔದಾಸೀನ್ಯದಿಂದ ನೋಡುವುದಾಗಲಿ ಸರ್ವಥಾ ಕೂಡದು. ಹಾಗೆ ಮಾಡಿದರೆ ಅವರಲ್ಲಿರುವ ಉತ್ಸಾಹವೆಲ್ಲಾ ನಿರ್ಮೂಲವಾಗಿ, ಅವರು ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. ಒಂದು ವೇಳೆ ವಿಪರೀತ ಸಂಶಯ ಬಂದು ಒಂದೆರಡು ಪ್ರಶ್ನೆಗಳನ್ನು ಕೇಳಿದರೂ, ಬಹಳ ಸಂಕೋಚದಿಂದಲೂ ಹಿಂಜರಿಯುವ ಮನಸ್ಸಿನಿಂದಲೂ ಕೇಳು ತ್ತಾರೆ. ಈ ಪ್ರಶ್ನೆ ಕೇಳುವ ಸ್ವಭಾವವೇ ಮಕ್ಕಳ ವಿಷಯ ಗ್ರಹಣಕ್ಕೆ ಮುಖ್ಯಸಾಧನ. ಇದಕ್ಕೆ ಸರಿಯಾದ ಉತ್ತೇಜನ ದೊರೆತರೆ ಮಕ್ಕಳ ಕುತೂಹಲ ಹೆಚ್ಚಿ ,ಅವರು ವಿಚಾರಪರರಾಗಿ ಅವರಲ್ಲಿ ಮುಂದೆ ವೈಜ್ಞಾನಿಕ ಮನೋಭಾವ ಬೆಳೆಯಲು ಇದೇ ಸರಿಯಾದ ಅಡಿಪಾಯವಾಗುತ್ತದೆ. ಅಲ್ಲದೆ ಮಕ್ಕಳು ಪ್ರಶ್ನೆ ಕೇಳುವಾಗಲೂ ಉತ್ತರಗಳನ್ನು ಪಡೆಯುವಾಗಲೂ ತಮ್ಮ ಭಾಷಾಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಉಪಾಧ್ಯಾಯರು ಕಥೆ ಹೇಳುವಾಗಲೂ ಪದಾರ್ಥಗಳ ವಿಷಯವಾಗಿ ಮಾತ ನಾಡುವಾಗಲೂ ಇದೇ ತರದ ಅವಕಾಶ ದೊರೆಯುತ್ತದೆ.

ಶಿಶುವಿಹಾರದಲ್ಲಿ ಮಕ್ಕಳು ಅನೇಕ ಚಿತ್ರಗಳನ್ನೂ ಪ್ರಾಣಿಗ ಳನ್ನೂ ಗಿಡಗಳನ್ನೂ ನೋಡಿ ಪರೀಕ್ಷಿಸಲು ಅವಕಾಶವಿದೆ. ಇದರಿಂದ ಅವರಿಗೆ ಅನೇಕ ವಿಷಯಗಳು ತಿಳಿಯುವುದಲ್ಲದೆ, ಅವುಗಳನ್ನು ಯಾವ ಯಾವ ಮಾತುಗಳಿಂದ ವಿವರಿಸಬಹುದು

ಎಂಬುದೂ ಗೊತ್ತಾಗುತ್ತದೆ. ಅವರು ಹಾಡು ಕಲಿಯುವಾಗಲೂ ಕಥೆಗಳನ್ನು ಕೇಳುವಾಗಲೂ, ಇನ್ನೂ ಇತರ ವಿಷಯಗಳನ್ನು ತಿಳಿದುಕೊಳ್ಳುವಾಗಲೂ ಅವರ ಜ್ಞಾಪಕಶಕ್ತಿ ಕುದುರುವುದಲ್ಲದೆ ಅನೇಕ ಹೊಸ ಹೊಸ ಮಾತುಗಳ್ನೂ ಅವುಗಳ ಸರಿಯಾದ ಉಚ್ಚಾರಣೆ ಮತ್ತು ಅರ್ಥಗಳನ್ನೂ ಕಲಿಯುತ್ತಾರೆ. ಮಕ್ಕಳ ಭಾಷಾಶೈಲಿ, ಉಚ್ಚಾರ, ಮಾತನಾಡುವ ರೀತಿ—ಇವೆಲ್ಲಾ ಉತ್ತಮಗೊಳ್ಳಲು ಈಗಲೇ ಪ್ರಾರಂಭವಾಗುತ್ತದೆ. ಆದುದರಿಂದ ಶಿಶುವಿಹಾರದ ಉಪಾಧ್ಯಾಯರು ಯಾವಾಗಲೂ ನಿಧಾನವಾಗಿ ಮಾತನಾಡಬೇಕು. ಮಕ್ಕಳು ಹೊಸ ಹೊಸ ಪದಗಳನ್ನು ಕಲಿತ ಹಾಗೆಲ್ಲಾ ಅವರಿಗೆ ಅವುಗಳ ಉಚ್ಚಾರವನ್ನು ತಿಳಿಸಬೇಕು. ಸಾಧಾರಣವಾಗಿ ಪೋಷಕರು ಮಕ್ಕಳ ತೊದಲ್ನುಡಿಗಳನ್ನು ಕೇಳಿ ಸಂತೋಷಿಸಿ ತಾವೂ ಮಕ್ಕಳಂತೆಯೇ ತೊದಲ್ನುಡಿಗಳಲ್ಲಿ ಮಾತನಾಡಿ ನಲಿಯುತ್ತಾರೆ. ಇದು ಸರಿಯಲ್ಲ. ಏಕೆಂದರೆ, ಮಗುವಿಗೆ ಬೇಕಾಗಿರುವುದು ನಮ್ಮ ತೊದಲ್ನುಡಿಗಳಲ್ಲ; ನಮ್ಮ ಶಬ್ದಭಾಂಡಾಗಾರ, ನಮ್ಮ ಸ್ವಚ್ಛವಾದ ಉಚ್ಚಾರಣೆ.

ಸರಳವಾಗಿ ಮಾತನಾಡುವುದರಿಂದ ಭಾಷೆಯ ಅಭಿವೃದ್ಧಿಗೂ, ಸುಲಭವಾದ ಬಾಯಿಲೆಕ್ಕಗಳಿಗೂ ಶಿಶುವಿಹಾರದಲ್ಲಿ ಅವಕಾಶವಿದೆ. ಆದರೆ ಓದುವುದು, ಬರೆಯುವುದು, ಲೆಕ್ಕಮಾಡುವುದು—ಇವುಗಳಿಗೆ ಇಲ್ಲಿ ಅವಕಾಶವಿಲ್ಲ. ಇದು ಮನಶ್ಶಾಸ್ತ್ರಜ್ಞರ ಪ್ರಯೋಗಗಳ ಫಲಿತಾಂಶದಿಂದ ಕಂಡುಬಂದಿದೆ. ಓದುವುದಕ್ಕಾಗಲಿ ಬರೆಯುವುದಕ್ಕಾಗಲಿ ಮಕ್ಕಳನ್ನು ಪ್ರೇರಿಸುವುದಕ್ಕೆ ಮೊದಲು ಅವರಿಗೆ ಸ್ವಲ್ಪ ಮಟ್ಟಿಗೆ ವಿಷಯಗಳು ತಿಳಿದು ಅವನ್ನು ಸುಲಭಮಾತುಗಳಲ್ಲಿ ಹೇಳುವ ಶಕ್ತಿ ಬರುವಂತೆ ಮಾಡಬೇಕು. ಹಾಗೆ ಮಾಡಿದರೆ ಅವರಿಗೆ ತಮ್ಮ ಅಭಿಪ್ರಾಯಗಳನ್ನು

ಬರಹದ ಮೂಲಕ ತಿಳಿಸಬೇಕೆಂಬ ಆಸಕ್ತಿ ಸ್ವಾಭಾವಿಕವಾಗಿ ಉಂಟಾಗುವುದು. ಅದೇ ಅವರಿಗೆ ಓದುಬರಹ ಕಲಿಸಲು ಸರಿಯಾದ ಕಾಲ. ಹಾಗಲ್ಲದೆ ಮೊದಲೇ ಅವರನ್ನು ಓದುವಂತೆ ಒತ್ತಾಯಪಡಿಸಿದರೆ ಅದು ಅವರಿಗೆ ಬಹಳ ನೀರಸವಾಗಿಯೂ ಕಷ್ಟಕರವಾಗಿಯೂ ತೋರುವುದಲ್ಲದೆ ಅದನ್ನು ಕಲಿಯಲು ಅವರು ಬಹಳ ಕಾಲ ತೆಗೆದುಕೊಳ್ಳುತ್ತಾರೆ. ಹಣ್ಣಿಗೆ ಹೂವು ಪೂರ್ವಸಿದ್ಧತೆಯಲ್ಲವೆ? ಮಕ್ಕಳು ನಡೆಯುವುದನ್ನು ಕಲಿತುಕೊಳ್ಳಬೇಕಾದರೆ ಅವರ ದೇಹಶಕ್ತಿ ಸ್ವಲ್ಪಮಟ್ಟಿಗೆ ಬೆಳೆದು ಅವರು ನಿಲ್ಲುವಂತಾಗಬೇಕು. ಅಂಬೆಗಾಲಿಡುವುದಕ್ಕೆ ಅಥವಾ ನಿಂತುಕೊಳ್ಳುವುದಕ್ಕೆ ಮೊದಲು ಅವರು ನಡೆಯಲು ಹೇಗೆ ಸಾಧ್ಯ? ಅದರಂತೆಯೇ ಸರಾಗವಾಗಿ ಮಾತನಾಡಿ ಅನೇಕ ಪದಗಳು ತಿಳಿಯುವ ವರೆಗೆ ಓದಿ ಬರೆಯುವಂತೆ ಅವರಿಗೆ ಹೇಳಬಾರದು. ನಡೆಯಲು ಕಾಲುಗಳು ಬಲಿಯುವುದು ಎಷ್ಟು ಆವಶ್ಯಕವೋ ಓದಿ ಬರೆಯಲು ಬುದ್ಧಿಶಕ್ತಿ ಬಲಿಯಬೇಕಾದುದೂ ಅಷ್ಟೇ ಆವಶ್ಯಕ. ಮನಶ್ಶಾಸ್ತ್ರದ ಪ್ರಕಾರ ಬುದ್ಧಿಶಕ್ತಿಯನ್ನು ಅಳೆಯಲು ಸಾಧನಗಳಿವೆ. ಹೀಗೆ ಅಳೆದ ಬುದ್ಧಿಯ ವಯಸ್ಸು (Mental age) ಕನಿಷ್ಠಪಕ್ಷ ಆರೂವರೆ ಆಗುವ ವರೆಗೂ ಮಕ್ಕಳಿಗೆ ಓದುಬರಹಗಳನ್ನು ಕಲಿಸಬಾರದು ಎಂಬುದು ಮನಶ್ಶಾಸ್ತ್ರಜ್ಞರ ಮತ್ತು ಆಧುನಿಕ ಶಿಕ್ಷಣಶಾಸ್ತ್ರಜ್ಞರ ಅಭಿಪ್ರಾಯ. ಸಾಮಾನ್ಯವಾಗಿ ಹೇಳಬೇಕಾದರೆ ಮಕ್ಕಳಿಗೆ ಆರನೆಯ ವರ್ಷ ತುಂಬುವ ವರೆಗೆ ಓದಿ ಬರೆಯಲು ಒತ್ತಾಯವಿರಕೂಡದು. ಮಕ್ಕಳು ತಾವಾಗಿಯೇ ಓದುಬರಹ ಕಲಿಯಲು ಕುತೂಹಲವನ್ನು ತೋರಿಸಿದರೆ ಅಂದಿನಿಂದ ಅವರಿಗೆ ಓದುಬರಹವನ್ನು ಕಲಿಸಬಹುದು. ಅನೇಕ

ವೇಳೆ ಪೋಷಕರು ತಮ್ಮ ಮಕ್ಕಳಿಗೆ ಜಾಗ್ರತೆ ಓದುಬರಹ ಬರಲಿ ಎಂಬ ಆತುರದಿಂದ ಮಕ್ಕಳ ಮೂರು ಅಥವಾ ನಾಲ್ಕ ನೆಯ ವಯಸ್ಸಿನಲ್ಲಿಯೇ ಅಕ್ಷರಾಭ್ಯಾಸ ಪ್ರಾರಂಭಿಸಿಬಿಡು ತ್ತಾರೆ. ಇದು ನಿಷ್ಪ್ರಯೋಜನವಾದುದು. ಏಕೆಂದರೆ ಈ ಮಕ್ಕಳು ಓದುಬರಹದ ಅಭ್ಯಾಸವನ್ನು ಜಾಗ್ರತೆ ಪ್ರಾರಂಭಿಸಿ ದರೂ ಅವರ ಕಲಿಯುವುದು ಮಾತ್ರ ನಿಧಾನವಾಗಿಯೇ. ಶಿಶುವಿಹಾರಗಳಲ್ಲಿ ಶಿಕ್ಷಣಪಡೆದ ಮಕ್ಕಳು ಇತರ ಮಕ್ಕಳಿ ಗಿಂತಲೂ ಬಹಳ ಜಾಗ್ರತೆಯಾಗಿ ಉತ್ತಮರೀತಿಯಲ್ಲಿ ಓದು ಬರಹಗಳನ್ನು ಕಲಿತುಕೊಳ್ಳುತ್ತಾರೆ ಎಂಬುದು ಪಾಶ್ಚಾತ್ಯ ದೇಶಗಳ ಅನುಭವದಲ್ಲಿ ಕಂಡುಬಂದಿದೆ. ಈ ಕಾರಣಗಳಿಂದ ಓದುಬರಹಕ್ಕೆ ಶಿಶುವಿಹಾರದ ಶಿಕ್ಷಣಕ್ರಮದಲ್ಲಿ ಅವಕಾಶವಿಲ್ಲ. ಆದರೂ ಶಿಶುವಿಹಾರಗಳು ಮಕ್ಕಳ ಸರ್ವತೋಮುಖವಾದ ಬೆಳವಣಿಗೆಗೆ ಬೇಕಾದ ಎಲ್ಲಾ ಅವಕಾಶಗಳನ್ನೂ ಒದಗಿಸು ತ್ತವೆ. ಒಟ್ಟಿನಲ್ಲಿ ಹೇಳಬೇಕಾದರೆ ಶಿಶುವಿಹಾರಗಳಲ್ಲಿ ಮಕ್ಕಳು ಸ್ವತಂತ್ರರಾಗಿ ಸಂತೋಷದಿಂದ ಆಡುತ್ತಾ ಸಣ್ಣಪುಟ್ಟ ಕೆಲಸ ಗಳನ್ನು ಮಾಡುತ್ತಾ ಅವುಗಳ ಮೂಲಕ ತಮ್ಮಲ್ಲಿ ಅಡಗಿರುವ ದೇಹಶಕ್ತಿ, ಬುದ್ಧಿಶಕ್ತಿ, ಶೀಲಶಕ್ತಿಗಳನ್ನು ಹೆಚ್ಚಿಸಿಕೊಳ್ಳುತ್ತಾರೆ.

---

## ೬. ಇತರ ಪ್ರಯೋಜನಗಳು

ಶಿಶುವಿಹಾರಗಳ ಪ್ರಯೋಜನವು ಮಕ್ಕಳ ಶಿಕ್ಷಣದಲ್ಲಿಯೇ ಕೊನೆಗಾಣುವುದಿಲ್ಲ. ಮನಶ್ಶಾಸ್ತ್ರದಲ್ಲಿ, ಅದರಲ್ಲೂ ಮಕ್ಕಳಬೆಳ ವಣಿಗೆಯ ವಿಷಯದಲ್ಲಿ (Child Study) ಸಂಶೋಧನೆಗಳನ್ನು

ನಡೆಸಿ ಆ ವಿಜ್ಞಾನವನ್ನು ಅಭಿವೃದ್ಧಿಗೆ ತರಲು ಈ ವಿಧವಾದ ಶಾಲೆಗಳು ಅತ್ಯಗತ್ಯ. ಚಿಕ್ಕಮಕ್ಕಳ ಈ ಶಾಲೆಗಳಲ್ಲಿ ಪ್ರಯೋಗ ಗಳನ್ನು ನಡೆಸಿ, ಮಕ್ಕಳ ನಡತೆ, ಸ್ವಭಾವ, ವ್ಯಕ್ತಿತ್ವ, ಅವರಿಗೆ ಯಾವರೀತಿಯ ಶಿಕ್ಷಣ ಕೊಟ್ಟರೆ ಅವರು ದೇಶದ ಉತ್ತಮ ಪ್ರಜೆಗಳಾಗುತ್ತಾರೆ—ಈ ವಿಷಯಗಳನ್ನೆಲ್ಲಾ ಸಮರ್ಪಕವಾಗಿ ಕಂಡುಹಿಡಿಯಲು ಅವಕಾಶಗಳಿವೆ. ಮನಶ್ಶಾಸ್ತ್ರದ ಬೆಳವಣಿಗೆ ಯನ್ನು ಮೊದಲಿನಿಂದ ಗಮನಿಸಿದವರಿಗೆ ಆ ಶಾಸ್ತ್ರವು ಶಿಶು ವಿಹಾರಗಳಿಗೆ ಚಿರಋಣಿ ಎಂಬುದು ಮನದಟ್ಟಾಗುತ್ತದೆ.

ಶಿಶುವಿಹಾರಗಳಿಂದಾಗುವ ಮತ್ತೊಂದು ಪ್ರಯೋಜನ ವೇನೆಂದರೆ, ಅವು ಚಿಕ್ಕಮಕ್ಕಳ ಶಿಕ್ಷಣಶಾಲೆಗಳಾಗಿಯೇ ಉಳಿ ಯದೆ ಪೋಷಕರ ತಿಳಿವಳಿಕೆಯನ್ನು ಹೆಚ್ಚಿಸಲು ಸಹಾಯಕ ವಾಗಿವೆ. ಮಕ್ಕಳ ಶಿಕ್ಷಣವು ಸಮರ್ಪಕವಾಗಿ ನಡೆಯಬೇಕಾ ದರೆ ಪೋಷಕರೂ ಶಿಶುಶಾಲೆಗಳ ಉಪಾಧ್ಯಾಯರೂ ಸಹಕರಿಸ ಬೇಕು. ಮನೆಯಲ್ಲಿ ದೊರೆಯದ ಕೆಲವು ವಿಶೇಷ ಸೌಕರ್ಯ ಗಳನ್ನು ಶಿಶುವಿಹಾರವು ಒದಗಿಸುವುದರಿಂದ ಅದು ಮನೆಗೆ ಸಹಾಯಕವಾಗಿದೆಯೇ ವಿನಾ ಮನೆಯ ಸ್ಥಾನವನ್ನೇ ಆಕ್ರ ಮಿಸುವುದಿಲ್ಲ. ಅದು ಮನೆಗೆ ಪ್ರತಿಸ್ಪರ್ಧಿಯಲ್ಲ; ಅನುಬಂಧ ಮಾತ್ರ. ಆದುದರಿಂದ ಮನೆ ನೆಟ್ಟಗಿಲ್ಲದಿದ್ದರೆ ಎಷ್ಟು ಉತ್ತಮ ವಾದ ಪಾಠಶಾಲೆ ತಾನೇ ಏನು ಮಾಡೀತು? ಉದಾಹರಣೆಗಾಗಿ —ಶಿಶುಶಾಲೆಗಳಲ್ಲಿ ಮಕ್ಕಳಿಗೆ ಚೊಕ್ಕಟವಾಗಿರಬೇಕು ಎಂಬು ದನ್ನು ಅಭ್ಯಾಸಮಾಡಿಸಿದ್ದಾರೆಂದು ತಿಳಿಯೋಣ. ಮನೆಯಲ್ಲಿ ಪೋಷಕರು ಸಾಮಾನುಗಳನ್ನು ಸಿಕ್ಕಿದ ಕಡೆ ಚೆಲ್ಲಾಪಿಲ್ಲಿಯಾಗಿ ಹರಡಿದ್ದು, ಮಕ್ಕಳು ಮುಖ ಕೈಕಾಲು ತೊಳೆದುಕೊಂಡರೆ, ಅವರ ಬಟ್ಟೆ ಚೊಕ್ಕಟವಾಗಿದೆಯೆ—ಇವುಗಳಿಗೆ ಗಮನಕೊಡದೆ

ಉದಾಸೀನರಾಗಿದ್ದರೆ ಮಕ್ಕಳಲ್ಲಿ ಚೊಕ್ಕಟವಾಗಿರಬೇಕು, ಕ್ರಮ ವರಿತು ಕೆಲಸಮಾಡಬೇಕು ಎಂಬ ಅಭ್ಯಾಸವಾಗುವುದು ಬಹಳ ಕಷ್ಟ. ಎರಡನೆಯದಾಗಿ, ಮಕ್ಕಳು ತಮ್ಮ ಕೈಲಾದ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದರಿಂದ ಅವರಲ್ಲಿ ಸ್ವಾವಲಂಬನಗುಣ ಉಂಟಾಗುತ್ತದೆ ಎಂದು ಹೇಳಲಾಯಿತು. ಆದರೆ ಮನೆಯಲ್ಲಿ ತಾಯಿತಂದೆಗಳು ಪ್ರೀತಿಗೋಸ್ಕರ ಮಕ್ಕಳ ಕೈಯಲ್ಲಿ ಯಾವ ಕೆಲಸವನ್ನೂ ಮಾಡಿಸದೆ ತಾವೇ ಮಕ್ಕಳ ಎಲ್ಲಾ ಕೆಲಸಗಳನ್ನೂ ಅಂದರೆ ಮುಖತೊಳೆಯುವುದು, ಸ್ನಾನಮಾಡಿಸುವುದು, ಅಂಗಿ ಬಟ್ಟೆಗಳನ್ನು ಹಾಕುವುದು, ಆಟದ ಸಾಮಾನುಗಳನ್ನು ತೆಗೆದು ಕೊಡುವುದು ಮುಂತಾದ ಸಾಮಾನ್ಯ ಕೆಲಸಗಳನ್ನೂ ಮಾಡಿ ಕೊಡುತ್ತಿದ್ದರೆ ಇತರರು ತಮ್ಮ ಕೆಲಸಗಳನ್ನೆಲ್ಲಾ ಮಾಡಿ ಕೊಡಲಿ ಎಂಬ ಬುದ್ಧಿಯೇ ಮಕ್ಕಳಲ್ಲಿ ಹುಟ್ಟುತ್ತದೆ.

ಇನ್ನು ಮಕ್ಕಳ ಪ್ರಶ್ನೆಗಳ ವಿಷಯ. ಶಿಶುವಿಹಾರದಲ್ಲೇನೋ ಮಕ್ಕಳ ಪ್ರಶ್ನೆಗಳಿಗೆ ಉತ್ತೇಜನಕೊಟ್ಟು ಸಾಧ್ಯವಾದಮಟ್ಟಿಗೆ ಅವುಗಳಿಗೆ ಸರಿಯಾದ ಉತ್ತರಗಳನ್ನು ಹೇಳಿ ಆ ಮೂಲಕ ಅವರ ಕುತೂಹಲವನ್ನು ಹೆಚ್ಚಿಸಿ ಅವರಲ್ಲಿ ವಿಚಾರಪರತೆಯನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ. ಆದರೆ ಮನೆಯಲ್ಲಿರು ವವರು ಮಕ್ಕಳ ಪ್ರಶ್ನೆಗಳಿಗೆ ಬೇಜಾರುಪಟ್ಟುಕೊಂಡು ಅವರನ್ನು 'ಸುಮ್ಮನಿರು' ಎಂದು ಗದರಿಸಿಬಿಟ್ಟರೆ ಅವರ ಕುತೂಹಲಕ್ಕೆ ಬಲವಾದ ಕೊಡಲಿಪೆಟ್ಟು ಬಿದ್ದಂತಾಗಿ ಅವರು ಪ್ರಶ್ನೆ ಕೇಳುವು ದನ್ನೇ ಬಿಟ್ಟುಬಿಡುತ್ತಾರೆ.

ಕಡೆಯದಾಗಿ, ದೈಹಿಕಶಿಕ್ಷಣದ ವಿಚಾರ: ಶಿಶುವಿಹಾರದಲ್ಲಿ ಮಕ್ಕಳಿಗೆ ಸರಿಯಾದ ಆಹಾರ ಕೊಡಬೇಕಾದರೆ ಅವರು ಮನೆಯಲ್ಲಿ ಯಾವ ಆಹಾರವನ್ನು ಎಷ್ಟುಮಟ್ಟಿಗೆ ಹೊಂದಿದ್ದಾ

ರೆಂಬುದನ್ನು ತಿಳಿಯುವುದು ಅತ್ಯವಶ್ಯಕ. ಹೀಗೆಯೇ ಬರೆಯುತ್ತ ಹೋದರೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಒಟ್ಟಿನಲ್ಲಿ ಮಕ್ಕಳ ಶಿಕ್ಷಣ ಸುಸೂತ್ರವಾಗಿ ನಡೆಯಬೇಕಾದರೆ ಪಾಠಶಾಲೆಗಳೇ ಪ್ರಯತ್ನಪಟ್ಟರೆ ಸಾಲದು. ಉಪಾಧ್ಯಾಯರೂ ತಂದೆತಾಯಿಗಳೂ ಸಹಕರಿಸಿ ಒಟ್ಟಿಗೆ ಕೆಲಸಮಾಡಬೇಕು. ಮನೆ ಒಂದು ಕಡೆ, ಪಾಠಶಾಲೆ ಒಂದು ಕಡೆ ಎಳೆಯುವಂತಿರಬಾರದು. ' ಇಬ್ಬರ ಗುರಿಯೂ ಒಂದೇ ಆಗಿರುವುದರಿಂದ ಇಬ್ಬರ ಕೆಲಸವೂ ಒಂದೇ ' ಎಂಬುದನ್ನು ಮನಗಂಡು ಪೋಷಕರೂ ಉಪಾಧ್ಯಾಯರೂ ಒಬ್ಬರಿಗೊಬ್ಬರು ಸಹಾಯಕರಾಗಿರಬೇಕು.

ಹೀಗೆ ಪೋಷಕರು ಸಹಕರಿಸಬೇಕಾದರೆ ಅವರಿಗೆ ತಕ್ಕ ತಿಳಿವಳಿಕೆ ಕೊಡಬೇಕು. ಇದಕ್ಕಾಗಿಯೇ ಶಿಶುವಿಹಾರಗಳಿಗೆ ಸೇರಿದಂತೆ ' ಪೋಷಕರ ಕೂಟ ' ಅಥವಾ ' ಮಾತೃಮಂಡಲಿ ' ಗಳು ಅನೇಕವಾಗಿ ಸ್ಥಾಪಿತವಾಗಿವೆ. ಇಂಗ್ಲೆಂಡ್ ಮತ್ತು ಅಮೆರಿಕಾದೇಶಗಳಲ್ಲಿ ಅನೇಕ ಪೋಷಕರು ಶಿಶುವಿಹಾರಗಳಿಗೆ ಹೋಗಿ ಅಲ್ಲಿ ಮಕ್ಕಳಿಗೆ ಸ್ನಾನಮಾಡಿಸುವುದು, ಅವರ ಬಟ್ಟೆಗಳನ್ನು ಚೊಕ್ಕಟಮಾಡಿಕೊಡುವುದು, ಅವರ ಆಟದ ಸಾಮಾನುಗಳನ್ನು ರಿಪೇರಿ ಮಾಡುವುದು ಇವೇ ಮೊದಲಾದ ಅನೇಕ ವಿಧಗಳಲ್ಲಿ ಉಪಾಧ್ಯಾಯರಿಗೆ ಸಹಾಯಮಾಡುವರು. ಹೀಗೆ ಪೋಷಕರು ಆಗಾಗ ಶಿಶುಶಾಲೆಗಳಿಗೆ ಹೋಗಿ ಅಲ್ಲಿ ಮಕ್ಕಳು ಸಂತೋಷದಿಂದ ಆಡುತ್ತಿರುವುದನ್ನು ನೋಡಿ, ಅವರಿಗೆ ಯಾವ ರೀತಿ ಶಿಕ್ಷಣಕೊಡಬೇಕು, ಅವರ ಶಿಕ್ಷಣದಲ್ಲಿ ತಮ್ಮ ಜವಾಬ್ದಾರಿ ಎಷ್ಟು ಎಂಬುದನ್ನು ಉಪಾಧ್ಯಾಯರೊಡನೆ ಮಾತನಾಡಿ ತಿಳಿದುಕೊಳ್ಳುತ್ತಾರೆ. ಅಲ್ಲದೆ ವಾರಕ್ಕೊಂದು ಸಲವಾದರೂ ಎಲ್ಲರೂ ಸಭೆಸೇರಿ ಸಂಗೀತ, ಚರ್ಚೆ, ಉಪನ್ಯಾಸ, ಸಂತೋಷ

ಕೂಟ—ಇವುಗಳನ್ನು ಏರ್ಪಡಿಸುತ್ತಾರೆ. ಈ ಸಮಯದಲ್ಲಿ ಪುಷ್ಟಿಕರವಾದ ಆಹಾರ, ಮಕ್ಕಳ ಬಟ್ಟೆಗಳು, ಮಕ್ಕಳನ್ನು ಶ್ಲಾಘಿಸುವ ಮತ್ತು ದಂಡಿಸುವ ಸಮಸ್ಯೆಗಳು, ಚೊಕ್ಕಟವಾಗಿರುವುದರ ಆವಶ್ಯಕತೆ, ಸಾಂಕ್ರಾಮಿಕ ರೋಗಗಳು, ಮಕ್ಕಳ ಆಟಪಾಟಗಳು, ಅವರ ಹಠಮಾರಿತನವನ್ನು ತಪ್ಪಿಸುವ ಬಗೆ, ಕಾಯಿಲೆಯಾದವರಿಗೆ ಆರೈಕೆಮಾಡುವ ಕ್ರಮ—ಇವೇ ಮೊದಲಾದ ವಿಷಯಗಳನ್ನು ಚರ್ಚಿಸಿ ತಿಳಿದುಕೊಳ್ಳುತ್ತಾರೆ.

ಮೇಲೆ ಹೇಳಿದ ರೀತಿಯಲ್ಲಿ ಪೋಷಕರಿಗೆ ತಿಳಿವಳಿಕೆಕೊಡಲು ಅನುಕೂಲವಾಗುವುದರ ಜೊತೆಗೆ, ಮಾಧ್ಯಮಿಕ ಶಾಲೆಗಳಲ್ಲಿ ಗೃಹಶಾಸ್ತ್ರವನ್ನು ಅಭ್ಯಸಿಸುವ ಹೆಣ್ಣುಮಕ್ಕಳಿಗೆ ಬೇಕಾದ ವಿಷಯಗಳನ್ನು ತಾವೇ ಅಭ್ಯಾಸಮಾಡಿ (Practical Training) ತಿಳಿಯಲು ಶಿಶುವಿಹಾರಗಳು ಉಪಯೋಗಕರವಾಗಿವೆ. ಇಂಗ್ಲೆಂಡಿನಲ್ಲಿ ಈ ಪದ್ಧತಿ ಜಾರಿಗೆ ಬರುತ್ತಿದೆ. ಮಾಧ್ಯಮಿಕಶಾಲೆಯ ಹುಡುಗಿಯರು ಶಿಶುವಿಹಾರಗಳಿಗೆ ವಾರಕ್ಕೆ ಒಂದೆರಡಾವರ್ತಿ ಹೋಗಿ ಅಲ್ಲಿ ಮಕ್ಕಳು ಸ್ವಾತಂತ್ರ್ಯದಿಂದ ಆಡುತ್ತಿರುವುದನ್ನು ನೋಡುವುದರಿಂದ ಮಕ್ಕಳ ಸ್ವಭಾವ ಏನು, ಅವರೇ ಕೆಲಸ ಮಾಡುವಂತೆ ಪ್ರೇರಿಸುವುದು ಹೇಗೆ, ಅವರನ್ನು ಯಾವ ವೇಳೆಯಲ್ಲಿ ಎಷ್ಟುಮಟ್ಟಿಗೆ ಶ್ಲಾಘಿಸಬೇಕು ಅಥವಾ ದಂಡಿಸಬೇಕು, ಮಕ್ಕಳನ್ನು ಎಲ್ಲಾ ವಿಧಗಳಲ್ಲಿಯೂ ಉತ್ತಮರೀತಿಯಲ್ಲಿ ಬೆಳಸಬೇಕಾದರೆ ತಾಯಂದಿರ ಕರ್ತವ್ಯ (Mother craft) ವೇನು—ಇವುಗಳನ್ನೆಲ್ಲಾ ತಿಳಿಯುತ್ತಾರೆ.

ಇವೆಲ್ಲಕ್ಕಿಂತಲೂ ಹೆಚ್ಚಾಗಿ ಶಿಶುವಿಹಾರಗಳು ಜನಾಂಗಗಳ ಸೌಹಾರ್ದಕ್ಕೂ ಪ್ರಪಂಚದ ಶಾಂತಿಗೂ ಅಡಿಪಾಯವಾಗುತ್ತವೆ ಎಂಬುದೂ ಆಧುನಿಕ ವಿದ್ಯಾಭಿಮಾನಿಗಳ ಆಶೆ. ಇದನ್ನು

ಇಂಗ್ಲೆಂಡಿನ ಶಿಶುವಿಹಾರಗಳ ಸಂಘದ ಕಾರ್ಯದರ್ಶಿಗಳಾದ ಪಿ. ಇ. ಕುಸ್‌ಡೆನ್ (Phoebe E. Cusden) ಅವರು ಹೀಗೆ ವಿವರಿಸಿರುವರು.

"ದೇಶವಿದೇಶಗಳ ಇಂದಿನ ರಾಜನೀತಿಜ್ಞರು ಅನುಭವಿಸುತ್ತಿರುವ ಮತ್ತು ಕೈಗಾರಿಕೆಯ ಅಂತರ್ರಾಷ್ಟ್ರೀಯ ತೊಡಕುಗಳಿಗೆ ನಮ್ಮ ಮಾನಸಿಕ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳೇ ಕಾರಣವೆನ್ನಬಹುದು. ಇಂದಿನ ಪ್ರಬಲವಾದ ಸಮಸ್ಯೆಗಳು ಪರಿಹಾರವಾಗಬೇಕಾದರೆ ಇರುವುದೊಂದೇ ಮಾರ್ಗ. ಪ್ರತಿಯೊಂದು ದೇಶದಲ್ಲಿಯೂ ಮಕ್ಕಳಿಗೆ ಅವರ ಶೈಶವದಲ್ಲಿ ತಡೆಯಿಲ್ಲದೆ ತಮ್ಮ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಿಕೊಂಡು ದೈವದತ್ತವಾದ ತಮ್ಮ ಶಕ್ತಿ ಬಲಗಳಿಗನುಗುಣವಾಗಿ ಮಾನವ ಶ್ರೇಯಸ್ಸಿಗೆ ಸಹಾಯಮಾಡುವುದು; ಇತರರ ಸಹಾಯ ಕಾರ್‍ಯಗಳನ್ನು ಒಪ್ಪುವುದು, ಗುರಿಯನ್ನು ಸಾಧಿಸುವ ಪ್ರಯತ್ನದಲ್ಲಿ ಇತರ ಎಲ್ಲಾ ರಾಷ್ಟ್ರಗಳ ಪ್ರಜೆಗಳೊಂದಿಗೂ ಮನಃಪೂರ್ವಕವಾಗಿ ಸಹಕರಿಸುವುದು; ಈ ಗುಣಗಳನ್ನು ಬೆಳಸಬಲ್ಲ ವಾತಾವರಣವನ್ನು ಒದಗಿಸಿಕೊಡುವುದು—ಇದೊಂದೇ ಮಾನವನ ಇಂದಿನ ಸಮಸ್ಯೆಗಳ ಬಿಡುಗಡೆಗೆ ಮಾರ್ಗ. ಈಟನ್ನಿನ ಕ್ರಿಡಾರಂಗದಲ್ಲಿಯೇ ವಾಟರ್‌ಲೂ ಮೊದಲಾದ ಕದನಗಳನ್ನು ಗೆಲ್ಲಲಾಯಿತೆಂದು ನಮ್ಮ ಹಿರಿಯರು ಹಿಂದೆ ಹೆಮ್ಮೆಪಟ್ಟರು. ಇಂದು ಘೋರ ಯುದ್ಧಗಳೂ ಮಾನವಸಮಾಜದ ಮಾರಣಹೋಮವೂ ವೈಜ್ಞಾನಿಕರ ಪ್ರಯೋಗಶಾಲೆಗಳಲ್ಲಿ ನಡೆಯುತ್ತಿವೆ ಎನ್ನಬಹುದು. ಆದರೆ ಜಗತ್ತಿನ ಶಾಂತಿಯೂ ಮಾನವಲೋಕ ಕಲ್ಯಾಣವೂ ಶಿಶುವಿಹಾರಗಳಲ್ಲಿ ಹುಟ್ಟಿದುವೆಂದು ಮುಂದೆ ಸಾರಲು ಅವಕಾಶವಿದೆಯೆಂದು ನಾವು ನಂಬಬಹುದಲ್ಲವೆ?"

# ೭. ನಮ್ಮ ದೇಶದ ಶಿಶುವಿಹಾರಗಳು

ಪಾಶ್ಚಾತ್ಯ ದೇಶಗಳಲ್ಲಿ ಈ ಶಾಲೆಗಳಿಗೆ ಹೆಚ್ಚು ಉತ್ತೇಜನ ದೊರೆತು ಅವು ಆ ದೇಶಗಳ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿವೆ ಎಂಬುದನ್ನು ಇದುವರೆಗೆ ತಿಳಿದುಕೊಂಡಾಯಿತು. ಈಗ ನಮ್ಮ ಮೈಸೂರು ದೇಶದಲ್ಲಿ ಶಿಶುವಿಹಾರಗಳು ಹೇಗೆ ಪ್ರಾರಂಭವಾಗಿವೆ, ಅವುಗಳಲ್ಲಿ ಏನು ಕೆಲಸ ನಡೆಯುತ್ತದೆ, ಎಂಬುದನ್ನು ತಿಳಿಯಬೇಕೆಂಬ ಕುತೂಹಲವು ಸಹಜವಾದುದು.

ನಮ್ಮ ದೇಶದಲ್ಲಿ ಶಿಶುವಿಹಾರಗಳು ಮೊದಲು ಮೈಸೂರು ನಗರದಲ್ಲಿ ಪ್ರಾರಂಭವಾದುವು. ಮೈಸೂರು ಮಹಾರಾಜಾಕಾಲೇಜಿನಲ್ಲಿ ಮನಶ್ಶಾಸ್ತ್ರದ ಅಧ್ಯಾಪಕರಾಗಿರುವ ಡಾಕ್ಟರ್. ಎಂ.ವಿ. ಗೋಪಾಲಸ್ವಾಮಿಯವರು ಈಗ್ಗೆ ಸುಮಾರು ೧೨ ವರುಷಗಳ ಹಿಂದೆ ಅಂದರೆ ೧೯೨೮ ನೆಯ ಇಸವಿಯಲ್ಲಿ ಅಲ್ಲಿನ ಮೊದಲನೆಯ ಶಿಶುವಿಹಾರವನ್ನು ಸ್ಥಾಪಿಸಿದರು. ಅವರು ಅಕ್ಕಪಕ್ಕದಲ್ಲಿರುವವರ ಮಕ್ಕಳನ್ನು ಸೇರಿಸಿಕೊಂಡು ಒಂಟಿಕೊಪ್ಪಲಿನಲ್ಲಿ ತಮ್ಮ ಮನೆಯಲ್ಲಿಯೇ ಈ ಶಾಲೆಯನ್ನು ಪ್ರಾರಂಭಿಸಿದರು. ಹೀಗೆ ಕೆಲವು ಕಾಲ ನಡೆದಮೇಲೆ ಆ ಶಾಲೆಯಲ್ಲಿ ನಡೆಯುತ್ತಿದ್ದ ಉತ್ಕೃಷ್ಟವಾದ ಕೆಲಸವನ್ನು ನೋಡಿ ತೃಪ್ತಿಪಟ್ಟು ಶಿಕ್ಷಣ ಶಾಖೆಯವರೂ ಪೌರಸಭೆಯವರೂ ಅವರಿಗೆ ದ್ರವ್ಯ (grant) ಸಹಾಯಮಾಡಿದರು. ಅಲ್ಲದೆ ಮೈಸೂರಿನ ಧಾರ್ಮಿಕರಲ್ಲೊಬ್ಬರಾದ ಋತ್ವಿಕ್ ಗೋಮಠಂ ಶ್ರೀನಿವಾಸ ಜೋಯ್ಸರ್ ಅವರು ಶಿಶುಶಾಲೆಯ ಕಟ್ಟಡಕ್ಕೆ ಉದಾರವಾದ ಸಹಾಯಮಾಡಲು ಮುಂದೆ ಬಂದರು. ಹೀಗೆ ವಿದ್ಯಾ ಇಲಾಖೆ

ಯಿಂದಲೂ ಸಾರ್ವಜನಿಕರಿಂದಲೂ ಉತ್ತೇಜನ ಪಡೆದ ಆ ಶಿಶುವಿಹಾರವು ಹೆಚ್ಚು ಜನನಿಬಿಡವಾದ ಲಕ್ಷ್ಮೀಪುರಂ ಬಡಾವಣೆಗೆ ವರ್ಗಾಯಿಸಲ್ಪಟ್ಟಿತು. ಈಗ ಆ ಶಾಲೆಗೆ ಸ್ವಂತ ಕಟ್ಟಡವಿದೆ; ಶಾಲೆಯ ಕೆಲಸ ಸುಸೂತ್ರವಾಗಿ ನಡೆಯಲು ಬೇಕಾಗುವ ಎಲ್ಲಾ ಸಾಮಾನು ಸಲಕರಣೆಗಳೂ ಇವೆ. ಆದರೆ ಈ ಶಾಲೆಯಲ್ಲಿ ಪ್ರತಿಯೊಂದು ಮಗುವಿಗೂ ತಿಂಗಳೊಂದಕ್ಕೆ ಮೂರು ರೂಪಾಯಿ ಫೀ (Fee) ವಸೂಲುಮಾಡುತ್ತಾರಾದ್ದರಿಂದ ಇದು ಐಶ್ವರ್ಯವಂತರ ಮಕ್ಕಳಿಗೆ ಮಾತ್ರ ಅನುಕೂಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಡಾ|| ಗೋಪಾಲಸ್ವಾಮಿಯವರು ಮಕ್ಕಳ ಮೊದಲನೆಯ ಶಾಲೆಯನ್ನು ಸ್ಥಾಪಿಸಿದುದೇ ಅಲ್ಲದೆ ಅದಕ್ಕೆ " ಶಿಶುವಿಹಾರ " ಎಂಬ ಬಹಳ ಯೋಗ್ಯವಾದ ಹೆಸರನ್ನೂ ಕೊಟ್ಟರು. ಶಿಶುವಿಹಾರವೆಂದರೆ ಮಕ್ಕಳು ಆಟವಾಡಿ ಸಂತೋಷಪಡುವ ಸ್ಥಳ. ಈ ಹೆಸರನ್ನು ಫ್ರೊಬೆಲ್‌ರವರ ಕಿಂಡರ್‌ಗಾರ್ಟನ್ (Kinder Garten) ಎಂಬ ಪದವು ಸೂಚಿಸಿರುವ ಹಾಗೆ ಕಾಣುತ್ತಿದೆ.

ಆಮೇಲೆ ೧೯೩೩ ನೆಯ ಇಸವಿಯಲ್ಲಿ ಮೈಸೂರಿನ ಎರಡನೆಯ ಶಿಶುವಿಹಾರವು ಸ್ಥಾಪಿತವಾಯಿತು. ಸ್ತ್ರೀಯರ ವೊಕೇಷನಲ್ ಇನ್‌ಸ್ಟಿಟ್ಯೂಟಿನ ಸೂಪರಿಂಟೆಂಡೆಂಟರಾದ ಮಿಸೆಸ್ ಥಿಯೊಬಾಲ್ಡ್ ಎಂಬವರು ಈ ಶಾಲೆಯನ್ನು ಸ್ಥಾಪಿಸಿದರು. ಇದರಲ್ಲಿ ಪ್ರತಿಯೊಂದು ಮಗುವೂ ತಿಂಗಳಿಗೆ ಕೊಡಬೇಕಾದ ರುಸುಮು ಒಂದೇ ರೂಪಾಯಿ. ಇದರಿಂದ ಸಾಮಾನ್ಯ ಜನರ ಮಕ್ಕಳೂ ಇದನ್ನು ಸೇರುವಂತಾಯಿತು.

ಮೇಲಿನ ಎರಡು ಶಾಲೆಗಳ ಕೆಲಸಗಳ ಫಲಿತಾಂಶಗಳನ್ನು ನೋಡಿ ಮೈಸೂರಿನ ಗುಣಾಂಬಾ ಶಿಶುಸಂರಕ್ಷಣ ಕೇಂದ್ರದವರು

ನಗರದ ನಾನಾಭಾಗಗಳಲ್ಲಿ ಕೆಲವು ಶಿಶುವಿಹಾರಗಳನ್ನು ಸ್ಥಾಪಿಸಿದರು. ಈ ಶಾಲೆಗಳ ರುಸುಮು ತಿಂಗಳಿಗೆ ನಾಲ್ಕಾಣೆ ಮಾತ್ರ; ಅಂದರೆ ಇವು ಬಡವರ ಮಕ್ಕಳ ಅನುಕೂಲಕ್ಕಾಗಿ ಸ್ಥಾಪಿತವಾಗಿವೆ ಎಂದು ಹೇಳಬಹುದು.

ಅಲ್ಲದೆ ಮೈಸೂರು ನಗರದಲ್ಲಿರುವ ಅನೇಕ ಸ್ತ್ರೀ ಸಮಾಜಗಳೂ ಅಲ್ಲಲ್ಲಿ ಕೆಲವು ಶಿಶುವಿಹಾರಗಳನ್ನು ಸ್ಥಾಪಿಸಿದ್ದಾರೆ. ಒಟ್ಟು ಈಗ ರಾಜಧಾನಿಯಯಲ್ಲಿ ೧೨ ಶಿಶುಶಾಲೆಗಳಿವೆ. ಅವುಗಳಲ್ಲಿ ಸುಮಾರು ೬೦೦ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.


ಇನ್ನು ಸಂಸ್ಥಾನದ ಇತರ ಭಾಗಗಳಲ್ಲಿ "ಶಿಶುವಿಹಾರಗಳ" ಬೆಳವಣಿಗೆಯನ್ನು ನೋಡೋಣ. ಬೆಂಗಳೂರಿನಲ್ಲಿ ದೇಶೀಯ ವಿದ್ಯಾಶಾಲೆಯವರು ಸ್ಥಾಪಿಸಿರುವ ಶಿಶುವಿಹಾರವು ಪ್ರಖ್ಯಾತವಾದುದು. ಇದರ ಜೊತೆಗೆ ಅಲ್ಲಿರುವ ಮಹಿಳಾಸಂಘಗಳೂ, ಸಮಾಜಗಳೂ, ಸಾರ್ವಜನಿಕ ಸಂಸ್ಥೆಗಳೂ ಪಟ್ಟಣದ ನಾನಾ ಭಾಗಗಳಲ್ಲಿ ಶಿಶುವಿಹಾರಗಳನ್ನು ಸ್ಥಾಪಿಸಿರುವರಲ್ಲದೆ ಅವುಗಳ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಈಗ ಸುಮಾರು ೨-೩ ವರ್ಷಗಳಿಂದೀಚೆಗೆ ಚಿಕ್ಕಮಗಳೂರು, ಶಿವಮೊಗ್ಗೆ, ದಾವಣಗೆರೆ, ಮಂಡ್ಯ, ಹೊಳೇನರಸಿಪುರ ಮುಂತಾದ ಸ್ಥಳಗಳಲ್ಲಿ ಶಿಶುವಿಹಾರಗಳು ಸ್ಥಾಪಿತವಾಗಿವೆ. ಹಾಸನ, ಭದ್ರಾವತಿ, ಕೋಲಾರ—ಈ ಸ್ಥಳಗಳಲ್ಲಿ ಶಿಶುವಿಹಾರಗಳನ್ನು ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿವೆ.

ಇಷ್ಟೇ ಅಲ್ಲದೆ ನಮ್ಮ ವಿದ್ಯಾಭ್ಯಾಸದ ಇಲಾಖೆಯವರೂ ಇದಕ್ಕಾಗಿಯೇ ಒಂದು ಪ್ರತ್ಯೇಕ ಸಮಿತಿಯನ್ನು ಏರ್ಪಡಿಸಿ ಅದರ ವರದಿಯನ್ನೂ ಪ್ರಕಟಿಸಿದ್ದಾರೆ. ಆ ವರದಿಯಲ್ಲಿ ಶಿಶುವಿಹಾರಗಳ ಆವಶ್ಯಕತೆಯನ್ನೂ, ಅವುಗಳಲ್ಲಿ ನಡೆಯಬೇಕಾದ

ಕೆಲಸಗಳನ್ನೂ ಸ್ಥೂಲವಾಗಿ ಚರ್ಚಿಸಿರುವರಲ್ಲದೆ ಶಿಶುವಿಹಾರಗಳಿಗೆ ಇಲಾಖೆಯಿಂದ ದ್ರವ್ಯ ಸಹಾಯ ದೊರೆಯುವುದು ಅಗತ್ಯ ಎಂಬ ಸಲಹೆಯನ್ನೂ ಕೊಟ್ಟಿದ್ದಾರೆ.

ಇನ್ನು ನಮ್ಮ ದೇಶದ ಶಿಶುವಿಹಾರಗಳಲ್ಲಿ ನಡೆಯುವ ಕೆಲಸವೇನು, ಅವಕ್ಕೂ ಪಾಶ್ಚಾತ್ಯದೇಶಗಳ ಶಿಶುವಿಹಾರಗಳಿಗೂ ಯಾವ ಯಾವ ಅಂಶಗಳಲ್ಲಿ ವ್ಯತ್ಯಾಸವಿದೆ, ಎಂಬುದನ್ನು ಸ್ವಲ್ಪ ಮಟ್ಟಿಗೆ ನೋಡೋಣ. ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಇಲ್ಲಿನ ಶಿಶುವಿಹಾರಗಳಲ್ಲಿ ಕೆಲವು ಮುಖ್ಯವಾದ ಬದಲಾವಣೆಗಳಾಗಿವೆ. ವಿಶೇಷವಾಗಿರುವ ಕೋಮುವಾರು ವ್ಯತ್ಯಾಸಗಳಿಂದ ನಮ್ಮ ಶಿಶುವಿಹಾರಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿಗೆ ಬೇಕಾದ ಏರ್ಪಾಡುಗಳಿಲ್ಲ. ಇವಕ್ಕೆ ಮಕ್ಕಳು ತಮ್ಮ ತಮ್ಮ ಮನೆಗಳಿಗೆ ಹೋಗಬೇಕು. ಆದುದರಿಂದ ಇಲ್ಲಿನ ಶಿಶುವಿಹಾರಗಳು ಸಾಮಾನ್ಯವಾಗಿ ಬೆಳಗ್ಗೆ ೮ ರಿಂದ ೧೦-೩೦ ಘಂಟೆಯವರೆಗೆ, ಪುನಃ ಮಧ್ಯಾಹ್ನ ೩ ರಿಂದ ೫ ಘಂಟೆಯವರೆಗೆ—ಹೀಗೆ ಎರಡುವೇಳೆಗಳಲ್ಲಿ ಕೆಲಸಮಾಡುತ್ತವೆ. ಕೆಲವು ಶಿಶುವಿಹಾರಗಳಲ್ಲಿ ಬೆಳಗ್ಗೆ ಸುಮಾರು ೯-೩೦ ಘಂಟೆ ಹೊತ್ತಿಗೆ ಮಕ್ಕಳಿಗೆ ಹಾಲು, ಬಿಸ್ಕತ್ ಕೊಡುತ್ತಾರೆ. ಇಲಾಖೆಯವರು ಪ್ರಕಟಿಸಿರುವ ವರದಿಯಲ್ಲಿ ಬಡಜನರಿಗಾಗಿಯೇ ಸ್ಥಾಪಿತವಾದ ಶಾಲೆಗಳಲ್ಲಿ ಮಕ್ಕಳ ಮಧ್ಯಾಹ್ನದ ಊಟಕ್ಕೂ ವಿಶ್ರಾಂತಿಗೂ ಏರ್ಪಾಟುಮಾಡುವುದು ಅತ್ಯಾವಶ್ಯಕ ಎಂದು ತಿಳಿಸಿದ್ದಾರೆ. ಈ ಬದಲಾವಣೆಗಳ ಹೊರತು ಉಳಿದ ವಿಷಯಗಳಲ್ಲಿ ನಮ್ಮ ದೇಶದ ಶಿಶುವಿಹಾರಗಳಲ್ಲಿ ನಡೆಯುವ ಕೆಲಸಗಳು ಬಹಳಮಟ್ಟಿಗೆ ಪಾಶ್ಚಾತ್ಯದೇಶಗಳ ಶಿಶುಶಾಲೆಗಳ ಕೆಲಸಗಳನ್ನೇ ಹೋಲುತ್ತವೆ.

ಆದರೆ ನಮ್ಮ ಶಿಶುವಿಹಾರಗಳ ಸಾಮಾನು ಸಲಕರಣೆಗಳ ವಿಷಯದಲ್ಲಿ ಒಂದೆರಡು ಮಾತಾಡಬೇಕಾಗಿದೆ. ನಮ್ಮದು ಬಡವರ ದೇಶ; ಆದುದರಿಂದ ನಮ್ಮ ಶಿಶುವಿಹಾರಗಳಲ್ಲಿ ಆಟದ ಸಾಮಾನುಗಳೂ ಇತರ ಸಲಕರಣೆಗಳೂ ಅಷ್ಟು ಹೇರಳವಾಗಿಯಾಗಲಿ ಅಷ್ಟು ಬೆಲೆಬಾಳುವುವಾಗಲಿ ಇಲ್ಲ. ಹಾಗೆ ಹೆಚ್ಚು ಬೆಲೆಯುಳ್ಳ ಸಲಕರಣೆಗಳ ಆವಶ್ಯಕತೆಯೂ ಅಷ್ಟಾಗಿ ಕಾಣುವುದಿಲ್ಲ. ಮುಖ್ಯವಾಗಿ ಬೇಕಾಗಿರುವುದೇನೆಂದರೆ, ಮಕ್ಕಳು ಸ್ವತಂತ್ರವಾಗಿ ಆಟವಾಡುವುದಕ್ಕೂ, ರಚನೆಯ ಕೆಲಸಗಳನ್ನು ಮಾಡುವುದಕ್ಕೂ ಬೇಕಾದ ಸಾಮಾನುಗಳನ್ನು ಒದಗಿಸುವುದು. ಇದನ್ನು ಹೆಚ್ಚು ಖರ್ಚಿಲ್ಲದೆಯೇ ಮಾಡಬಹುದು. ಉದಾಹರಣೆಗಾಗಿ, ಹಳೆಯ ಮೋಟಾರುಟೈರುಗಳಿಂದ ಉಯ್ಯಾಲೆ



ಹಳೆಯ ಮೋಟಾರು ಟೈರನ್ನು ಆಟಕ್ಕಾಗಿ ಉಪಯೋಗಿಸುವುದು

ಕಟ್ಟಬಹುದು, ಅದೇ ಟೈರುಗಳನ್ನು ಓಡಿಸಿ ಆಟದ ಸಾಮಾನಾಗಿ ಉಪಯೋಗಿಸಬಹುದು. ಮಾಸಪತ್ರಿಕೆಗಳಿಂದ ಕತ್ತರಿಸಿದ ಚಿತ್ರಗಳನ್ನೂ ಹಳೆಯ ಸ್ಟಾಂಪುಗಳನ್ನೂ ಬೇರೆ ಪುಸ್ತಕದಲ್ಲಿ ಮಕ್ಕಳು ಅಂಟಿಸ ಬಹುದು. ಕಡಮೆಯ ಬೆಲೆಗೆ ಸಿಕ್ಕುವ ಕರಡುಕಾಗದಗಳಲ್ಲಿ ಬಣ್ಣಬಣ್ಣದ ಸೀಮೆಸುಣ್ಣದಿಂದ(Crayon) ಚಿತ್ರಗಳನ್ನು ಬರೆಸಬಹುದು. ಸಾಧಾರಣವಾದ ವೃತ್ತಾಂತಪತ್ರಿಕೆಗಳನ್ನೂ, ಖಾಲಿ ಸಿಗರೇಟುಪೆಟ್ಟಿಗೆಗಳನ್ನೂ, ಸಣ್ಣ ರಟ್ಟುಗಳನ್ನೂ ಕಾಗದ ಮಡಿಸುವುದು, ರಟ್ಟಿನ ಕೆಲಸ—ಇವುಗಳಿಗೆ ಉಪಯೋಗಿಸ ಬಹುದು. ಹಳೆಯ ಡಬ್ಬಿಗಳೂ ಅವುಗಳ ಮುಚ್ಚಳಗಳೂ, ಹುಣಿಸೆಬೀಜಗಳೂ, ಗಾಜಿನ ಕೊಳವೆ ತುಂಡುಗಳೂ ಶಿಶುವಿಹಾರದಲ್ಲಿ ಅನೇಕ ರಚನೆಯ ಕೆಲಸಗಳಿಗೆ ಉಪಯೋಗವಾಗುತ್ತವೆ. ಮರದ ಸಣ್ಣ ಸಣ್ಣ ತುಂಡುಗಳನ್ನೂ ಪಟ್ಟಿಗಳನ್ನೂ ಸ್ಥಳೀಯ ಮರಗೆಲಸದವರಿಂದ ಸುಲಭವಾಗಿ ಮಾಡಿಸಬಹುದು. ಅಲ್ಲದೆ ಪಾಶ್ಚಾತ್ಯದೇಶಗಳಲ್ಲಿರುವಂತೆ ನಮ್ಮ ಶಿಶುವಿಹಾರಗಳಲ್ಲಿ ಬಹಳ ಬೆಲೆಯುಳ್ಳ ಮೇಜು ಕುರ್ಚಿಗಳು ಅನಾವಶ್ಯಕ. ಮಕ್ಕಳು ಒಬ್ಬೊಬ್ಬರೇ ಕುಳಿತುಕೊಳ್ಳಬಹುದಾದ ಚಿಕ್ಕ ಚಿಕ್ಕ ಚಾಪೆಗಳು ಅಥವಾ ಮಣೆಗಳು ಸಾಕು. ವಿಧವಿಧವಾದ ಚಿತ್ರಗಳಿಂದಲೂ, ಬಣ್ಣಗಳಿಂದಲೂ ಕೂಡಿದ್ದರೆ ಈ ಚಾಪೆಗಳೇ ಮಕ್ಕಳ ಮನಸ್ಸನ್ನು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ. ಶಾಲೆಯಲ್ಲಿಯೇ ಪ್ರಾಣಿಗಳನ್ನು ಸಾಕುವುದೂ, ತೋಟದ ಕೆಲಸವನ್ನು ಮಾಡಿಸುವುದೂ ಸಾಧ್ಯವಿಲ್ಲದ ಪಕ್ಷದಲ್ಲಿ, ಮಕ್ಕಳನ್ನು ವಾರಕ್ಕೊಂದಾವರ್ತಿಯಾದರೂ ಹೊಲ, ಗದ್ದೆ, ತೋಟಗಳಿಗಾಗಲಿ, ಮೃಗಶಾಲೆ, ಚಿತ್ರಶಾಲೆ, ಲಾಲ್‌ಬಾಗ್, ಎಗ್ಜಿಬಿಷನ್—ಇವುಗಳಿಗಾಗಲಿ ಕರೆದುಕೊಂಡುಹೋಗಿ ಅವರು

ಪ್ರಕೃತಿಸೌಂದರ್ಯವನ್ನು ನೋಡಿ ಸಂತೋಷಪಡಲು ಮತ್ತು ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಒಟ್ಟಿನಲ್ಲಿ ಸಣ್ಣಮಕ್ಕಳ ಶಿಕ್ಷಣದ ಮುಖ್ಯ ತತ್ವಗಳನ್ನೂ ಕ್ರಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ದೇಶದ ಪರಿಸ್ಥಿತಿ, ಒದಗಬಹುದಾದ ದ್ರವ್ಯಸಹಾಯ—ಇವುಗಳಿಗೆ ತಕ್ಕಹಾಗೆ ನಮ್ಮ ಶಿಶುವಿಹಾರಗಳನ್ನು ರೂಪುಗೊಳಿಸಬೇಕು.

ಕಡೆಯದಾಗಿ ಉಪಾಧ್ಯಾಯರ ವಿಷಯವಾಗಿ ಒಂದೆರಡು ಮಾತುಗಳು. ಯಾವ ಶಿಕ್ಷಣ ಸಂಸ್ಥೆಯೇ ಆಗಲಿ, ಯಾವ ವಿದ್ಯಾಭ್ಯಾಸ ಕ್ರಮವೇ ಆಗಲಿ ಯಾವ ವಿದ್ಯಾತತ್ವವೇ ಆಗಲಿ ಎಲ್ಲಕ್ಕೂ ಉಪಾಧ್ಯಾಯರೇ ಮೂಲಾಧಾರ ಎಂಬ ಅಂಶವನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ಉಪಾಧ್ಯಾಯರಲ್ಲಿ ಉತ್ಸಾಹವೂ, ಮುತುವರ್ಜಿಯೂ, ಉತ್ತಮ ತೆರನಾದ ಸೇವಾ ಭಾವನೆಯೂ ಇರುವುದು ಅತ್ಯಂತ ಅವಶ್ಯಕ. ಶಿಶುವಿಹಾರಗಳ ಉಪಾಧ್ಯಾಯರ ವಿಷಯದಲ್ಲಂತೂ ಇದರ ಆಗತ್ಯ ಇನ್ನೂ ಹೆಚ್ಚು. ಪ್ರೀತಿವಿಶ್ವಾಸ ಉಲ್ಲಾಸ ತಾಳ್ಮೆ ಸಹಾನುಭೂತಿಗಳು ಚಿಕ್ಕಮಕ್ಕಳ ಉಪಾಧ್ಯಾಯರ ಜೀವನದ ತಿರುಳಾಗಿರಬೇಕು. ಸ್ತ್ರೀಯರೇ ಈ ಶಾಲೆಗಳಿಗೆ ಸರಿಯಾದ ಉಪಾಧ್ಯಾಯರು. ಅವರು ಎಸ್.ಎಸ್.ಎಲ್.ಸಿ ವರೆಗಾದರೂ ಓದಿದ್ದು ಮಕ್ಕಳ ಮನಶ್ಶಾಸ್ತ್ರದಲ್ಲಿ ತಕ್ಕಮಟ್ಟಿಗೆ ಪರಿಶ್ರಮವುಳ್ಳವರಾಗಿರಬೇಕು; ಶಿಶುವಿಹಾರದ ಕೆಲಸಗಳು ಸಮರ್ಪಕವಾಗಿರಬೇಕಾದರೆ ಅಲ್ಲಿಯ ಉಪಾಧ್ಯಾಯರು ಸದಾ ಸಂತೋಷಚಿತ್ತರಾಗಿ ಪ್ರೀತಿಯಿಂದಲೂ ತಾಳ್ಮೆಯಿಂದಲೂ ವರ್ತಿಸಬೇಕು. ಅವರ ಮನಸ್ಸು ಕ್ಲೇಶರಹಿತವಾಗಿರಬೇಕು. ಇದಕ್ಕೆ ಅವರ ಆರ್ಥಿಕ ಸ್ಥಿತಿ ಸ್ವಲ್ಪಮಟ್ಟಿಗಾದರೂ ಉತ್ತಮವಾಗಿರಬೇಕು. ಅವರ ವೇತನ ಕನಿಷ್ಠಪಕ್ಷ



ಸ್ತ್ರೀಯರೇ ಈ ಶಾಲೆಗಳಿಗೆ ಸರಿಯಾದ ಉಪಾಧ್ಯಾಯರು.

೨೫-೩೦ ರೂ. ಗಳಾದರೂ ಇರಬೇಕು. ಅಲ್ಲದೆ ಶಾಲೆಯ ಕೆಲಸ ಗಳನ್ನು ನಡೆಸಲು ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯವಿರ ಬೇಕು. ಏಕೆಂದರೆ, ಶಾಲೆಯ ಶಿಕ್ಷಕರಿಗೆ ಸ್ವಾತಂತ್ರ್ಯವಿಲ್ಲದಿದ್ದರೆ ಅಲ್ಲಿಯ ಮಕ್ಕಳಿಗೆ ಸ್ವಾತಂತ್ರ್ಯವೆಲ್ಲಿಯದು ?

---

## ೮. ಉಪಸಂಹಾರ.

ಪಾಶ್ಚಾತ್ಯ ದೇಶಗಳ ಶಿಶುವಿಹಾರಗಳ ಚರಿತ್ರೆಯಿಂದಲೂ, ನಮ್ಮ ದೇಶದಲ್ಲಿ ಅವುಗಳ ಬೆಳವಣಿಗೆಯ ಪ್ರಾರಂಭದಿಂದಲೂ ನಮಗೆ ಮುಖ್ಯವಾದ ಒಂದು ವಿಷಯ ತಿಳಿದು ಬರುತ್ತದೆ. ಶಿಶುವಿಹಾರಗಳು ಅಭಿವೃದ್ಧಿಗೆ ಬರಬೇಕಾದರೆ ಸಾರ್ವಜನಿಕ ಸಹಾಯ ಅತ್ಯಗತ್ಯ ಎಂಬುದೇ ಆ ವಿಷಯ. ಸರ್ಕಾರದವರೇ ಈ ವಿಧವಾದ ಮಕ್ಕಳ ಶಾಲೆಗಳನ್ನೂ ಸ್ಥಾಪಿಸಲಿ ಎಂದರೆ ಅದು ಸಾಧ್ಯವಿಲ್ಲದ ಮಾತು. ವಿದ್ಯಾ ಇಲಾಖೆಯವರೇನೋ ತಮಗೆ ಸಾಧ್ಯವಾದ ಮಟ್ಟಿಗೆ ಶಿಶುವಿಹಾರಗಳ ಬೆಳವಣಿಗೆಗೆ ಉತ್ತೇಜನ ಕೊಡಬೇಕು. ತಾವೇ ಕೆಲವು ಶಿಶುವಿಹಾರಗಳನ್ನು ಸ್ಥಾಪಿಸ ಬೇಕು; ಸಾರ್ವಜನಿಕರಿಂದ ಸ್ಥಾಪಿತವಾದ ಶಿಶುವಿಹಾರಗಳಿಗೆ ತಕ್ಕಮಟ್ಟಿಗೆ ದ್ರವ್ಯಸಹಾಯ (Grant) ಮಾಡಬೇಕು; ಅಲ್ಲದೆ ಶಿಶುವಿಹಾರಗಳಿಗೆ ಸರಿಯಾದ ಉಪಾಧ್ಯಾಯರನ್ನು ತರಪೇತು ಮಾಡಬೇಕು. ಇಷ್ಟಾದರೂ ಇಲಾಖೆಯ ಈ ಪ್ರಯತ್ನಗ ಳೊಂದಿಗೆ ಸಾರ್ವಜನಿಕರ ಆಸಕ್ತಿಯೂ ಹೆಚ್ಚಬೇಕು. ಧಾರ್ಮಿಕಬುದ್ಧಿಯುಳ್ಳವರೂ ಉದಾರಿಗಳೂ ಆದ ಐಶ್ವರ್ಯ ವಂತರು ಮುಂದೆ ಬಂದು ಶಿಶುವಿಹಾರಗಳನ್ನು ಸ್ಥಾಪಿಸುವುದು ದೇಶದ ಪ್ರಗತಿಗೆ ಬಹಳ ಅಗತ್ಯ. ಈಗ ನಮ್ಮ ದೇಶದ ಅನೇಕ

ಉದಾರಿಗಳು ಆಸ್ಪತ್ರೆ, ಸ್ಕೂಲು, ಛತ್ರ, ದೇವಸ್ಥಾನ, ಪಶು ವೈದ್ಯಶಾಲೆ ಮುಂತಾದ ಜನೋಪಯೋಗ ಸಂಸ್ಥೆಗಳಿಗೆ ದ್ರವ್ಯ ಸಹಾಯಮಾಡಿಲ್ಲವೆ? ಅದೇ ರೀತಿಯಲ್ಲಿ ಶಿಶುವಿಹಾರಗಳಿಗೂ ಧಾರ್ಮಿಕರ ಮತ್ತು ಸಾರ್ವಜನಿಕರ ಸಹಾಯ ಸಹಾನುಭೂತಿ ಗಳು ಆವಶ್ಯಕವೆಂದರೆ ಅತಿಶಯೋಕ್ತಿಯಾಗಲಾರದು. ಒಂದು ದೃಷ್ಟಿಯಿಂದ ನೋಡಿದರೆ ಮಕ್ಕಳ ಆಸ್ಪತ್ರೆಗಳಿಗೆ ಹಣ ಒದಗಿಸುವುದಕ್ಕಿಂತ ಶಿಶುವಿಹಾರಗಳ ಸ್ಥಾಪನೆಗೆ ಸಹಾಯ ಮಾಡುವುದು ಹೆಚ್ಚು ಫಲಕಾರಿ. ಏಕೆಂದರೆ ಆಸ್ಪತ್ರೆಗಳಲ್ಲಿ ಕಾಯಿಲೆ ಬಂದ ಮೇಲೆ ಚಿಕಿತ್ಸೆ ನಡೆಸಿ ವಾಸಿಮಾಡುತ್ತಾರೆ. ಆದರೆ ಶಿಶುವಿಹಾರಗಳಲ್ಲಿ ಶಿಕ್ಷಣಹೊಂದುವ ಮಕ್ಕಳಿಗೆ ಕಾಯಿಲೆ ಬಾರದ ಹಾಗೆ ನೋಡಿಕೊಂಡು ಅವರು ದೃಢಕಾಯರಾಗಿದ್ದು ಸಂತೋಷಚಿತ್ತರಾಗಿ ಬೆಳೆಯಲು ಹದವಾದ ಸನ್ನಿವೇಶ ಗಳಿರುತ್ತವೆ. ಆದುದರಿಂದ ನಮ್ಮ ದೇಶದ ನಾನಾ ಊರು ಗಳಲ್ಲಿಯೂ ಪಟ್ಟಣಗಳಲ್ಲಿಯೂ ಸ್ಥಾಪಿತವಾಗಿರುವ ಮತ್ತು ಸ್ಥಾಪಿತವಾಗಲಿರುವ ಸ್ತ್ರೀಸಮಾಜಗಳೂ, ಕರ್ನಾಟಕ ಸಂಘ ಗಳೂ, ಉಪಾಧ್ಯಾಯರ ಸಂಸ್ಥೆಗಳೂ, ಸಹಕಾರಸಂಘಗಳೂ, ಕಾರ್ಖಾನೆಗಳೂ, ಮಠಗಳೂ ಇನ್ನೂ ಇತರ ಸಾರ್ವ ಜನಿಕ ಸಂಸ್ಥೆಗಳೂ, ಸಮಾಜಸುಧಾರಕರೂ ಈ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಿ ಧಾರ್ಮಿಕರೂ ಉದಾರಿಗಳೂ ಆದ ಸ್ಥಳೀಯ ಮಹಾಜನಗಳ ಬೆಂಬಲ ಸಹಾನುಭೂತಿಗಳಿಂದ ಶಿಶು ವಿಹಾರಗಳನ್ನು ಸ್ಥಾಪಿಸಲು ಪ್ರಯತ್ನಿಸಬೇಕು. ಇದರಿಂದ ಶಿಕ್ಷ ಣದ ಹೊಸ ಯುಗವೇ ಪ್ರಾರಂಭವಾಗಿ ವಿದ್ಯಾಭ್ಯಾಸದ ಪೂರ್ಣ ಫಲವು ದೊರೆಯುವುದರಲ್ಲಿ ಸಂದೇಹವಿಲ್ಲ.